ಡಾ. ಎಸ್.ಎಲ್.ಭೈರಪ್ಪನವರ ಪರ್ವ:
ಒಂದು ಅಧ್ಯಯನ

(ಕನ್ನಡ ಎಂ.ಫಿಲ್. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಿರುವ ಸಂಶೋಧನಾ ನಿಬಂಧ)

ಸಂಶೋಧಕರು
ವೀಣಾಬಾಯಿ.ಎಸ್
ನೋಂದಣಿ ಸಂಖ್ಯೆ: 15120130071

ಮಾರ್ಗದರ್ಶಕರು
ಡಾ. ಲಿಂಗರಾಜಯ್ಯ
ಸಹ ಪ್ರಾಧ್ಯಾಪಕರು
ವಿವೇಕಾನಂದ ಪದವಿ ಕಾಲೇಜು
ರಾಜಾಜಿನಗರ, ಬೆಂಗಳೂರು-560055

ಕರ್ನಾಟಕ ಸಂಘ (ರಿ), ಮಂಡ್ಯ
ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
(ಕನ್ನಡ ವಿ.ವಿ. ಹಂಪಿ ಮಾನ್ಯತಾ ಸಂಸ್ಥೆ)
2016

ಡಾ. ಎಸ್.ಎಲ್.ಭೈರಪ್ಪನವರ ಪರ್ವ: ಒಂದು ಅಧ್ಯಯನ

(ಕನ್ನಡ ಎಂ.ಫಿಲ್. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಿರುವ ಸಂಶೋಧನಾ ನಿಬಂಧ)

ಸಂಶೋಧಕರು
ವೀಣಾಬಾಯಿ.ಎಸ್
ನೋಂದಣಿ ಸಂಖ್ಯೆ: 15120130071

ಮಾರ್ಗದರ್ಶಕರು
ಡಾ. ಅಂಗರಾಜಯ್ಯ
ಸಹ ಪ್ರಾಧ್ಯಾಪಕರು
ವಿವೇಕಾನಂದ ಪದವಿ ಕಾಲೇಜು
ರಾಜಾಜಿನಗರ, ಬೆಂಗಳೂರು-560055

ಕರ್ನಾಟಕ ಸಂಘ (ರಿ), ಮಂಡ್ಯ
ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
(ಕನ್ನಡ ವಿ.ವಿ. ಹಂಪಿ ಮಾನ್ಯತಾ ಸಂಸ್ಥೆ)
2016

ಮಾರ್ಗದರ್ಶಕರ ದೃಢೀಕರಣ ಪತ್ರ

2015-16ನೇ ಸಾಲಿನಲ್ಲಿ ವೀಣಾಬಾಯಿ.ಎಸ್ ಎಂಬ ಎಂ.ಫಿಲ್. ವಿದ್ಯಾರ್ಥಿಯು ಐದನೇ ಪತ್ರಿಕೆಯ ಪರೀಕ್ಷೆಯ ಅಂಗವಾಗಿ "ಡಾ.ಎಸ್.ಎಲ್.ಭೈರಪ್ಪನವರ ಪರ್ವ; ಒಂದು ಅಧ್ಯಯನ" ಎಂಬ ವಿಷಯ ಕುರಿತು ನನ್ನ ಮಾರ್ಗದರ್ಶನದಲ್ಲಿ ಸಂಶೋಧನ ನಿಬಂಧವನ್ನು ಸಿದ್ಧಪಡಿಸಿರುತ್ತಾರೆ. ಇದನ್ನು ಇವರು ಮೊದಲು ಯಾವುದೇ ಪದವಿ, ಡಿಪ್ಲೋಮ ಅಧ್ಯಯನಕ್ಕಾಗಲೀ, ಯಾವುದೇ ವಿಶ್ವವಿದ್ಯಾಲಯಕ್ಕಾಗಲಿ ಸಲ್ಲಿಸಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ಬೆಂಗಳೂರು

ದಿನಾಂಕ: 5/8/2016

ಮಾರ್ಗದರ್ಶಕರು

Dr. Lingarajaiah
Associate Professor & HOD
Department of Kannada
Vivekananda Degree College
Rajajinagar, Bangalore - 560 055

ಸಂಶೋಧಕರ ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘದ ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ 2015-16ನೇ ಸಾಲಿನಲ್ಲಿ ಕನ್ನಡ ಎಂ.ಫಿಲ್. ಅಧ್ಯಯನದ ಅಂಗವಾಗಿ ಸಂಶೋಧನಾ ನಿಬಂಧ ರಚಿಸಲು "ಡಾ.ಎಸ್.ಎಲ್.ಭೈರಪ್ಪರವರ ಪರ್ವ: ಒಂದು ಅಧ್ಯಯನ" ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು, ಡಾ.ಲಿಂಗರಾಜಯ್ಯ ರವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವನ್ನಾಗಲೀ, ನಿಬಂಧದ ಯಾವುದೇ ಅಧ್ಯಾಯವನ್ನಾಗಲೀ, ಬೇರೆ ಯಾವ ಗ್ರಂಥ ಅಥವಾ ನಿಯತಕಾಲಿಕೆಗಳಲ್ಲಿ ಪ್ರಕಟಿಸಿರುವುದಿಲ್ಲ ಮತ್ತು ಕನ್ನಡ ವಿಶ್ವವಿದ್ಯಾಲಯವು ನೀಡುವ ಕನ್ನಡ ಎಂ.ಫಿಲ್. ಪದವಿಗಾಗಿ ಈ ನಿಬಂಧವನ್ನು ಒಪ್ಪಿಸುತ್ತಿದ್ದೇನೆ.

ಸಂಶೋಧನಾ ವಿದ್ಯಾರ್ಥಿ

Veenabai. S

ಸ್ಥಳ: ಮಂಡ್ಯ

ದಿನಾಂಕ: 5/8/2016

ನೋಂದಣಿ ಸಂಖ್ಯೆ:151201030071
ಕರ್ನಾಟಕ ಸಂಘ (ರಿ)
ಮಂಡ್ಯ.

ಡಾ. ಎಸ್.ಎಲ್.ಭೈರಪ್ಪನವರ ಪರ್ವ: ಒಂದು ಅಧ್ಯಯನ

ಪರಿವಿಡಿ

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ ಹಾಗೂ ಪ್ರವೇಶ

ಕನ್ನಡ ಎಂ.ಫಿಲ್. ಪದವಿಗಾಗಿ ನಡೆಸುತ್ತಿರುವ ಅಧ್ಯಯನದ ಅಂಗವಾಗಿ ರಚಿಸಬೇಕಾಗಿರುವ ಸಂಶೋಧನಾ ನಿಬಂಧಕ್ಕೆ ವಿಷಯವಾಗಿ ಕನ್ನಡ ಸಾಹಿತ್ಯಲೋಕ ಕಂಡ ಸೃಜನಶೀಲ ಬರಹಗಾರರಾದ ಡಾ. ಎಸ್.ಎಲ್.ಭೈರಪ್ಪನವರ "ಪರ್ವ" ಕಾದಂಬರಿಯನ್ನು ಆಯ್ಕೆ ಮಾಡಿಕೊಂಡು, ಇದು ಮೂಲಭಾರತಕ್ಕಿಂತ ಹೇಗೆ ಭಿನ್ನವಾಗಿದೆ ಎಂಬುದನ್ನು ಅಧ್ಯಯನ ಮಾಡುವ ಉದ್ದೇಶ ಹೊಂದಿದೆ. ಪರ್ವ ವ್ಯಾಸ ಮಹರ್ಷಿಗಳ ಮಹಾಭಾರತವನ್ನು ಆಧಾರವಾಗಿಟ್ಟುಕೊಂಡು ರಚಿತವಾಗಿರುವ ಕಾದಂಬರಿ ಭೈರಪ್ಪನವರು ಕಾವ್ಯ ಇತಿಹಾಸ ಪುರಾಣಗಳ ಮಿಶ್ರಣವಾದ ಪ್ರಾಚೀನ ಮಹಾಕೃತಿಯೊಂದನ್ನು ಆಧುನಿಕ ಸಾಹಿತ್ಯ ಪ್ರಕಾರವಾದ ಕಾದಂಬರಿಯನ್ನಾಗಿ ನಿರ್ಮಿಸಿದ್ದಾರೆ. ಲೇಖಕರು ಮೂಲಭಾರತದಲ್ಲಿನ ಅಲೌಕಿಕ ಅಂಶಗಳಿಂದ ಪಾರಾಗಿ, ಸಾಮಾನ್ಯರನ್ನೂ, ಅಸಾಮಾನ್ಯರನ್ನು ಒಂದೇ ದೃಷ್ಟಿಯಿಂದ ನೋಡಿ, ಆದರ್ಶ ವಾಸ್ತವತೆಗಳನ್ನು ಮೇಳವಿಸಿ ಯಾವುದೋ ಕಾಲದ ವ್ಯಕ್ತಿ ಸಂಗತಿಗಳು ನಮ್ಮ ಕಾಲದವಾಗಿ, ನಮಗೆ ತೀರ ಹತ್ತಿರದವರನ್ನಾಗಿ ಮಾರ್ಪಡಿಸಿ ಕಾದಂಬರಿಯನ್ನು ರಚಿಸಿದ್ದಾರೆ.

ಭೈರಪ್ಪನವರು ಮಹಾಭಾರತದ ಕಥೆಯ ವಾಸ್ತವತೆಯ ಬಗೆಗೆ ಅಧ್ಯಯನ, ಸಂಶೋಧನೆಗಳನ್ನು ಕೈಗೊಂಡು, ಹಿಮಾಲಯ ಪರ್ವತದ ಕೆಲವು ಭಾಗಗಳಲ್ಲಿ ಪ್ರವಾಸವನ್ನು ಮಾಡಿ, ಮೂಲ ಭಾರತದಲ್ಲಿರುವ 'ಮಿಥ್' ಗಳನ್ನು ತೆಗೆದುಹಾಕಿ, ವಾಸ್ತವವಾದ ಸಂಗತಿಗಳನ್ನು ಪರ್ವದಲ್ಲಿ ಚಿತ್ರಿಸಿದ್ದಾರೆ. ಮಹಾಭಾರತದಲ್ಲಿ ದೈವಿಕ ಶಕ್ತಿ ಹೆಚ್ಚಾಗಿದ್ದು, 'ಮಾನವತೆ'ಯು ಗೌಣವಾಗಿದೆ. ಆದರೆ ಪರ್ವತವು ಗೌಣವಾಗುವ ಮಾನವತೆಯನ್ನೇ ಗಟ್ಟಿ ಮಾಡಿ, ಅದಕ್ಕೆ ಅಡ್ಡಿಯಾಗುವ ಲೌಕಿಕ ಅಂಶಗಳನ್ನು ನಿವಾರಿಸಲಾಗಿದೆ. ಪರ್ವದಲ್ಲಿ ಆರ್ಯರು ಕೇಂದ್ರವಾಗಿ ಅನಾರ್ಯರು, ರಾಕ್ಷಸರು ಮತ್ತು ಇತರರು ಸೇರಿದ ಒಂದು ವಿಶಿಷ್ಟ ಸಂದರ್ಭದ ಆರ್ಯ ಪದ್ಧತಿಯಿಂದ 'ನಿಯೋಗ'ವು ಧರ್ಮವಾಗಿದ್ದರು, ಸಹ ಒಂದು ನ್ಯಾಯ ಅನ್ಯಾಯದ ಅಥವಾ ಸಹಜ ಅಸಹಜತೆಗಳ ಸಮಸ್ಯೆಯಾಗುತ್ತದೆ. ದುರ್ಯೋಧನ ಪಾಂಡವರನ್ನು ಕುರಿತು 'ಆ ಐದು ಜನ ಅಪ್ಪನ ಬೀಜಕ್ಕೆ ಹುಟ್ಟಲೇ ಇಲ್ಲ'ಎಂಬ ಮಾತಿನಿಂದ ಸ್ವತಃ 'ನಿಯೋಗ'ವನ್ನು ಒಪ್ಪಿಕೊಂಡು, ತನ್ನ ವಂಶಾಭಿವೃದ್ಧಿಯನ್ನು ಸಾಧಿಸಿದ ಭೀಷ್ಮರಲ್ಲಿ ಗೊಂದಲ ಉಂಟು ಮಾಡಿ, ತನ್ನ ಗೊಂದಲ ನಿವಾರಿಸಿಕೊಳ್ಳಲು ವ್ಯಾಸರ ಬಳಿಗೆ ಹೋಗಿ 'ನಿಯೋಗ ಸಂತಾನವು ನ್ಯಾಯವಾದುದೆ' ಎಂದು ಪ್ರಶ್ನಿಸುತ್ತಾನೆ. ಅದಕ್ಕೆ ಉತ್ತರವಾಗಿ ವ್ಯಾಸರು "ಒಂದು ಕಾಲದಲ್ಲಿ ನಿಯೋಗವು ಧರ್ಮವೇ ಎಂಬ ಖಚಿತ ವಿಶ್ವಾಸವಿದ್ದ ನಿನಗೆ ಈ ಕ್ಷಣದಲ್ಲಿ ನನ್ನನ್ನು ಕೇಳಿ ಪರಿಹರಿಸಿಕೊಳ್ಳಬೇಕೆನ್ನುವಷ್ಟಾದರೂ ಅನುಮಾನ ಏಕೆ ಬಂತು? ಉಳಿದವರ ವಿಚಾರ ಹೋಗಲಿ ನಿನ್ನ ಮನಸ್ಸಿನ ಮಾತು ಹೇಳು"ಎನ್ನುತ್ತಾರೆ.

ಸಂತಾನಾಭಿವೃದ್ಧಿಗಾಗಿ ಆರ್ಯರಲ್ಲಿ ರೂಢಿಯಿದ್ದ 'ನಿಯೋಗ' ಪದ್ಧತಿ ಧರ್ಮ ಬಾಹಿರವಾಗಿಲ್ಲದಿದ್ದರೂ, ಪರ್ವದಲ್ಲಿ ಅದೇ ಒಂದು ಮಹತ್ವದ ಧರ್ಮಸಂಕಟವಾಗಿ 'ಕುರುಕ್ಷೇತ್ರ' ಯುದ್ಧಕ್ಕೆ ಬುನಾದಿಯಾಗಿದೆ. ಪರ್ವದಲ್ಲಿ ಭೂಮಿ ಮತ್ತು ಹೆಣ್ಣಿಗಾಗಿ ಆರ್ಯ-ಆರ್ಯೇತರ ಪದ್ಧತಿಗಳ ನೆಪ ಮಾಡಿಕೊಂಡು ನಡೆದ ಹೋರಾಟದ ಬದುಕಿನ ಚಿತ್ರಣವಿದೆ. ಭೈರಪ್ಪನವರು ಪರ್ವದ ಬಗ್ಗೆ "ಇಡೀ

ಆರ್ಯ ಜನಾಂಗ ಹಾಗೆಯೇ ಅವರ ಸಂಪರ್ಕಕ್ಕೆ ಬಂದ ಆರ್ಯೇತರ ಜನಾಂಗದ ಜೀವನ ಮತ್ತು ಸ್ವಭಾವವನ್ನು ಸೂಚಿಸುವ ಯುದ್ಧವಾಗಬೇಕು. ನನ್ನ ಬರವಣಿಗೆಯಲ್ಲಿ" ಎಂದು ಹೇಳಿದ್ದಾರೆ.

ಭೈರಪ್ಪನವರು ಮೂಲಭಾರತದ ವಸ್ತುವನ್ನು ತೆಗೆದುಕೊಂಡು ಪರ್ವವನ್ನು ಹೇಗೆ ಭಿನ್ನವಾಗಿ ರಚಿಸಿದ್ದಾರೆ, ಎಂಬುದರ ಜೊತೆಗೆ 'ಪರ್ವ'ದ ವಸ್ತುವಿನ್ಯಾಸ, ಪಾತ್ರಚಿತ್ರಣ, ವಾಸ್ತವತೆಯ ಚಿತ್ರಣ, ಹುಟ್ಟು ಮತ್ತು ಸಾವಿನ ತಾತ್ತ್ವಿಕ ಸ್ವರೂಪ, ಲೇಖಕರು ಬಳಸಿದ ಭಾಷೆ, ಶೈಲಿ, ತಂತ್ರ, ಕಥಾನಿರೂಪಣೆ, ಸಮಾಜಕ್ಕೆ ಕೊಡಬಯಸುವ ಸಂದೇಶಗಳು, ಕಾದಂಬರಿ ಬೆಳವಣಿಗೆ ಪಡೆದುಕೊಳ್ಳುವ ತಿರುವುಗಳ ಬಗ್ಗೆ ತಿಳಿಯಬಹುದು. ಹುಟ್ಟು ಮತ್ತು ಸಾವಿನ ಚಿತ್ರಣ ಇವೆರಡು ಬದುಕಿನ ನೆಲೆಗಳಾಗಿದ್ದು, ಒಂದು ಅಮೂರ್ತ ಮತ್ತೊಂದು ಮೂರ್ತವಾಗಿದೆ. 'ಪರ್ವ'ದಲ್ಲಿ ಭೂಮಿ/ರಾಜ್ಯಕ್ಕಾಗಿ ತಮ್ಮ ಪಿತ್ರಾರ್ಜಿತ ಆಸ್ತಿಯ ಪಾಲಿಗಾಗಿ ಪಾಂಡವರು ಹಾಗೂ ಕೌರವರ ನಡುವೆ ಯುದ್ಧ ನಡೆದು ಕೊನೆಯಲ್ಲಿ ಯಾರಿಗೂ ವಿಜಯದ ಸಂಭ್ರಮಾಚರಣೆ ಮಾಡಲಾಗದ ಪರಿಸ್ಥಿತಿ ಉಂಟಾಗುತ್ತದೆ. ಇದರಿಂದ ಯಾವುದೂ ಶಾಶ್ವತವಲ್ಲ ಎಂಬ ನಿಲುವು ತಾಳಲು ಕಾರಣವಾಗಿದೆ. ಬದುಕು ಹೋರಾಟದಿಂದ ಕೂಡಿದೆ, ಕೆಲವೊಮ್ಮೆ ಯಶಸ್ಸನ್ನು ಕಾಣಬಹುದು, ಮತ್ತೊಮ್ಮೆ ಸೋಲನ್ನು ಅನುಭವಿಸಬಹುದು. ಕೊನೆಗೂ ಸಾವು ಖಚಿತವಾದದ್ದು, ಒಟ್ಟಾರೆಯಾಗಿ ಲೇಖಕರು 'ಪರ್ವ'ದಲ್ಲಿ ನಿರೂಪಿಸಿರುವ ಹುಟ್ಟು ಮತ್ತು ಸಾವಿನ ಸ್ವರೂಪ ಹಾಗೂ ಬದುಕಿನ ಚಿತ್ರಣದ ಬಗ್ಗೆ ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಿದೆ.

ಭೈರಪ್ಪನವರ ಸೃಜನಾತ್ಮಕ ಕಾದಂಬರಿ 'ಪರ್ವ'ವನ್ನು ಅನೇಕರು ಮೆಚ್ಚಿ ಸಂಪಾದಿತ ಅಭಿನಂದನಾ ಕೃತಿಗಳನ್ನು ಬಿಡುಗಡೆ ಮಾಡಿದ್ದಾರೆ ಹಾಗೂ ಅನೇಕರು ತಮ್ಮ ಅಧ್ಯಯನ ವಿಷಯವನ್ನಾಗಿ ತೆಗೆದುಕೊಂಡು ಸಂಶೋಧನೆ ಮಾಡಿದ್ದಾರೆ. 'ಪರ್ವ ಒಂದು ಸಮೀಕ್ಷೆ' ಎಂಬ ಶೀರ್ಷಿಕೆಯಲ್ಲಿ ವಿಜಯಾ ರವರು ಸಂಪಾದಿತ ಕೃತಿಯನ್ನು ಬಿಡುಗಡೆ ಮಾಡಿದ್ದಾರೆ. 'ಪರ್ವ' ವಾಸ್ತವಿಕ ಕಲ್ಪನೆಗಳು' ಎಂಬ ಶೀರ್ಷಿಕೆಯಲ್ಲಿ ಆರ್.ಎನ್.ದಿಂಡೂರ್ ರವರು ಕೃತಿ ರಚಿಸಿದ್ದಾರೆ ಹಾಗೂ ನಾಗರಾಜ್ ನೀರಗುಂದರವರು ಸಹ ತಮ್ಮ ಪಿ.ಹೆಚ್.ಡಿ. ಮಹಾಪ್ರಬಂಧ ವಿಷಯವಾಗಿ ಪರ್ವ ಕಾದಂಬರಿಯನ್ನೇ ಆಯ್ಕೆ ಮಾಡಿಕೊಂಡಿದ್ದಾರೆ. ಎಷ್ಟೇ ಸಂಶೋಧಕರು ಈ ವಿಷಯವನ್ನು ಆಯ್ಕೆ ಮಾಡಿಕೊಂಡು ಅಧ್ಯಯನವನ್ನು ಕೈಗೊಂಡರೂ ಸಹ ಮುಗಿಯದ ಅಗಾಧವಾದ ವಿಷಯವನ್ನೊಳಗೊಂಡ ಬೃಹತ್ ಕಾದಂಬರಿಯೇ ಪರ್ವ. ಆದ್ದರಿಂದ ಈ ವಿಷಯವನ್ನು ನಾನು ಸಹ ಸಂಶೋಧನಾ ನಿಬಂಧಕ್ಕಾಗಿ ಆಯ್ಕೆ ಮಾಡಿಕೊಂಡಿದ್ದೇನೆ. ಪರ್ವ ಕಾದಂಬರಿಯನ್ನು ಅಧ್ಯಯನ ಮಾಡಿ ವಿಶ್ಲೇಷಣಾತ್ಮಕ ಹಾಗೂ ತಾತ್ತ್ವಿಕ ನೆಲೆಯಲ್ಲಿ ಚರ್ಚೆ ಮಾಡಲಾಗಿದೆ.

ಅಧ್ಯಾಯ –1

ಲೇಖಕರ ಜೀವನ ಸಾಧನೆ

ಸಮಕಾಲೀನ ಭಾರತೀಯ ಸಾಹಿತ್ಯದಲ್ಲಿ ಕಾದಂಬರಿಕಾರರಾಗಿ ಡಾ.ಎಸ್.ಎಲ್.ಭೈರಪ್ಪನವರದ್ದು ಬಹಳ ದೊಡ್ಡ ಹೆಸರು. ಇವರು [(1)]"ದಿನಾಂಕ:26.07.1934 ರಲ್ಲಿ ಹಾಸನ ಜಿಲ್ಲೆಯ, ಚನ್ನರಾಯಪಟ್ಟಣ ತಾಲ್ಲೂಕಿನ 'ಸಂತೆಶಿವರ' ಎಂಬ ಹಳ್ಳಿಯಲ್ಲಿ ಜನಿಸಿದರು". ಇವರ ತಂದೆ ಶ್ಯಾನುಭೋಗರಾಗಿದ್ದ ಲಿಂಗಣ್ಣಯ್ಯನವರು ತಾಯಿ ಗೌರಮ್ಮನವರು. ಭೈರಪ್ಪನವರ ಪೂರ್ಣ ಹೆಸರು 'ಸಂತೆಶಿವರ ಲಿಂಗಣ್ಣಯ್ಯ ಭೈರಪ್ಪ'. ಇವರು ತಮ್ಮ ಹನ್ನೊಂದನೇ ವಯಸ್ಸಿನ ವೇಳೆಗೆ ಅಣ್ಣಂದಿರು, ಅಕ್ಕ ಹಾಗೂ ತಾಯಿಯನ್ನು ಕಳೆದುಕೊಂಡು ಸಾವಿನ ಬಗೆಗೆ ಗಂಭೀರವಾಗಿ ಚಿಂತಿಸತೊಡಗಿದರು. [(2)]"ಇವರು ಸಾಕಷ್ಟು ಬುದ್ಧಿವಂತರಗಿದ್ದು, ಎಸ್.ಎಸ್.ಎಲ್.ಸಿ (1952), ಇಂಟರ್ಮೀಡಿಯಟ್ (1954), ಬಿ.ಎ.ಆನರ್ಸ್ (1957), ಎಂ.ಎ (1958) ಪರೀಕ್ಷೆಗಳಲ್ಲಿ ತೇರ್ಗಡೆಯಾದರು". ಆನರ್ಸ್ ಮತ್ತು ಎಂ.ಎ ಪರೀಕ್ಷೆಗಳಲ್ಲಿ ಅವರು ಆಯ್ದುಕೊಂಡ ವಿಷಯ ತತ್ವಶಾಸ್ತ್ರವಾಗಿತ್ತು. ಆದ್ದರಿಂದಲೇ ಬರಿಯ ಸಾಹಿತ್ಯದ ವಿದ್ಯಾರ್ಥಿಗಿರದ ಒಂದು ಅಧ್ಯಯನದ ಬಲ ಅವರಿಗೆ ದೊರೆಯಿತು.

ಭೈರಪ್ಪನವರು 1958 ಡಿಸೆಂಬರ್‌ನಲ್ಲಿ ಸರಸ್ವತಿಯವರೊಂದಿಗೆ ವಿವಾಹವಾದರು. ಇವರಿಗೆ ರವಿಶಂಕರ್ ಹಾಗೂ ಉದಯಶಂಕರ್ ಎಂಬ ಇಬ್ಬರು ಪುತ್ರರಿದ್ದಾರೆ. ಭೈರಪ್ಪನವರು 1962 ರಲ್ಲಿ ತಮ್ಮ ತಂದೆಯಾದ ಲಿಂಗಣ್ಣಯ್ಯರವರನ್ನು ಕಳೆದುಕೊಂಡರು. ಇವರು ಎಂ.ಎ ಪದವಿ ಪಡೆದ ನಂತರ ಹುಬ್ಬಳ್ಳಿಯ ಕಾಲೇಜೊಂದರಲ್ಲಿ ಕೆಲಸ ಮಾಡಿದರು. ಅಲ್ಲಿಂದ ಅವರು ದೂರದ ಗುಜರಾತಿಗೆ ಹೋಗಿ, ಅಲ್ಲಿನ 'ಸರ್ದಾರ್ ವಲ್ಲಭಬಾಯ್ ಪಟೇಲ್ ವಿಶ್ವವಿದ್ಯಾನಿಲಯ' ದಲ್ಲಿ ತತ್ತ್ವಶಾಸ್ತ್ರದ ಅಧ್ಯಾಪಕರಾದರು. ನಂತರ 'ಬರೋಡಾದ ಮಹಾರಾಜಾ ಸಯಾಜಿರಾವ್ ವಿಶ್ವವಿದ್ಯಾನಿಲಯ' ದಲ್ಲಿ 'ಸತ್ಯ ಮತ್ತು ಸೌಂದರ್ಯ' ಎಂಬ ವಿಷಯ ಕುರಿತು ಪ್ರಬಂಧ ಸಿದ್ಧಮಾಡಿ ಪಿ.ಹೆಚ್.ಡಿ. ಪದವಿಯನ್ನು 1962 ರಲ್ಲಿ ಪಡೆದರು. ಮುಂದೆ ದೆಹಲಿಗೆ ಹೋಗಿ ತಮ್ಮ ತತ್ತ್ವಶಾಸ್ತ್ರ ಅಧ್ಯಾಪಕತ್ವವನ್ನು ಮುಂದುವರಿಸಿದರು. ಅಲ್ಲಿಂದ ಮೈಸೂರಿಗೆ ಬಂದು 'ರೀಜನಲ್ ಕಾಲೇಜ್ ಆಫ್ ಎಜುಕೇಷನ್'ನಲ್ಲಿ ನಿವೃತ್ತರಾಗುವವರೆಗೂ (1994) ಕೆಲಸ ಮಾಡಿದರು.

'ಬೆಳಕು ಮೂಡಿತು' (1959) ಎಂಬುದು ಭೈರಪ್ಪನವರ ಮೊದಲ ಕಾದಂಬರಿ ಅದಕ್ಕಿಂತ ಮೊದಲೇ 1955 ರಲ್ಲಿ ಅವರದೊಂದು ಕಥೆ 'ಗತಜನ್ಮ' ಪ್ರಸ್ತಕ ರೂಪದಲ್ಲಿ ಪ್ರಕಟವಾಗಿತ್ತು. ಅದೊಂದು ಹೃದಯ ಸ್ಪರ್ಶಿಯ ಕಥೆ, 28 ಪುಟಗಳ ಆ ಪುಸ್ತಕವೇ ಅವರ ಮೊದಲ ಪುಸ್ತಕ ಎನ್ನುವುದು ಸರಿ. ಇವರ

1. ಎಸ್.ಎಲ್.ಭೈರಪ್ಪ ಬದುಕು–ಬರಹ, ಪುಟ–9
2. ಭೈರಪ್ಪಾಭಿನಂದನ, ಪುಟ–11

ಎರಡನೆಯ ಕಾದಂಬರಿ 'ಭೀಮಕಾಯ'. ಇವುಗಳನ್ನು ತಮ್ಮ ಕೃತಿಗಳೆಂದು ಒಪ್ಪಿಕೊಳ್ಳಲು ಭೈರಪ್ಪ ಸಿದ್ಧರಾಗಿಲ್ಲ! ಅವರ ದೃಷ್ಟಿಯಲ್ಲಿ ಅವರ ಮೊದಲ ಕಾದಂಬರಿ 'ಧರ್ಮಶ್ರೀ' (1961), ಎರಡನೆಯದು 'ದೂರಸರಿದರು' (1962) ಆದರೆ ಭೈರಪ್ಪನವರನ್ನು ಕಾದಂಬರಿಕಾರರೆಂದು ಸ್ಥಾಪಿಸಿದ್ದು, 1965 ರಲ್ಲಿ ಪ್ರಕಟವಾದ 'ವಂಶವೃಕ್ಷ', ಅದು ತನ್ನ ಕಥೆಯಿಂದ ಕಥಾ ಸಂವಿಧಾನದಿಂದ, ಪಾತ್ರ ಪೋಷಣೆಯಿಂದ, ಜೀವನ ವಿವರಣೆಗಳಿಂದ ಕನ್ನಡಕ್ಕೊಬ್ಬ ಶ್ರೇಷ್ಠ ಕಾದಂಬರಿಕಾರರು ಬರುವುದನ್ನು ಸೂಚಿಸಿತು.

ಭೈರಪ್ಪನವರ ಕಾದಂಬರಿಯೇತರ ಬರವಣಿಗೆಯಲ್ಲಿ ನಾಲ್ಕು ಪುಸ್ತಕಗಳನ್ನು ಕಾಣಬಹುದು. ಅವುಗಳೆಂದರೆ 'ಸತ್ಯ ಮತ್ತು ಸೌಂದರ್ಯ' (1966) ರಲ್ಲಿ ಪ್ರಕಟವಾಯಿತು. 'ಸಾಹಿತ್ಯ ಮತ್ತು ಪ್ರತೀಕ' (1967) ರಲ್ಲಿ 'ಕಥೆ ಮತ್ತು ಕಥಾವಸ್ತು' (1969) ರಲ್ಲಿ 'ನಾನೇಕೆ ಬರೆಯುತ್ತೇನೆ'? (1980) ರಲ್ಲಿ ಪ್ರಕಟವಾಯಿತು. ಭೈರಪ್ಪನವರು 'ಭಿತ್ತಿ' ಎಂಬ ಆತ್ಮವೃತ್ತಾಂತವನ್ನು ಬರೆದಿದ್ದಾರೆ. ಇದು 1996 ರಲ್ಲಿ ಪ್ರಕಟವಾಯಿತು. ಭೈರಪ್ಪನವರು ಭೀಮಕಾಯ (1958), ಧರ್ಮಶ್ರೀ (1961), ದೂರಸರಿದರು (1962) ಮತದಾನ (1965), ವಂಶವೃಕ್ಷ (1965), ಜಲಪಾತ (1967) ನಾಯಿನೆರಳು (1968), ತಬ್ಬಲಿಯು ನೀನಾದೆ ಮಗನೆ (1968), ಗೃಹಭಂಗ (1970), ನಿರಾಕರಣ (1971), ಗ್ರಹಣ (1972), ದಾಟು (1973), ಅನ್ವೇಷಣ (1976) ಪರ್ವ (1979), ನೆಲೆ (1983), ಸಾಕ್ಷಿ (1986), ಅಂಚು (1990), ತಂತು (1993), ಸಾರ್ಥ (1998), ಮಂದ್ರ (2002), ಆವರಣ (2007), ಕವಲು (2010), ಯಾನ (2014) ಕಾದಂಬರಿಗಳನ್ನು ರಚಿಸಿದ್ದಾರೆ. ಇವರು ಗಂಗೂಬಾಯಿ ಹಾನಗಲ್ (1988) ಹಾಗೂ ಮಾನ (1992) ರಲ್ಲಿ ಸಂಪಾದಿತ ಕೃತಿಯನ್ನು ರಚಿಸಿದ್ದಾರೆ. ಇವರ ಅನೇಕ ಕಾದಂಬರಿಗಳು ಮತ್ತು ಸಾಹಿತ್ಯದ ಗ್ರಂಥಗಳು ಇತರೆ ಭಾಷೆಗಳಾದ ಸಂಸ್ಕೃತ, ಮರಾಠಿ, ತೆಲುಗು, ಹಿಂದಿ, ಉರ್ದು, ಇಂಗ್ಲೀಷ್, ಗುಜರಾತಿ, ಬಂಗಾಳಿ, ತಮಿಳು, ಪಂಜಾಬಿ ಭಾಷೆಗಳಿಗೆ ಅನುವಾದವಾಗಿರುವುದನ್ನು ಕಾಣಬಹುದು. 'ಗೃಹಭಂಗ' ಮತ್ತು 'ದಾಟು' ಕಾದಂಬರಿಗಳು ಭಾರತದ ಎಲ್ಲಾ ಹದಿನಾಲ್ಕು ಭಾಷೆಗಳಲ್ಲಿಯೂ ರಚನೆಯಾಗಿದೆ.

ಕನ್ನಡ ಕಾದಂಬರಿ ಕ್ಷೇತ್ರಕ್ಕೆ ಭೈರಪ್ಪನವರ ಸೇವೆ ಅಪಾರ ಹಾಗೂ ಅಮೋಘವಾಗಿದೆ. ಇವರ 'ವಂಶವೃಕ್ಷ' ಕಾದಂಬರಿಗಾಗಿ 1968 ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 'ದಾಟು' ಕಾದಂಬರಿಗಾಗಿ 1975 ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1986 ರಲ್ಲಿ ರಾಜ್ಯೋತ್ಸವ ಪ್ರಶಸ್ತಿ, 'ಸಾಕ್ಷಿ' ಕಾದಂಬರಿಗಾಗಿ 1988 ರಲ್ಲಿ ಗ್ರಂಥಲೋಕ ಪ್ರಶಸ್ತಿ, 1996 ರಲ್ಲಿ ಕೋಲ್ಕತ್ತಾದ ಭಾರತೀಯ ಭಾಷಾ ಪರಿಷತ್ತಿನ ಪ್ರಶಸ್ತಿ, 1996 ರಲ್ಲಿಯೇ ಮಾಸ್ತಿ ಪ್ರಶಸ್ತಿ, ಗೊರೂರು ಸಾಹಿತ್ಯ ಪ್ರಶಸ್ತಿ, 2000 ರಲ್ಲಿ ಎಸ್.ಆರ್.ಪಾಟೀಲ್ ಪ್ರಶಸ್ತಿ, 2002 ರಲ್ಲಿ 'ಸಾಮಾನ್ಯ ಜ್ಞಾನ' ಸಾಹಿತ್ಯ ಪ್ರಶಸ್ತಿ, 2004 ರಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪ್ರಶಸ್ತಿ, 2004 ರಲ್ಲಿ ನಿರಂಜನ ಪ್ರಶಸ್ತಿ, 2005 ರಲ್ಲಿ ಪಂಪ ಪ್ರಶಸ್ತಿ, 2009 ರಲ್ಲಿ ಎನ್.ಟಿ.ರಾಮರಾವ್ ವಿಜ್ಞಾನ ಪ್ರಶಸ್ತಿ ಇವೇ ಮೊದಲಾದ ಪ್ರಶಸ್ತಿ

ಪುರಸ್ಕಾರಗಳು ಅವರನ್ನು ಅರಸಿ ಬಂದಿವೆ. (ತರುಣರಿಗೆ ಪ್ರಶಸ್ತಿ ಪುರಸ್ಕಾರಗಳು ಲಭಿಸಲೆಂದೇ 'ಚದುರಂಗ ಪ್ರಶಸ್ತಿ' ಯಂಥ ಹಲವು ಪ್ರಶಸ್ತಿಗಳನ್ನು ಅವರು ವಿನಯಪೂರ್ವಕವಾಗಿ ನಿರಾಕರಿಸಿವುದೂ ಉಂಟು)

ಭೈರಪ್ಪನವರಿಗೆ ಗೋವಾದಲ್ಲಿ 1994 ರಲ್ಲಿನಡೆದ ಅಖಿಲ ಭಾರತ ಮರಾಠಿ ಸಾಹಿತ್ಯ ಸಮ್ಮೇಳನ ಉದ್ಘಾಟನೆಯ, 1998 ರಲ್ಲಿ ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಫೋನಿಕ್ಸ್‌ನಲ್ಲಿ ನಡೆದ ವಿಶ್ವಕನ್ನಡ ಸಮ್ಮೇಳನದ ಅಧ್ಯಕ್ಷತೆಯ, 1999 ರಲ್ಲಿ ಕನಕಪುರದಲ್ಲಿ ನಡೆದ 67ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವವೂ ಅವರಿಗೆ ಸಂದಿದೆ. ಇವರ ಕೃತಿಗಳನ್ನು ಕುರಿತಂತೆ ಸಂಶೋಧನಾತ್ಮಕ ಅಧ್ಯಯನಗಳೂ ನಡೆಯುತ್ತ ಬಂದಿವೆ. [3]"ಕನ್ನಡಕ್ಕೆ ಮೊದಲ 'ಸರಸ್ವತಿ ಸಮ್ಮಾನ್' ಪ್ರಶಸ್ತಿಯ ಗೌರವವನ್ನು ತಂದುಕೊಟ್ಟಿರುವ ಹಿರಿಮೆ ಡಾ. ಎಸ್.ಎಲ್.ಭೈರಪ್ಪ ನವರಿಗೆ ಸಂದಿದೆ". ದಿನಾಂಕ; 16.11.2011 ರಂದು ನವದೆಹಲಿಯ ರಾಷ್ಟ್ರೀಯ ವಸ್ತು ಸಂಗ್ರಹಾಲಯದ ಸಭಾಂಗಣದಲ್ಲಿ ನಡೆದ ವಿಶೇಷ ಸಮಾರಂಭದಲ್ಲಿ ಇವರಿಗೆ ಈ ಪ್ರಶಸ್ತಿಯನ್ನು ನೀಡಲಾಯಿತು. ಇತ್ತೀಚೆಗೆ 'ಪದ್ಮಶ್ರೀ' ಪ್ರಶಸ್ತಿಯನ್ನು ಸಹ ಭೈರಪ್ಪನವರಿಗೆ ಪ್ರಧಾನ ಮಾಡಲಾಯಿತು.

ಪ್ರಶಸ್ತಿಗಳು ಹಾಗೂ ಕೀರ್ತಿಯ ಬೆನ್ನು ಹತ್ತಿ ಹೋಗದ ಭೈರಪ್ಪನವರು, ನಾಡಿನ ಅತ್ಯುಚ್ಚ ಸಾಹಿತ್ಯ ಪ್ರಶಸ್ತಿಯಾದ 'ಸರಸ್ವತಿ ಸಮ್ಮಾನ್' ಪ್ರಶಸ್ತಿ ಪಡೆದಾಗ ಅವರನ್ನು ಅಭಿನಂದಿಸಿದ 'ಡಾ.ಪ್ರಧಾನ್ ಗುರುದತ್ತ' ರವರು "ನಿಮಗೆ ಏನು ಅನ್ನಿಸಿತು?" ಎಂದು ಕೇಳಿದಾಗ ಭೈರಪ್ಪನವರು [4]"ನನಗೆ ಏನೂ ಅನ್ನಿಸಲೇ ಇಲ್ಲ, ನನ್ನ ಅಭಿಮಾನಿಗಳಿಗೆ, ಮಿತ್ರರಿಗೆ ಸಂತೋಷವನ್ನು ತರುತ್ತದೆ ಎಂಬುದಷ್ಟೇ ನನಗೆ ಸಂತೋಷವನ್ನುಂಟು ಮಾಡುತ್ತದೆ. ಇವೆಲ್ಲವನು ಮೀರಿದ ಕಾಲ ನಮ್ಮ ಸಾಧನೆಗೆ ನಿಜವಾದ ಬೆಲೆಯನ್ನು ಕಟ್ಟುತ್ತದೆ. ಅದೇ ನಿಜವಾದ ಪ್ರಶಸ್ತಿ" ಎಂದು ಹೇಳಿ ತಮ್ಮ ನಿರ್ಲಿಪ್ತತೆಯನ್ನು ತೋರಿದರು.

ಜೀವನಾನುಭವವನ್ನು ಸತತವಾಗಿ ಉಳಿಸಿಕೊಂಡು ತಮ್ಮ ಕಾದಂಬರಿಗಳಲ್ಲಿ ಅದನ್ನು ವ್ಯಕ್ತಿಪಡಿಸಿದ್ದಾರೆ. ಅವರ ಜೀವನಾನುಭವ ಮತ್ತು ಮಾನವೀಯ ಮೌಲ್ಯಗಳು, ಜನಸಾಮಾನ್ಯನ ಮಾನಸಿಕ ಹೋರಾಟಗಳು, ಇವೇ ಮೊದಲಾದ ವಸ್ತುಗಳನ್ನು ಆಧಾರವಾಗಿಟ್ಟುಕೊಂಡು ರಚಿಸಿರುವ ಅವರ ಕಾದಂಬರಿಗಳು ನಮ್ಮ ನಿತ್ಯ ಜೀವನದ ಆಗು ಹೋಗುಗಳು, ಆಸೆ-ಆಕಾಂಕ್ಷೆಗಳು, ಕನಸು ನನಸುಗಳು ಇವುಗಳ ನೈಜ ಪ್ರತಿಬಿಂಬವೆಂಬಂತೆ ಚಿತ್ರಿತವಾಗಿವೆ. ಇವರು ಹೊಸ ಹೊಸ ವಸ್ತುಗಳನ್ನು ಆಯ್ದುಕೊಳ್ಳುತ್ತಾ, ಸಮಸ್ಯೆಗಳನ್ನು ಎತ್ತಿಕೊಳ್ಳುತ್ತಾ, ತಮ್ಮ ಅಧ್ಯಯನ ಅನುಭವಗಳ ಫಲವಾಗಿ, ಅವರು

3. ಡಾ॥ ಎಸ್.ಎಲ್.ಭೈರಪ್ಪನವರ ಕಾದಂಬರಿಗಳಲ್ಲಿ ಕೌಟುಂಬಿಕ ಸಮಸ್ಯೆಗಳು ಪುಟ-9
4. ಡಾ॥ ಎಸ್.ಎಲ್.ಭೈರಪ್ಪನವರ ಕಾದಂಬರಿಗಳಲ್ಲಿ ಕೌಟುಂಬಿಕ ಸಮಸ್ಯೆಗಳು ಪುಟ-5

'ಪರ್ವ', 'ದಾಟು', 'ತಂತು', 'ಸಾರ್ಥ', 'ಮಂದ್ರ', 'ಆವರಣ', 'ಕವಲು' ಮೊದಲಾದ ವಿಶಿಷ್ಟ ಕಾದಂಬರಿಗಳನ್ನು ಸಾಹಿತ್ಯ ರಸಿಕರಿಗೆ ನೀಡಿದ್ದಾರೆ. 'ಮಂದ್ರ' ಕಾದಂಬರಿಯು 'ಸಂಗೀತ'ವನ್ನು ವಸ್ತುವಾಗಿಸಿಕೊಂಡಿರುವ ಭಾರತೀಯ ಭಾಷೆಗಳಲ್ಲಿ ಯಾವುದರಲ್ಲಿಯೂ ಬಂದಿರದ ಬಗೆಯ ವಿಶಿಷ್ಟ ಬಗೆಯ ಅಪೂರ್ವ ಕಾದಂಬರಿಯಾಗಿ 'ಸರಸ್ವತೀ ಸಮ್ಮಾನ್' ಪ್ರಶಸ್ತಿ ಪಡೆದಿರುವುದು ನಾವು ಹೆಮ್ಮೆ ಪಡಬೇಕಾಗಿರುವ ಸಂಗತಿ.

'ಪರ್ವ'ದಲ್ಲಿ ಭೈರಪ್ಪನವರು ಪುರಾಣ-ಇತಿಹಾಸವಾದ ಮಹಾಭಾರತವನ್ನು ಅದರ ಪೌರಾಣಿಕತೆಯಿಂದ ಕಳಚಿಡುತ್ತಾ, ಅದರಲ್ಲಿನ 'ಮಿಥ್' ಗಳನ್ನು ನಿವಾರಿಸಿದ್ದಾರೆ. ಪರ್ವದ ನಂತರದಲ್ಲಿ ಬರೆದಂತಹ 'ಸಾಕ್ಷಿ' ಮತ್ತು 'ನೆಲೆ' ಕಾದಂಬರಿಗಳಲ್ಲಿ 'ಮಿಥ್' ಗಳ ಬಳಕೆಮಾಡಿದ್ದಾರೆ. ಇಲ್ಲಿ ಜೀವನ ಸತ್ಯದ ಅನ್ವೇಷಣೆ ಸಾಧ್ಯವಾಗುತ್ತದೆ. ಯಮಲೋಕ, ಚಿತ್ರಗುಪ್ತರು, ಹೆಬ್ಬೆರಳ ಗಾತ್ರದ ಪೇತ, ಗರುಡ, ಪುರಾಣ, ನರಕದ ಚಿತ್ರಣ ಮುಂತಾದ ಸಮರ್ಥ ಮಿಥ್‌ಗಳ ಬಳಕೆಯಿಂದ ಲೇಖಕರು ಪಾತ್ರಗಳ ಗತಕಾಲದ ಹಾಗೂ ಸುಪ್ತ ಪ್ರಜ್ಞೆಗಳನ್ನು ತೆರೆದಿಟ್ಟಿದ್ದಾರೆ. ಈ ಕಾದಂಬರಿಗಳಲ್ಲಿ ಸಾವು ಮತ್ತು ಸಾವಿನಾಚೆಯ ಪ್ರಪಂಚದ ಸತ್ಯವನ್ನು, ಸಾವಿನಾಚೆಯ ಪ್ರಪಂಚದಲ್ಲಿರುವ ಸತ್ಯವನ್ನು ಮನದಟ್ಟು ಮಾಡಲು 'ಮಿಥ್' ಮತ್ತು ಕನಸುಗಳಿಂದ ಮಾತ್ರ ಸಾಧ್ಯವಾಗುತ್ತದೆ. ಆದ್ದರಿಂದ 'ಸಾಕ್ಷಿ' ಮತ್ತು 'ನೆಲೆ' ಗಳಲ್ಲಿ ಮಿಥ್‌ಗಳ ಬಳಕೆ ಮಾಡಿದ್ದಾರೆ.

ಭೈರಪ್ಪನವರ ಅನೇಕ ಕೃತಿಗಳಲ್ಲಿ ಕಾಮವು ಮನುಷ್ಯನ ಮನಸ್ಸನ್ನು, ಬುದ್ಧಿಯನ್ನು ಕಾಡುವ ಅದಮ್ಯ ಒತ್ತಡವಾಗಿ ಚಿತ್ರಿಸಿದ್ದಾರೆ. ಅದೇ ರೀತಿ ಅನಿರ್ಬಂಧಿತ, ಅನಿಯಂತ್ರಿತ ಕಾಮ, ವ್ಯಕ್ತಿ ಜೀವನದಲ್ಲಿಯೂ ಮತ್ತು ಸಮಾಜ ಜೀವನದಲ್ಲಿಯೂ ಉಂಟು ಮಾಡುವ ದುಷ್ಪರಿಣಾಮಗಳನ್ನು ತಮ್ಮ ಕಾದಂಬರಿಗಳಲ್ಲಿ ನಿರೂಪಿಸಿದ್ದಾರೆ. ಭೈರಪ್ಪನವರ 'ಜಲಪಾತ', 'ವಂಶವೃಕ್ಷ', 'ಸಾಕ್ಷಿ', 'ನೆಲೆ', 'ತಂತು', 'ಮಂದ್ರ' ಮತ್ತು 'ಪರ್ವ' ಮುಂತಾದ ಕಾದಂಬರಿಗಳು ಕಾಮ, ಕಾಮದ ಅದಮ್ಯ ಒತ್ತಡ, ಕಾಮದ ವಿನಾಶಕಾರಿ ಶಕ್ತಿಗೆ ಉದಾಹರಣೆಗಳಾಗಿವೆ. ಆಧ್ಯಾತ್ಮಿಕ ಔನತ್ಯದ ಸಿದ್ಧಿಗೂ, ಹುಟ್ಟಿಗೂ ಯಾವುದೇ ಸಂಬಂಧವಿರದೆಂದು 'ವಂಶವೃಕ್ಷ'ದ ಶ್ರೀನಿವಾಸ ಶ್ರೋತ್ರಿಯ ಪಾತ್ರದ ಮೂಲಕ ಸ್ಪಷ್ಟವಾಗಿದೆ. ಆದರೂ 'ಪರ್ವ' ದಲ್ಲಿ ಮತ್ತೆ ಮತ್ತೆ ಹುಟ್ಟು, ವಂಶ, ಬೀಜ, ಕ್ಷೇತ್ರ, ನಿಯೋಗ ಪದ್ಧತಿ ಇವುಗಳ ವಿಸ್ತಾರವಾದ ವಿಶ್ಲೇಷಣೆ ಮಾಡಿರುವುದರಿಂದ ಈ ವಿಷಯ ಮತ್ತಷ್ಟು ನಿಚ್ಚಳವಾಗುತ್ತದೆ.

ಒಟ್ಟಾರೆಯಾಗಿ ಭೈರಪ್ಪನವರು ಹೆಚ್ಚಿನ ಅಧ್ಯಯನ, ಅನುಭವ, ಚಿಂತನೆಗಳ ಮೂಲಕ ಹೊಸ ಹೊಸ ವಸ್ತುಗಳನ್ನು ಆಯ್ದುಕೊಂಡು ಸಮಸ್ಯೆಗಳನ್ನು ಎತ್ತಿಕೊಂಡು ತಮ್ಮ ಕಾದಂಬರಿಗಳಲ್ಲಿ ಅವುಗಳನ್ನು ನಿರೂಪಿಸಿದ್ದಾರೆ. ಕನ್ನಡ ಸಾಹಿತ್ಯಲೋಕದಲ್ಲಿ ವಾಸ್ತವವಾಗಿಯೂ, ಕ್ರಿಯಾಶೀಲವಾಗಿಯೂ ಇರುವಂತಹ ಇವರ ಸೃಜನಾತ್ಮಕ ಕಾದಂಬರಿಗಳು ಅಪಾರ ಯಶಸ್ಸನ್ನು ಕಂಡಿವೆ. ಅವರು ತಮ್ಮ ಕಾದಂಬರಿಗಳಲ್ಲಿ

ನೀಡಿರುವ ಕಟು ಸತ್ಯದ ವಾಸ್ತವ ಚಿತ್ರಣವು ಕೆಲವೊಮ್ಮೆ ವಿಮರ್ಶೆಗೂ ಒಳಪಟ್ಟಿರುವುದನ್ನು ಕಾಣಬಹುದು. ಇತ್ತೀಚೆಗೆ "ಪದ್ಮಶ್ರೀ" ಪ್ರಶಸ್ತಿಯನ್ನು ಪಡೆದ ಭೈರಪ್ಪನವರು ಸುದ್ದಿಗಾರರೊಂದಿಗೆ ಮಾತನಾಡಿ, [5] "ಸಾಹಿತಿಯೊಬ್ಬ ಅಳಿದ ನೂರಿನ್ನೂರು ವರ್ಷಗಳ ಬಳಿಕವೂ ಆತನ ಸಾಹಿತ್ಯಕ್ಕೆ ಓದುಗರು ಇದ್ದರೆ, ಅದೇ ಆ ಸಾಹಿತಿಗೆ ನಿಜವಾದ ಪ್ರಶಸ್ತಿ" ಎಂದು ಹೇಳಿದರು. ಅವರೆ ಹೇಳಿದಂತೆ ಸಾಹಿತ್ಯದಲ್ಲಿ ಗಟ್ಟಿತನ ಇದ್ದರೆ ಅದು ಸದಾಕಾಲ ಉಳಿಯುತ್ತದೆ ಎಂಬಂತೆ ಅವರ ಕೃತಿಗಳು ಸಹ ಗಟ್ಟಿತನ ಉಳಿಸಿಕೊಂಡು ಓದುಗರಲ್ಲಿ ಚಿರಕಾಲ ಉಳಿಯುವಂತೆ ಸೃಜನಾತ್ಮಕವಾಗಿ ರಚಿತವಾಗಿವೆ.

೫. ದಿನಪತ್ರಿಕೆ: ಜೂನ್-18, 2016 ರ ಪ್ರಜಾವಾಣಿ ದಿನಪತ್ರಿಕೆ, ಪುಟ-೫

ಅಧ್ಯಾಯ-2

ಪರ್ವ: ವಸ್ತು ವಿನ್ಯಾಸ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಎಸ್.ಎಲ್.ಭೈರಪ್ಪನವರು ಸೃಜನಶೀಲ ಬರಹಗಾರರು. ಅವರು ಕನ್ನಡ ಕಾದಂಬರಿ ಕ್ಷೇತ್ರವನ್ನು ತಮ್ಮ ಹಲವಾರು ಕಾದಂಬರಿಗಳಿಂದ ಶ್ರೀಮಂತಗೊಳಿಸಿದ್ದಾರೆ. ಭೈರಪ್ಪನವರು ಬರೆಯುವ ಒಂದೊಂದು ಕಾದಂಬರಿಗೂ ಒಂದೊಂದು ತಾತ್ವಿಕ ಹಿನ್ನೆಲೆ ಇದ್ದೇ ಇರುತ್ತದೆ. ಇವರ ಎಲ್ಲಾ ಸಾಧನೆಗಳಿಗೆ ಕಳಶಪ್ರಾಯವಾಗಿ ಮೂಡಿ ಬಂದಿರುವುದು. [1]"ಮಹಾಭಾರತದ ವಸ್ತುವುಳ್ಳ 'ಪರ್ವ' ಕಾದಂಬರಿ ವ್ಯಾಸ ಭಾರತದ 'ಮಿಥ್' ಅನ್ನು ನಿವಾರಿಸಿ ಇಡೀ ಕೃತಿಯನ್ನು ಚಾರಿತ್ರಿಕ, ಸಾಮಾಜಿಕ ಹಾಗೂ ಮನಶ್ಯಾಸ್ತ್ರಿಯ ದೃಷ್ಟಿಯಿಂದ ಚಿತ್ತರಿಸಿದ್ದಾರೆ". 'ಪರ್ವ' ಕಾದಂಬರಿಯು ಮಹಾಭಾರತದ ಪುನರ್ ಸೃಷ್ಟಿಯಾಗಿದೆ'. ಭೈರಪ್ಪನವರು ತಮ್ಮ ಪರ್ವ ಕಾದಂಬರಿಗೆ ಮಹಾಭಾರತದ ವಸ್ತುವನ್ನೇ ಯಾಕೆ ಆರಿಸಿಕೊಂಡರು? ಇದು ಕೇವಲ ಕುತೂಹಲದ ಪ್ರಶ್ನೆಯಲ್ಲ. ಕನ್ನಡ ಸಾಹಿತ್ಯ ಪರಂಪರೆಯನ್ನು ಗಮನಿಸಿದಾಗ ನಮ್ಮ ಸಾಹಿತ್ಯದ ಬಹುಪಾಲು, ವಸ್ತು ರಾಮಾಯಣ, ಮಹಾಭಾರತದಿಂದ ಆರಿಸಿಕೊಂಡದ್ದಾಗಿದೆ. ಇಪ್ಪತ್ತನೆಯ ಶತಮಾನದ ಈ ದಶಕದಲ್ಲೂ ನಾವು ಮತ್ತೆ ಮತ್ತೆ ಅದೇ ವಸ್ತುವಿಗೆ ಮರಳಿ ಹೋಗುತ್ತಿರುವುದು ಏಕೆ? ಮಹಾಕೃತಿಯ ರಚನೆಗೆ ಈ ಶತಮಾನದ ಬದುಕು ವಸ್ತುವಾಗಲಾರದದೇ? ಎಂಬುದಕ್ಕೆ ಉತ್ತರವಾಗಿ ಭೈರಪ್ಪನವರು [2]"ಈ ವಸ್ತುವನ್ನು ಕುರಿತು ಬರೆಯಲು ನಾನು ಹೊರಟಿರುವುದು ಐತಿಹಾಸಿಕ ಕೃತಿಯೊಂದನ್ನು ನಿರ್ಮಿಸುವ ಉದ್ದೇಶದಿಂದಲ್ಲ. ನನ್ನನ್ನು ಕಾಡುತ್ತಿರುವ ಹಲವು ಭಾವಗಳನ್ನು ಮಾನವ ಸಂಬಂಧದ ಪ್ರಶ್ನೆಗಳನ್ನು, ಶೋಧಿಸಲು ಈ ಐತಿಹಾಸಿಕ ವಸ್ತುವು ಅನುಕೂಲವಾದ ಸನ್ನಿವೇಶಗಳನ್ನು ಕೊಡುತ್ತದೆಯಾದ್ದರಿಂದ ಇದನ್ನು ಆರಿಸಿಕೊಂಡಿದ್ದೇನೆ" ಎಂದಿದ್ದಾರೆ.

ಕಾವ್ಯ ಇತಿಹಾಸ ಪುರಾಣಗಳ ಮಿಶ್ರಣವಾದ ಪ್ರಾಚೀನ ಮಹಾಕೃತಿಯನ್ನು ಆಧುನಿಕ ಸಾಹಿತ್ಯ ಪ್ರಕಾರವಾದ ಕಾದಂಬರಿಯನ್ನಾಗಿ ನಿರ್ಮಿಸುವ ಪ್ರಕ್ರಿಯೆಯಲ್ಲಿ ಶ್ರೇಷ್ಠ ಕಾದಂಬರಿಕಾರರೊಬ್ಬರ ಪಕ್ವವಾದ ಮನಸ್ಸು ಕಾಲ, ದೇಶಗಳನ್ನು ದಾಟಿ ಹೇಗೆ ಕೆಲಸ ಮಾಡಿದೆ ಎಂಬುದನ್ನು ಇಲ್ಲಿ ನೋಡಬಹುದು. ಮಹಾಭಾರತವೆಂದರೆ ಸಹೋದರ-ಸಹೋದರರ ಮಕ್ಕಳ ಅಂತಃಕಲಹದ ಕಥೆಯಾಗಿದೆ. ಮೂಲಭಾರತದ ಇಡೀ ಕಥೆಯು ಒಂದು ಕುಟುಂಬದಲ್ಲಿನ ದಾಯಾದಿ ಮತ್ಸರ ಮತ್ತು ಆಸ್ತಿಗಾಗಿ ಹೊಡೆದಾಟವಾದ ಒಂದು ಕೌಟುಂಬಿಕ ಸಮಸ್ಯೆ ಕಥೆಯಾಗಿದೆ.

1. ಭೈರಪ್ಪಾಭಿನಂದನಾ, ಪುಟ-27
2. "ಪರ್ವ; ಒಂದು ಸಮೀಕ್ಷೆ, ಪುಟ-40

[3]ಮಹಾಭಾರತದಲ್ಲಿ ಪಾಂಡವರನ್ನು ಪಂಚಗ್ರಹಗಳಾಗಿಯೂ, ದ್ರೌಪದಿಯನ್ನು ಈ ಗ್ರಹಗಳಿಗೆ ಪ್ರಕಾಶ ನೀಡುತ್ತಾ ಅವುಗಳ ಪರಿಭ್ರಮಣಕ್ಕೆ ಕಾರಣವಾದ ಸೂರ್ಯ ಕಿರಣವಾಗಿಯೂ ಮಾಡಿತೋರಿಸುವ ವೃತ್ತಿಯೂ ಉಂಟು! ಆದರೆ, ಕುರುಕ್ಷೇತ್ರದಲ್ಲಿಯ ಸಂಘರ್ಷಣೆ ಕಥಾಕೇಂದ್ರವೆಂದೂ, ಕುಟುಂಬ ಕಲಹದ ದುರಂತವೇ ಇದರ ವಸ್ತುವಿನ್ಯಾಸವೆಂದು ಸಾಹಿತ್ಯಾಜ್ಞರ ಅಭಿಪ್ರಾಯ.

ಮೂಲಭಾರತಕ್ಕೆ ಮುಖ್ಯವಾಗಿ ಮೂರು ಆಯಾಮಗಳಿವೆ. ರಾಜಕೀಯ, ಧಾರ್ಮಿಕ ಹಾಗೂ ವೈಯಕ್ತಿಕ ಇವೆಲ್ಲವುಗಳ ಸಂಕೀರ್ಣ ಸ್ವರೂಪದಲ್ಲಿ ಮಹಾಭಾರತದ ಮಹತ್ವವಿದೆ. ಪರ್ವ ಕಾದಂಬರಿ ಮಹಾಭಾರತದ ವಸ್ತುವಿನಲ್ಲೇ ಇರುವ ರಾಜಕೀಯ ಹಾಗೂ ಧಾರ್ಮಿಕ ನೆಲೆಗಳಿಗಿಂತ ವೈಯಕ್ತಿಕ ಸಂಬಂಧಗಳ ವಿಶ್ಲೇಷಣೆಗೆ ಹೆಚ್ಚು ಗಮನ ನೀಡಲಾಗಿದೆ. ವೈಯಕ್ತಿಕ ಸಂಬಂಧಗಳ ನೆಲೆಯಲ್ಲಿ ಪರ್ವ ನಮ್ಮನ್ನು ಗಾಢವಾಗಿ ತಟ್ಟುತ್ತದೆ ಹಾಗೂ ಕುಲುಕುತ್ತದೆ. ಆದರೆ ಈ ಸಂಬಂಧಗಳನ್ನು ನಿರ್ಧರಿಸುವ ಅವುಗಳ ಹಿಂದಿನ ಶಕ್ತಿಗಳು ಕಾದಂಬರಿಯಲ್ಲಿ ಮುಖ್ಯವಾಗುವುದಿಲ್ಲ. ಇದಕ್ಕೆ ಕಾರಣ ಭೈರಪ್ಪನವರು ವಸ್ತುವನ್ನು ಗ್ರಹಿಸಿದ ರೂಪದಲ್ಲಿಯೇ ಇರಬಹುದು. ಅಂದರೆ, ಅದರಿಂದಾಗಿ ಒಳಗೊಳ್ಳಬಹುದಾದ ಭಿನ್ನ ಆಯಾಮಗಳು ಇಲ್ಲವಾಗಿದೆ. ಭೈರಪ್ಪನವರು ತಾವು ಗ್ರಹಿಸಿದ್ದನ್ನು ಕಾದಂಬರಿಯ ವಿನ್ಯಾಸದಲ್ಲಿ ಹಿಡಿಯುವಲ್ಲಿ ಯಶಸ್ವಿಯಾಗಿದ್ದರೂ, ಅದರ ವ್ಯಾಪ್ತಿ ಮಿತಿಗೊಳ್ಳುತ್ತದೆಂಬ ಅಂಶ ಗಮನಿಸಬೇಕಾದದು.

[4]"ಪರ್ವದಲ್ಲಿ ಆರ್ಯರು ಕೇಂದ್ರವಾಗಿ ಅನಾರ್ಯರು: ರಾಕ್ಷಸರು ಮತ್ತು ಇತರರು ಸೇರಿದ ಒಂದು ವಿಶಿಷ್ಟ ಸಂದರ್ಭದ ಆರ್ಯ ಪರಿಸ್ಥಿತಿ ಮುಖ್ಯವಾಗಿ; ಅದರಲ್ಲೂ ಸಂತಾನದ ಸಮಸ್ಯೆಯಿಂದ ಯುದ್ಧವಾಗುತ್ತದೆ". ಆರ್ಯರಲ್ಲಿ 'ನಿಯೋಗ'ವು ಧರ್ಮವಾಗಿದ್ದರೂ ಒಂದು ನ್ಯಾಯ ಅನ್ಯಾಯದ ಅಥವಾ ಸಹಜ ಅಸಹಜತೆಗಳ ಸಮಸ್ಯೆಯಾಗುತ್ತದೆ. ಕುಲದ ಗೌರವವನ್ನು, ಘನತೆಯನ್ನು ಪ್ರಶ್ನಿಸುವ ಅದರಲ್ಲೂ ಧರ್ಮವನ್ನು ಸಮರ್ಥಿಸುವ ಗೊಂದಲವಾಗುತ್ತವೆ ಹಾಗೂ ಮಹಾಭಾರತದ ಯುದ್ಧದಲ್ಲಿಯೂ ಅಸ್ಥಿರತೆಯನ್ನು ಇದೇ ಉಂಟು ಮಾಡುತ್ತದೆ. ಪರಂಪರಾಗತ ನಂಬಿಕೆಯಂತೆ ಮಹಾಭಾರತದ ಕರ್ತೃವೂ ಆದ ಕೃಷ್ಣದ್ವೈಪಾಯನ ವ್ಯಾಸರು' ವಿಚಿತ್ರವೀರ್ಯನ ವಿಧವೆ ರಾಣಿಯರಾದ ಅಂಬಿಕೆ, ಅಂಬಾಲಿಕೆಯನ್ನು, ಅರಮನೆಯ ದಾಸಿಯೊಬ್ಬಳನ್ನೂ ಕೂಡಿದ್ದರಿಂದ ಹುಟ್ಟಿದವರು ಧೃತರಾಷ್ಟ್ರ, ಪಾಂಡು ಮತ್ತು ವಿದುರರು. ಮದುವೆಯಾದ ಗಂಡನಿಂದ ಮಕ್ಕಳಾಗದಿದ್ದಾಗ ಪುತ್ರಪ್ರಾಪ್ತಿಗಾಗಿ ಹೀಗೆ ತಾತ್ಕಾಲಿಕವಾಗಿ ಬೇರೆಯವರನ್ನು ಕೂಡುವುದು, ಆಪದ್ಧರ್ಮ ಎಂಬ ಮಾತು ಮಹಾಭಾರತದಲ್ಲಿ ಬರುತ್ತದೆ. ಇದನ್ನು 'ನಿಯೋಗ ಪದ್ಧತಿ' ಎಂದು ಕರೆಯುತ್ತಾರೆ. ನಿಯೋಗದಿಂದ ಪಡೆದ ಪುತ್ರರು 'ನಿಯೋಗ ಸಂತಾನ'ವಾಗುತ್ತದೆ. ಪಾಂಡವರ ಹುಟ್ಟು ಕೂಡ, ಸ್ವಲ್ಪ ಹೆಚ್ಚು ಕಡಿಮೆ ಹೀಗೆಯೇ ಆಗುತ್ತದೆ. ಈ ವಿಚಾರದಲ್ಲಿ ಪಾಂಡವರನ್ನು ಆಗಾಗ

3. ಭೈರಪ್ಪಾಭಿನಂದನಾ, ಪುಟ-92
4. ಭೈರಪ್ಪಾಭಿನಂದನಾ, ಪುಟ-56

ಹಂಗಿಸಿರುವುದು ಉಂಟಾದರೂ ಇದೇ ಮಹಾಭಾರತ ಸಂಘರ್ಷದ ಪ್ರಧಾನ ಕಾರಣವಾದಂತೆ ತೋರುವುದಿಲ್ಲ. ಆದರೆ ನಿಯೋಗ ಸಂತಾನವು ಸಿಂಹಾಸನಕ್ಕೆ ಅರ್ಹವೇ? ಧರ್ಮಸಮ್ಮತವೇ? ಎಂಬ ಪ್ರಶ್ನೆಗಳು ಪರ್ವ ಕಾದಂಬರಿಯ ಪ್ರಕಾರ 'ಕುರುಕ್ಷೇತ್ರ' ಸಂಘರ್ಷದ ಮೂಲ ಕಾರಣಗಳಾಗುತ್ತವೆ.

ಮಕ್ಕಳು ಅಥವಾ ಉತ್ತರಾಧಿಕಾರಿಗಳು ಇಲ್ಲದಂತಹ ಒಂದು ಕೌಟುಂಬಿಕ ಸಮಸ್ಯೆಗೆ ಪರಿಹಾರವಾಗಿ ನಿಯೋಗವನ್ನು ಅವಲಂಬಿಸುವುದು, ಮದುವೆಗೆ ಮುಂಚೆ ಮಗು ಹುಟ್ಟಿದ್ದರೂ ಅಂತಹ ಹೆಂಗಸನ್ನು ಮದುವೆಯಾಗುವುದು ಮುಂತಾದ ಪದ್ಧತಿಗಳ ಸಾಮಾಜಿಕ ಮನ್ನಣೆಯನ್ನು ಕಳೆದುಕೊಳ್ಳುತ್ತಿರುದ್ದಂತಹ ಒಂದು ಕಾಲಸ್ಥಿತಿಯನ್ನು 'ಪರ್ವ' ಕಥೆಗೆ ಹಿನ್ನೆಲೆಯಾಗಿಟ್ಟುಕೊಳ್ಳಲಾಗಿದೆ. ಮಹಾಸಮರದಲ್ಲಿ ರಾಜರುಗಳನ್ನು ತನ್ನ ಕಡೆಗೆ ಸೆಳೆದುಕೊಳ್ಳಲು ದುರ್ಯೋಧನನು ಬೀಸಿದ ನೈತಿಕ ದಾಳ ಇದು. ಪಾಂಡವರು ತಮಗೆ ಸಿಗಬೇಕಾದ ರಾಜ್ಯದ ಪಾಲನ್ನು ಕೇಳಿದಾಗ ಅವನು, [5]"ಆ ಐದು ಜನ ಅಪ್ಪನ ಬೀಜಕ್ಕೆ ಹುಟ್ಟಲೇ ಇಲ್ಲ. ಅವರ ತಾಯಂದಿರು ಯಾರ ಯಾರನ್ನೋ ಕರಕೊಂಡು ಬಸುರಾಗಿ ಹೆತ್ತರು. ಆದ್ದರಿಂದ ಅವರು ಕೌರವರೇ ಅಲ್ಲ, ಅವರಿಗೆ ಕೌರವ ರಾಜ್ಯದಲ್ಲಿ ಅಧಿಕಾರವೇ ಇಲ್ಲ" ಅಂದದ್ದು ಭೀಷ್ಮರ ಪ್ರಜ್ಞೆಯನ್ನು ಕಾಡತೊಡಗಿ ತಮ್ಮ ಅನುಮಾನ ಪರಿಹಾರಕ್ಕಾಗಿ ದ್ವೈಪಾಯನರ ಆಶ್ರಮಕ್ಕೆ ಹೋಗುತ್ತಾರೆ. ಅವರು ನಿಯೋಗ ಪದ್ಧತಿ ಧರ್ಮಸಮ್ಮತವೆಂದು ತ್ರಿಕರಣಪೂರ್ವಕ ನಂಬಿ ಕೃಷ್ಣದ್ವೈಪಾನರನ್ನು ಕರೆತಂದು, ವಿಚಿತ್ರವೀರ್ಯನ ಹೆಂಡತಿಯರಿಗೆ ನಿಯೋಗ ಮಾಡಿಸಿ ಧೃತರಾಷ್ಟ್ರ ಮತ್ತು ಪಾಂಡುವಿನ ಜನ್ಮಕ್ಕೆ ಕಾರಣರಾದರು. ಆದರೆ ಭೀಷ್ಮರಿಗೆ ಈಗ ನಿಯೋಗ ಪದ್ಧತಿಯ ಧರ್ಮ, ಅಧರ್ಮಗಳು, ಉಚಿತಾನುಚಿತಗಳು ಕಾಡತೊಡಗಿ 'ನಿಯೋಗ ಧರ್ಮವೇ, ಅಧರ್ಮವೇ'? ಎಂಬ ಪ್ರಶ್ನೆಗೆ ದ್ವೈಪಾರ್ಯನು ಉತ್ತರಿಸುತ್ತಾ: [6]"ದುರ್ಯೋಧನನ ಪರ ಸೈನಾಧಿಪತ್ಯವನ್ನು ವಹಿಸಿಕೊಂಡ ನೀನು ನಿಯೋಗವನ್ನು ಅಧರ್ಮವೆಂದು ಸ್ವಯಂ ಘೋಷಿಸಿ ಕೊಂಡಂತಾಯಿತು. ನನ್ನನ್ನು ಕರೆಸಿ, ಕುರುಕುಲವನ್ನು ಬೆಳೆಸಬೇಕೆಂದು ಇದುವರೆಗೆ ನೀನು ಮಾಡಿದ ಸಕಲ ಪ್ರಯತ್ನಗಳು ನಾನು ಮಾಡಿದ್ದು, ಅಧರ್ಮವೆಂದು" ನೀನೆ ಘೋಷಿಸದಂತಾಯಿತು ಎಂದದ್ದು, ಭೀಷ್ಮರಲ್ಲಿ ಮತ್ತೆ ಗೊಂದಲ ಉಂಟು ಮಾಡಿತು.

ಯುದ್ಧಾರಂಭದ ಸುದ್ದಿಯೊಡನೆಯೇ, ಪಾಂಡವರು ಅನಾರ್ಯರು, ಒಬ್ಬ ಹೆಂಡತಿಯನ್ನು ಅಣ್ಣ-ತಮ್ಮಂದಿರು ಹಂಚಿಕೊಳ್ಳುವವರು, ಪಾಂಚಾಲಕರು ಅನಾರ್ಯರೂ, ದ್ರುಪದ ಹಾಗೂ ಅವನ ಅಳಿಯಂದಿರು ಈ ಅನಾರ್ಯ ಪದ್ಧತಿಯನ್ನು ಆರ್ಯ ಜನಾಂಗದ ಮೇಲೆ ಹೇರಬೇಕೆಂದು, ಈ ಯುದ್ಧ ಹೂಡುತ್ತಿರುವುದಾಗಿ ಪಂಡಿತರು ಮತ್ತು ಪುರೋಹಿತ ವರ್ಗದವರು ವ್ಯವಸ್ಥಿತವಾಗಿ ದುರ್ಯೋಧನನ ಪರವಾಗಿ ಪ್ರಚಾರ ಮಾಡತೊಡಗಿದರು. ಪರ್ವದಲ್ಲಿ ಮಾನವ ಸಂಬಂಧದ ಶೋಧನೆ ಸಹ ಮುಖ್ಯವಾಗಿ ಎರಡು ನೆಲೆಯಲ್ಲಿದೆ. ಒಂದು 'ಹುಟ್ಟು' ಮತ್ತೊಂದು 'ಸಾವು'. ಹುಟ್ಟು ಸಾವುಗಳು ಅರ್ಥಪೂರ್ಣವೋ, ನಿರರ್ಥಕವೋ ಎಂಬ ಪ್ರಶ್ನೆಗೆ ಭೈರಪ್ಪನವರ ಪರ್ವ ಕಾದಂಬರಿಯ ಪಾತ್ರಗಳೇ ಉತ್ತರಿಸಿವೆ.

5. ಪರ್ವ, ಪುಟ-19
6. ಪರ್ವ, ಪುಟ-497, 498

ಕೃಷ್ಣದ್ವೈಪಾಯನರ ಮಗ ಶಕದೇವನು ಸಂತಾನವನ್ನು ಸೃಷ್ಟಿಸುವುದಲ್ಲಿ ಪಿತೃಋಣ ತೀರಿಸುವುದರಲ್ಲಿ ತನಗೆ ಅರ್ಥ ಕಾಣುತ್ತಿಲ್ಲವೆಂದು ಆಹಾರ ತ್ಯಜಿಸಿ ಪ್ರಾಣ ತೊರೆದಾಗ, ದ್ವೈಪಾಯನರಿಗೂ ಹುಟ್ಟು, ಸಾವಿನ ಅರ್ಥಕಾಣದಾಗುತ್ತದೆ. ಸಾವಿನ ನೆಲೆಯಲ್ಲಿ ನಿಂತು ನೋಡಿದಾಗ ಬದುಕು ಅರ್ಥ ಪೂರ್ಣವೂ ಆಗಬಹುದು, ಅರ್ಥಹೀನವೂ ಆಗಬಹುದು. ಮಗನ ಸಾವನ್ನು ಕಂಡ ದ್ವೈಪಾಯನರು [7]"ಸಾವಿಗೆ ಏನಾದರು ಅರ್ಥವಿದ್ದರೆ, ಹುಟ್ಟಿಗೂ ಹುಟ್ಟಿಸುವುದಕ್ಕೂ ಉಂಟು. ಆಗ ಹುಟ್ಟುವ ಹುಟ್ಟಿಸುವ ವಿಧಾನಗಳ ತುಲನೆ ಮಾಡಿ ಉತ್ತಮ ಮಾಧ್ಯಮಗಳನ್ನು ಗುರುತಿಸಬಹುದು" ಎಂದು ಭೀಷ್ಮರಿಗೆ ಉತ್ತರಿಸಿದ್ದಾರೆ. ಬದುಕನ್ನು ನಿಯಂತ್ರಿಸುವುದು ಹುಟ್ಟೆ? ಸಾವೆ? ವೈಯಕ್ತಿಕ ಜೀವನದಲ್ಲಿ, ನಮಗೆ ಪ್ರಿಯರಾದವರ ಸಾವನ್ನು ಕಂಡಾಗ ಆಗುವ ಅನುಭವವೇ ರಣರಂಗದಲ್ಲಿ ರಣಹದ್ದುಗಳ ನಡುವೆ ಛಿದ್ರ ವಿಚ್ಛಿದ್ರವಾಗಿ ಕೊಳೆತು ನಾರುತ್ತ ಬಿದ್ದಿರುವ ಲಕ್ಷಲಕ್ಷ ಕಳೆಬರಗಳನ್ನು ನೋಡುವಾಗಲೂ ಸಹ ಬದುಕಿನ ಅರ್ಥಹೀನತೆಯ, ಹುಟ್ಟಿನ ಅಥವಾ ಹುಟ್ಟಿಸುವ ವಿಧಾನಗಳ ಅರ್ಥಹೀನತೆಯ ಅನುಭವವಾಗುತ್ತದೆ. ಇಂಥ ದೃಶ್ಯ ಕಂಡಾಗ ಹುಟ್ಟಿನ ಪಾವಿತ್ರ್ಯದ ಯೋಚನೆ ಯಾರ ಮನಸ್ಸಿನಲ್ಲಿ ಮೂಡಲ ಸಾಧ್ಯ? ಹುಟ್ಟಿನ ಪಾವಿತ್ರ್ಯತೆಯಿಂದಾಗಿ ಕಳೆಬರ ಕೊಳೆಯಬಾರದೆಂದೇನೂ ಇಲ್ಲವಲ್ಲ! ಸಾವಿನ ನಿತ್ಯತೆಯೊಂದು ಮಾತ್ರ ಮನಸ್ಸಿನಲ್ಲಿ ನಿಚ್ಚಳವಾಗಿ ಉಳಿಯುತ್ತದೆ ಮತ್ತು ಸಾವು ಬದುಕಿನ ಪುಟಗಳನ್ನು ಮತ್ತೆ ಮತ್ತೆ ತಿರುಗಿಸಿ ತಿರುಗಿಸಿ ಮೆಲುಕ ಹಾಕುವಂತೆ ಮಾಡುತ್ತದೆ. ಋಷಿ, ಮುನಿ ಸಾಮಾನ್ಯ ಮನುಷ್ಯ ಯಾರೂ ಸಹ ಈ ನಿಯಮಕ್ಕೆ ಹೊರತಲ್ಲವೆಂಬುದು ದ್ವೈಪಾಯನರು ತಮ್ಮ ಬದುಕಿನ ಹಿನ್ನೋಟಗಳಲ್ಲಿ ಮುಳುಗುವುದರಿಂದ ಸಿದ್ಧವಾಗುತ್ತದೆ.

ಹುಟ್ಟು ಮತ್ತು ಸಾವು ಇವೆರಡು ಬದುಕಿನ ನೆಲೆಗಳು. ಒಂದರದು ಅಮೂರ್ತ, ಇನ್ನೊಂದರದು ಮೂರ್ತ, ಮೊದಲ ಅಮೂರ್ತದಲ್ಲಿ ಅರಿವು ಇಲ್ಲದ ಅವಸ್ಥೆಯಾದರೆ, ಮೂರ್ತದಲ್ಲಿ ಇರುವಿನ ಅರ್ಥವನ್ನು ಹುಡುಕುವ ಅರಿವು ಕಾಳಜಿಗಳು ಪ್ರಾಧಾನ್ಯವಾಗಿ ಕೆಲಸ ಮಾಡುವುದನ್ನು ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಕೊನೆಗೂ ಭೈರಪ್ಪನವರು ಕುಲದ ಅಭಿವೃದ್ಧಿಗೆ ನಿಯೋಗವನ್ನು ಪರಿಹಾರವೆಂದು ಕಾದಂಬರಿಯಲ್ಲಿ ಕುಂತಿಯ ಮೂಲಕ ಹೇಳಿಸಿದ್ದಾರೆ. ಒಟ್ಟಿನಲ್ಲಿ ಭಾರತೀಯ ದಾಂಪತ್ಯ ಸಂತಾನ ಮತ್ತು ಉತ್ತರಾಧಿಕಾರಿ ಅಥವಾ ಕುಲದ ಅಭಿವೃದ್ಧಿ ಇಷ್ಟೆಲ್ಲಾ ಪರ್ವದ ಮುಖ್ಯ ವಸ್ತು ಮತ್ತು ಅದರ ಮುಖಗಳಾಗಿವೆ. ಪರ್ವದಲ್ಲಿ ಸಾವು ಸಹ ಒಂದು ಮುಖ್ಯ ತಂತುವಾಗಿ ಕಾದಂಬರಿಯೂದ್ದಕ್ಕೂ ಪ್ರವಹಿಸಿದೆ. ಸಾವಿನಷ್ಟು ಸತ್ಯವಾದದ್ದು ಜೀವನದಲ್ಲಿ ಬೇರಾವುದೂ ಇಲ್ಲವೆಂಬುದು ಕಾದಂಬರಿಯ ಇನ್ನೊಂದು ನೀತಿಯಾಗಿದೆ.

7. ಪರ್ವ, ಪುಟ-498

ವ್ಯಾಸರಚಿತ ಮಹಾಭಾರತ ಗ್ರಂಥದ ಕಥಾವಸ್ತುವನ್ನು ಆಧಾರವಾಗಿಟ್ಟು 'ಪರ್ವ' ಕೃತಿಯು ರಚನೆಯಾಗಿದ್ದರೂ. ಆನಂತರದ ನಡೆಯಲ್ಲಿ ರಚನಾ ಸ್ವಾತಂತ್ರ್ಯವನ್ನು ಪಡೆದು ಒಂದು ಮರುಸೃಷ್ಟಿಯಾಗಿಯೇ, ವಾಚಕರ ಹೃದಯವನ್ನು ಪ್ರವೇಶಿಸುತ್ತದೆ. ಆದುದರಿಂದಲೇ ಅದನ್ನು [8]"ಒಂದು ಸ್ವಾತಂತ್ರ ಕೃತಿ"ಯೆಂದು ಕರೆಯಬಹುದು ಎಂದು 'ಕೆ.ಎಸ್.ವತ್ಸಲಾ ವಿಶ್ವನಾಥ್' ರವರು ಅಭಿಪ್ರಾಯಪಟ್ಟಿದ್ದಾರೆ.

8. ಭೈರಪ್ಪಾಭಿನಂದನ, ಪುಟ-155

ಅಧ್ಯಾಯ-3

ಪಾತ್ರ ಚಿತ್ರಣ

ಭೈರಪ್ಪನವರು ಯಾವುದೇ ವಸ್ತುವನ್ನಿಟ್ಟುಕೊಂಡು ಕಾದಂಬರಿ ಬರೆದರೂ, ತಮ್ಮದೇ ಅನನ್ಯ ಛಾಪು ಮೂಡಿಸುವ ಪ್ರತಿಭಾವಂತರು. ತಮ್ಮ ಕಾದಂಬರಿಗಳಲ್ಲಿ ಮಾನವ ಜೀವನ ಸಂಕೀರ್ಣತೆ, ಮನೋವಿಜ್ಞಾನದ ಅರಿವು ಹಾಗೂ ಜನಸಾಮಾನ್ಯರ ಮಾನಸಿಕ ಸಂವೇದನೆ ಮತ್ತು ಸಮಾಜದ ನೀತಿ-ನೀತಿಗಳ, ನ್ಯಾಯ-ಅನ್ಯಾಯದ ವಿಶ್ಲೇಷಣೆ ಇವೆಲ್ಲವನ್ನೂ ಸಹಜವಾಗಿ ತುಂಬಾ ಪ್ರತಿಬಿಂಬಿಸಿದ್ದಾರೆ. ಕಾದಂಬರಿಗಳ ಪಾತ್ರ, ಕಥಾವಸ್ತು ಹಾಗೂ ಸನ್ನಿವೇಶನಗಳ ಚಿತ್ರಣ ಇವುಗಳಲ್ಲಿ ತಮ್ಮ ಆಳವಾದ ಅಧ್ಯಯನ ಮತ್ತು ಅನುಭವಗಳ ಗಾಢವಾದ ಪ್ರತಿಭೆಯನ್ನು ಪ್ರದರ್ಶಿಸಿದ್ದಾರೆ.

ಪರ್ವದ 'ಅರಿಕೆ'ಯಲ್ಲಿ ಭೈರಪ್ಪನವರು ಬರೆಯುತ್ತಾ: [1]"ನಾನು ಬರೆಯುತ್ತಿರುವುದು ಭಾರತದ ಪಾತ್ರಗಳ ಕಥೆಯನ್ನಲ್ಲ, ಮಾನವ ಅನುಭವದ ವಿವಿಧ ಮುಖ, ರೂಪ, ಮಾನವ ಸಂಬಂಧ ಸ್ವರೂಪ ಮತ್ತು ವಿವೇಚನೆಗಳನ್ನು ಎಂಬ ಪ್ರಜ್ಞೆ ನನಗೆ ಉದ್ದಕ್ಕೂ ಇತ್ತು. ಒಂದೊಂದು ಹೊಸ ಪಾತ್ರ ಅಥವಾ ಸನ್ನಿವೇಶಗಳನ್ನು ಬರೆಯುವಾಗಲೂ ಇವುಗಳ ಹೊಸ ಹೊಸ ಆಯಾಮಗಳು ಗೋಚರಿಸುತ್ತಿದ್ದವು" ಎಂದಿದ್ದಾರೆ. 'ಪರ್ವ' ಬರೆದ ಅನುಭವವು ನನಗೆ ಹೊಸ ಹುಟ್ಟುಕೊಟ್ಟಿತ್ತು. ರೂಢಿಯೇ ನಮ್ಮ ಬಹುತೇಕ ನಂಬಿಕೆಗಳ ಮೂಲ. ಇವನ್ನೆಲ್ಲ ಬಿಟ್ಟು ಜೀವನದ ಕೊನೆಯ ಸಾವಿನ ದೃಷ್ಟಿಯಿಂದ ಜೀವನವನ್ನು ನೋಡಿದರೆ ಹೊಸ ಅರಿವು ಹುಟ್ಟಬಹುದು ಎಂಬ ಭಾವನೆ ಬೆಳೆದಿತ್ತು ಎಂಬ ಅನುಭವವನ್ನು ವ್ಯಕ್ತಪಡಿಸಿದ್ದಾರೆ.

ಭೈರಪ್ಪನವರು 'ಪರ್ವ'ದಲ್ಲಿ ಪಾತ್ರಗಳ ಆಲೋಚನಾ ಲಹರಿಗಳನ್ನು ಆ ಪಾತ್ರಗಳ ಪರಿಸರ ಮನೋಭಾವಕ್ಕೆ ಅನುಗುಣವಾಗಿ ಅಭಿವ್ಯಕ್ತಪಡಿಸಿದ್ದಾರೆ. ಪರ್ವ ಕಾದಂಬರಿಯಲ್ಲಿ ನೂರಾರು ಪಾತ್ರಗಳನ್ನು ಚಿತ್ರಿಸಲಾಗಿದೆ. ಮೂಲಭಾರತದಲ್ಲಿ ಅಷ್ಟು ಮುಖ್ಯವಲ್ಲದ ಕೆಲವು ಪಾತ್ರಗಳು ಪರ್ವದಲ್ಲಿ ಪ್ರಾಮುಖ್ಯತೆ ಪಡೆದಿವೆ. ಇಲ್ಲಿ ಭೀಷ್ಮ, ಕೃಷ್ಣದ್ವೈಪಾಯನ ವ್ಯಾಸ, ಶಲ್ಯ, ಧೃತರಾಷ್ಟ್ರ, ಪಾಂಡು, ವಿದುರ, ಧರ್ಮರಾಯ, ಭೀಮ, ಅರ್ಜುನ, ನಕುಲ, ಸಹದೇವ, ಕೃಷ್ಣ, ದುರ್ಯೋಧನ, ದ್ರೋಣ, ಗಾಂಧಾರಿ, ಕುಂತಿ, ಮಾದ್ರಿ, ದ್ರೌಪದಿ ಇನ್ನೂ ಅನೇಕ ಪೌರಾಣಿಕ ಪಾತ್ರಗಳು ಆಧುನಿಕ ಸೃಜನಶೀಲ ಕಾದಂಬರಿಯಲ್ಲಿ, ಯಾವ ರೀತಿ ಈ ಪಾತ್ರಗಳು ಪುನರ್ ಸೃಷ್ಟಿಯಾಗಿವೆ ಎಂಬುದನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಕಾದಂಬರಿಯ ಪ್ರಮುಖ ಪಾತ್ರಗಳ ಚಿತ್ರಣವನ್ನು ಒಂದೊಂದಾಗಿ ಚರ್ಚಿಸಲಾಗುವುದು.

1. ಪರ್ವದ ಅರಿಕೆ

ಭೀಷ್ಮ:-

ಭೀಷ್ಮನು ಶಂತನು ಮತ್ತು ಪರ್ವತ ಸೀಮೆಯ ಗಂಗೆಯ ಎಂಟನೇ ಮಗ ಜನಿಸಿದನು. ಭೀಷ್ಮನ ಹಿನ್ನೋಟದಲ್ಲಿ ತನ್ನ ತಂದೆ ಬೆಸ್ತರ ಹೆಣ್ಣು ಕಾಲಿ(ಸತ್ಯವತಿ)ಯೊಡನೆ ಅನುರಕ್ತವಾಗಿ ಕಾಮದಾಹದಿಂದ ಕೃಶನಾಗಿ ನರಳುವುದು, ತಾನೇನಿಂತು ತಂದೆಗೆ ಬೆಸ್ತರ ಹೆಣ್ಣು ಕಾಲಿ (ಸತ್ಯವತಿ) ಯನ್ನು ಮದುವೆ ಮಾಡಿಸಿ, ತಾನು ಅಖಂಡ ಬ್ರಹ್ಮಚಾರಿಯಾಗಿ ಉಳಿಯುವ 'ಭೀಷ್ಮನ ಪ್ರತಿಜ್ಞೆ' ಮಾಡಿ 'ದೇವವ್ರತ'ನಾಗಿದ್ದ ತಾನು ಭೀಷ್ಮ ಎನಿಸಿಕೊಂಡದ್ದು, ತಮ್ಮನಾದ ಚಿತ್ರಾಂಗದನ ಮರಣಾ ನಂತರ ವಿಚಿತ್ರವೀರ್ಯನಿಗಾಗಿ ಸ್ವಯಂವರದಲ್ಲಿ ಅಂಬೆ, ಅಂಬಿಕೆ, ಅಂಬಾಲಿಕೆಯರನ್ನು ಹೊತ್ತು ತಂದು, ಅಂಬೆ ಶಾಲ್ವರಾಜನನ್ನು ಪ್ರೀತಿಸುತ್ತಿರುವುದನ್ನು ತಿಳಿದ ಭೀಷ್ಮ ಅವಳನ್ನು ವಾಪಸ್ಸು ಕಳುಹಿಸಿದನು. ಆದರೆ ಶಾಲ್ವ ಅವಳನ್ನು ತಿರಸ್ಕರಿಸಿದಾಗ, ಅಂಬೆ ನನ್ನನ್ನು ಕಟ್ಟಿ ಹೊತ್ತುಕೊಂಡು ಹೊದ ಭೀಷ್ಮನೇ ನನ್ನನ್ನು ಮದುವೆಯಾಗಲಿ ಎಂದು ಹೇಳಿದಳು. ಭೀಷ್ಮ ವ್ರತಭ್ರಷ್ಟನಾಗಲು ಇಷ್ಟವಿಲ್ಲದೆ ಅವಳನ್ನು ತಿರಸ್ಕರಿಸಿ, ಅಂಬೆಗೆ ಇಬ್ಬಂದಿ ಸ್ಥಿತಿ ತಂದು ಅವಳ ರೋಷಕ್ಕೆ ಪಾತ್ರನಾದನು.

ಭೀಷ್ಮನು ತಮ್ಮನಾದ ವಿಚಿತ್ರ ವೀರ್ಯನಿಗೆ ಅಂಬಿಕೆ, ಅಂಬಾಲಿಕೆರನ್ನು ಮದುವೆ ಮಾಡಿಸಿದನು. ವಿಚಿತ್ರವೀರ್ಯನು ಮದುವೆಯಾದ ಕೆಲವು ವರ್ಷಗಳಲ್ಲೇ ಕಾಯಿಲೆಯಿಂದ ಮಕ್ಕಳಿಲ್ಲದೆ ನಿಧನನಾದನು. ಆ ಸಂದರ್ಭದಲ್ಲಿ ಸತ್ಯವತಿಯು ಭೀಷ್ಮನಿಗೆ ಮದುವೆಯಾಗುವಂತೆ ಅಪ್ಪಣೆ ಮಾಡಿದಳು. ಕೊನೆಯ ಪಕ್ಷ ತಮ್ಮನ ಇಬ್ಬರು ವಿಧವೆಯರಿಗೂ ನೀನೇ ನಿಯೋಗ ಮಾಡೆಂದಳು. ಆದರೆ ಭೀಷ್ಮ ತನ್ನ ಪ್ರತಿಜ್ಞೆಯನ್ನು ಬಿಡಲು ಒಪ್ಪಲಿಲ್ಲವಾದ್ದರಿಂದ ಸತ್ಯವತಿಯ ಕಾನೀನ ಪುತ್ರನಾದ 'ಕೃಷ್ಣದ್ವೈಪಾಯನ ವ್ಯಾಸ' ರನ್ನು ಕರೆಯಿಸಿ, ಭೀಷ್ಮರೆ ನಿಯೋಗದ ವಿಧಿವಿಧಾನಗಳನ್ನು ತಿಳಿಸಿ, ಅಂಬಿಕೆ ಹಾಗೂ ಅಂಬಾಲಿಕೆಗೆ ವ್ಯಾಸರಿಂದ ನಿಯೋಗ ಮಾಡಿಸಿದರು. ಇದರಿಂದ ಅಂಬಿಕೆಗೆ ಕುರುಡನಾದ ಧೃತರಾಷ್ಟ್ರ, ಅಂಬಾಲಿಕೆಗೆ ರೋಗಿಷ್ಟನಾದ ಪಾಂಡು ಹಾಗೂ ಅಂಬಿಕೆಯ ದಾಸಿಗೆ ವಿದುರರು ಜನಿಸಿದರು. ಭೀಷ್ಮ ಕುರುವಂಶ ಬೆಳೆಸಲು ತನ್ನ ಜೀವನದುದ್ದಕೂ ದುಡಿದನು. ಆದರೆ ಯುದ್ಧದಲ್ಲಿ ಕುರುಕುಲ ನಾಶವಾಗುವುದನ್ನು ತಡೆಯಲಾಗಲಿಲ್ಲ.

ದುರ್ಯೋಧನನು 'ನಿಯೋಗಕ್ಕೆ ಹುಟ್ಟಿದ ಪಾಂಡವರು ಕುರುಕುಲಕ್ಕೆ ಸೇರಿದವರೇ ಅಲ್ಲ ಅಂತ ನಿರ್ಣಯಿಸಿ, ಪಾಂಡವರು ಅಪ್ಪನ ಬೀಜಕ್ಕೆ ಹುಟ್ಟಿದವರೇ ಅಲ್ಲ' ಎಂದು ಪ್ರಚಾರ ಮಾಡಿದನು. ಇದರಿಂದ ಭೀಷ್ಮರಿಗೆ ಗೊಂದಲ ಉಂಟಾಗಿ ವ್ಯಾಸರ ಆಶ್ರಮಕ್ಕೆ ಹೋಗಿ, [2] "ನಿಯೋಗದ ಸಂತಾನವು ನ್ಯಾಯವಾದುದೆ?" ನಿಯೋಗವು ಧರ್ಮವೇ, ಅಧರ್ಮವೇ ಎಂಬುದರ ಧರ್ಮನಿರ್ಣಯವನ್ನು ಕೇಳಿದರು.

2. ಪರ್ವ-ಒಂದು ಸಮೀಕ್ಷೆ, ಪುಟ-16

ಇದರಿಂದ ಕುರುಕುಲದ 'ಪಿತಾಮಹ'ನೆನಿಸಿ ಆ ಕುಲದ ಒಳಿತಿಗಾಗಿ ಜೀವಸವೆಸಿದವನು. ರಾಜ್ಯದಾಸೆ. ಕಾಮದಾಸೆಯನ್ನು ತೊರೆದು ಧರ್ಮಜ್ಞಾನಿನೆಸಿಕೊಂಡಿದ್ದರು. ಅವನ ಕೃತಿಗಳೆಲ್ಲಾ ಧರ್ಮ ಕೃತ್ಯಗಳಾದ್ದವೇ? ಎಂಬ ಸಂಶಯ ಉಂಟಾಯಿತು. ಇದು ವ್ಯಕ್ತಿಯೊಬ್ಬ ಜೀವನದ ಅವಧಿಯಲ್ಲಿಯೇ ತಾನು ಒಮ್ಮೆ ದೃಢವಾಗಿ ನಂಬಿದ್ದ ಮೌಲ್ಯಗಳು ಬದಲಾಗಿ ತಮ್ಮ ಮೌಲಿಕತೆಯನ್ನು ಕಳೆದುಕೊಂಡು ಅವನ ಮನಸ್ಸಿನಲ್ಲಿ ಅನುಮಾನ. ಶಂಕೆಗಳನ್ನು ಮೂಡಿಸಬಹುದೆಂಬುದಕ್ಕೊಂದು ನಿದರ್ಶನವಾಗಿದೆ.

ಪಾಂಡವರು ಕುರುವಂಶಕ್ಕೆ ಸೇರಿದವರೆಂದು ನಿರ್ದಾಕ್ಷಿಣ್ಯವಾಗಿ ಹೇಳದೆ. ಯುದ್ಧ ಬೇಡವೇ ಬೇಡವೆಂದೂ ಹೇಳದೆ ಭೀಷ್ಮ ಯುದ್ಧಕ್ಕೆ ಕಾರಣನಾಗುತ್ತಾನೆ. (3)"ಪಾಂಡು ಪುತ್ರರು ಪರ್ವತ ಸೀಮೆಯ ಜನಕ್ಕೆ ಹುಟ್ಟಿದವರೆಂಬುದು. ಪರ್ವತ ಸೀಮೆಯವಳಾದ ತಾಯಿಯ ಮೇಲಣ ತನ್ನ ಇದುವರೆಗಿನ ಆರೋಪಿತ. ಬ್ರಹ್ಮಚರ್ಯಕ್ಕೆ ಮೂಲವಾಯಿತೆಂಬ ಸುಪ್ತಮನದ ದ್ವೇಷದಿಂದ ಭೀಷ್ಮನು ಕೌರವರ ಪರ ಸೈನ್ಯಾಧಿಪತ್ಯ ವಹಿಸಿರಬೇಕು". ಭೀಷ್ಮ ತನ್ನ ಇಳಿ ವಯಸ್ಸಿನಲ್ಲಿ ಸೈನ್ಯಾಧಿಪತ್ಯವಹಿಸಿ. ಒಂದು ದಪ್ಪ ತಲೆದಿಂಬು ಇಟ್ಟುಕೊಂಡು ರಥದಲ್ಲಿ ಒರಗಿ ಯುದ್ಧರಂಗಕ್ಕಿಳಿದು ಯುದ್ಧದ ಮೊದಲ ಹತ್ತು ದಿನಗಳು ಸಹ ನಿರರ್ಥಕ ಯುದ್ಧ ನಡೆಯುವಂತೆ ಮಾಡಿದನು. ತುಂಬಿದ ರಾಜಸಭೆಯಲ್ಲಿ ದ್ರೌಪದಿಯ ಅಪಮಾನವಾಗುತ್ತಿದ್ದಾಗಲೂ. ಸಹ ಭೀಷ್ಮರಿಗೆ ತಡೆಯಲು ಸಾಧ್ಯವಾಗಲಿಲ್ಲ. ಅಂದರೆ ಭೀಷ್ಮರು ನಾವೆಂದುಕೊಳ್ಳುವಷ್ಟು ವೀರರಾಗಲೀ. ಧರ್ಮಪಾರಾಯಣರಾಗಲೀ ಅಲ್ಲ. ಅಲ್ಲವೇ? ಎಂಬ ಅನುಮಾನ ಮೂಡಿಸುತ್ತದೆ.

'ಕುರುವೃದ್ಧ'. 'ಪಿತಾಮಹ' ನೆನೆಸಿಕೊಂಡ (4) "ಭೀಷ್ಮ ತನಗಾಗಿ ಯಾವುದನ್ನು ಮಾಡದೆ. ಕುರುಕುಲದ ಒಳಿತಿಗಾಗಿ ಮಾಡಿದ ಪ್ರಯತ್ನ 'ಅಂಬಾ. ಅಂಬಿಕಾ. ಅಂಬಾಲಿಕಾ. ಗಾಂಧಾರಿ. ಕುಂತಿ. ಮಾದ್ರಿ' ಮೊದಲಾದ ಹೆಂಗಸರ ಅವಮಾನಕ್ಕೆ ಕಾರಣನಲ್ಲವೇ? ವಂಶಾಭಿವೃದ್ಧಿಗಾಗಿ ಈ ಕುಲದ ಸ್ತ್ರೀಯ ಮಾನಹಾನಿ ಮಾಡಿದಂತಾಯಿತು". ಧರ್ಮ. ದುರ್ಯೋಧನರ ಕಾಲದಲ್ಲಿ ವಂಶದ ಪುರುಷರಿಗಾಗಿ ವಧುಗಳನ್ನು ತರುವುದನ್ನು ಭೀಷ್ಮನು ನಿಲ್ಲಿಸಿಬಿಟ್ಟಿದ್ದರಿಂದ ಮುಂದೆ ಯಾವ ನಾರಿಗೂ ಪೀಡೆ ಆಗಿರಲಿಕ್ಕಿಲ್ಲ ಎಂದು 'ಇರಾವತೀ ಕರ್ವೆ' ರವರು ತಮ್ಮ 'ಯುಗಾಂತ' ಪ್ರಬಂಧ ಲೇಖನದಲ್ಲಿ ಬರೆದಿದ್ದಾರೆ.

(5) "ಕುರುಕ್ಷೇತ್ರ ಯುದ್ಧದ ಮೊದಲ ಹತ್ತು ದಿನಗಳು ಅಂದರೆ ಭೀಷ್ಮ ಸೈನಾಧಿಪತ್ಯ ವಹಿಸಿದ್ದ ದಿನಗಳು. ನಿರರ್ಥಕ ಯುದ್ಧ ನಡೆದದ್ದು. ಯುದ್ಧವನ್ನು ತಡೆಯಲು ಭೀಷ್ಮರು ಮಾಡಿದ 'ಕೊನೆಯ ಪ್ರಯತ್ನ'ವಾಗಿತ್ತು"

3. ಪರ್ವ-ಒಂದು ಸಮೀಕ್ಷೆ. ಪುಟ-73
4. ಯುಗಾಂತ. ಪುಟ-17
5. ಯುಗಾಂತ. ಪುಟ-12

ಎಂದು ಇರಾವತೀಕರ್ವೇರವರ ಅಭಿಪ್ರಾಯ ತನ್ನ ಪ್ರಯತ್ನನಿಷ್ಫಲವಾದ್ದರಿಂದಾಗಿ ಭೀಷ್ಮರು ಸೇನಾಧಿಪತಿ ಪಟ್ಟದಿಂದ ನಿವೃತ್ತನಾಗಿ 'ಶರಶಯ್ಯೆ' ಮೇಲೆ ಮಲಗಲು ನಿಶ್ಚಯಿಸಿ, ಎಲ್ಲರ ಸಹಾಯವನ್ನು ನಿರಾಕರಿಸಿ, ರಣರಂಗದ ಮೇಲೆ ಸುತ್ತುತ್ತಿರುವ ರಣಹದ್ದುಗಳ ನಡುವೆಯೇ ಇರಬಯಸುವ ಭೀಷ್ಮರ ಚಿತ್ರ ರುದ್ರಭಯಂಕರ. ಈ ಚಿತ್ರ ನಮ್ಮೆಲ್ಲರ ಅಂತರಂಗದಲ್ಲಿಯೂ ಭಯ, ಕರುಣ, ನಿಗೂಢತೆಗಳ ಅಲೆಗಳನ್ನೆಬ್ಬಿಸುತ್ತದೆ.

<u>ಕೃಷ್ಣದ್ವೈಪಾಯ್ಯ ವ್ಯಾಸ:</u>

ಕೃಷ್ಣದ್ವೈಪಾಯ್ಯನು ಪರಾಶರ ಋಷಿ ಮತ್ತು ಕಾಲಿ (ಸತ್ಯವತಿ)ಯ ಕಾನೀನಿ ಪುತ್ರ. ವ್ಯಾಸನು ಎಂಟು ವರ್ಷಗಳ ತಾಯಿಯಾದ ಕಾಲಿಯ ಆರೈಕೆಯಲ್ಲಿ ಬೆಳೆದ. ನಂತರ ಪರಾಶರ ಋಷಿ ಮಗನನ್ನು ಸ್ವೀಕರಿಸಿ, ಬ್ರಾಹ್ಮಣನನ್ನಾಗಿ ಮಾಡಿ, ವೇದಪಾಠಗಳನ್ನು ಕಲಿಸಿದನು. ಕಾಲಿ ಮುಂದೆ ಶಂತನುವನ್ನು ಮದುವೆಯಾದ ಮೇಲೆ, ಭೀಷ್ಮನಿಗೆ ವ್ಯಾಸರು ವಾವೆಯ ಸೋದರನಾದನು. ಭೀಷ್ಮ ತನಗೆ ಧರ್ಮಕರ್ಮದ ಸಮಸ್ಯೆ ಬಂದಾಗ ವ್ಯಾಸರಿಂದ ಅದನ್ನು ಕೇಳಿ ಬರೆಹರಿಸಿಕೊಳ್ಳುತ್ತಿದ್ದನು. ಹೀಗೆ ಭೀಷ್ಮನು ನಿಯೋಗವು ಧರ್ಮವೇ ಅಧರ್ಮವೇ ಎಂಬ ಗೊಂದಲ ನಿವಾರಿಸಿಕೊಳ್ಳಲು ವ್ಯಾಸರ ಬಳಿ ಕೇಳಿದಾಗ, ವಿಚಿತ್ರವೀರ್ಯನು ಮಕ್ಕಳಿಲ್ಲದೇ ಸತ್ತು ಕುರುಕುಲವು ಕೊನೆಗೊಳ್ಳುವ ಸ್ಥಿತಿಗೆ ಬಂದಾಗ, ಭೀಷ್ಮ ನಿಯೋಗದಿಂದ ವಂಶವನ್ನು ಬೆಳೆಸುವುದೊಂದೇ ಧರ್ಮಮಾರ್ಗವೆಂದು ನಿಶ್ಚಯಿಸಿ, ವ್ಯಾಸರಿಂದ ಅಂಬಿಕೆ, ಅಂಬಾಲಿಕೆಯರಿಗೆ ನಿಯೋಗ ಮಾಡಿಸಿ, ಮಕ್ಕಳನ್ನು ಪಡೆದ ವೃತ್ತಾಂತವೆಲ್ಲಾ ವ್ಯಾಸರ ಹಿನ್ನೋಟದಿಂದ ಎಳೆ ಎಳೆಯಾಗಿ ಬಿಚ್ಚಿಕೊಳ್ಳುತ್ತದೆ.

ವ್ಯಾಸರು ಎಷ್ಟೋ ವರ್ಷಗಳ ನಂತರ ಸಂಧಿಸಿದ ತಾಯಿಯ ಮಾತನ್ನು ಮೀರಲಾರದೆ ವಿಚಿತ್ರವೀರ್ಯನ ವಿಧವೆ ಹೆಂಡತಿಯರಿಗೆ ನಿಯೋಗ ಮಾಡಲು ಒಪ್ಪಿಕೊಂಡನು. ಆಗ ಭೀಷ್ಮ-ವ್ಯಾಸರನ್ನು ಪ್ರತ್ಯೇಕ ಕರೆದು ನಿಯೋಗದ ಧರ್ಮವಿಧಿ ವಿಧಾನಗಳನ್ನು ಹೇಳಿದನು. ನಿಯುಕ್ತ ನಿಯುಕ್ತೆ ಇಬ್ಬರ ಮೈಗೂ ತುಪ್ಪ ಬಳಿದು ವಿಕಾರ ಮಾಡಿ, ಇಂದ್ರಿಯನಿಗ್ರಹದ ಕಟ್ಟು ಬಿಗಿದು ಪಿತೃಭಾವದ ಭಾರ ತುಂಬಿ, ಭೀಷ್ಮ ಮಾಡಿದ ಧರ್ಮ ವಿಕೃತಿ, ದಾಸಿಯಿಂದ ತಿಳಿದ ವ್ಯಾಸರು ಗಂಡು ಹೆಣ್ಣಿನ ಸಂಯೋಗದ ಸಂಗತಿಗಳನ್ನು ತಿಳಿದು ಅಂಬಿಕೆ ಅಂಬಾಲಿಕೆಯರಿಗೆ ನಿಯೋಗ ಮಾಡಿದರು. ಅಂಬಿಕೆಯ ದಾಸಿಯು ವ್ಯಾಸರನ್ನು ಪ್ರೀತಿಸಿದಳು. ಪ್ರೀತಿಯೋ! ಭಕ್ತಿಯೋ! ಸಂತೋಷವು ಸಹಜವಾಗಿ ಉಕ್ಕುವಂತೆ ಮಾಡಿದವಳು ಅವಳೆ. ಈ ದಾಸಿಗೆ ಹುಟ್ಟಿದ ಮಗ ವಿದುರ ಇವನು ಸೂತನಾಗಬಾರದೆಂದು ಮಗುವನ್ನು ಸ್ವೀಕರಿಸಿ, ಬೆಳೆಸಬೇಕೆಂದು ದಾಸಿ ವ್ಯಾಸನನ್ನು ಬೇಡಿಕೊಂಡರೂ ಅದು ಅವನ ಅಂತರಂಗವನ್ನು ತಟ್ಟದಿದ್ದದ್ದು ವಿಪರ್ಯಾಸದ ಸಂಗತಿಯಾಗಿದೆ.

ವ್ಯಾಸರು ನಿಯೋಗ ಮಾಡಿದ್ದರಿಂದ ಅಂಬಿಕೆ, ಅಂಬಾಲಿಕೆಯರಿಗೆ ಹುಟ್ಟಿದ ಧೃತರಾಷ್ಟ್ರ, ಪಾಂಡು, ಕುರುವಂಶಕ್ಕೆ ಸೇರಿದರು. ದ್ವೈಪಾಯನ ಕಾಮಿಯಲ್ಲ, ಆದರೂ ನಾಲ್ವರು ಹೆಂಗಸರ ಸಂಪರ್ಕ ಮಾಡಿದನು. ಒಲ್ಲದ ಮನಸ್ಸಿನಿಂದ ನಿಯೋಗ ಮಾಡಿಸಿಕೊಂಡ ರಾಜವಿಧವೆಯ ಮಕ್ಕಳು ಒಬ್ಬ ಮದುವೆಗೆ ಮುಂಚೆ, ಮತ್ತೊಬ್ಬ ಮದುವೆಯ ನಂತರ ಅತಿಕಾಮಿಗಳಾದರು. ವೇದಶಾಸ್ತ್ರ ಪಂಡಿತನಾದ ವ್ಯಾಸರಿಂದ ಹುಟ್ಟಿದ ಧೃತರಾಷ್ಟ್ರ, ಪಾಂಡು, ಅತಿಕಾಮಿಗಳಾಗಿ ದುರಂತ ಕಂಡಿದ್ದು ಶೋಚನೀಯ ಸಂಗತಿಯಾಗಿದೆ. ವ್ಯಾಸರು ಐವತ್ತರ ವಯಸ್ಸಿನಲ್ಲಿ ವಂಶದ ಅಪಾರ ವಿದ್ಯೆಯ ಉತ್ತರಾಧಿಕಾರಿಯಾಗಿ ಒಬ್ಬ ಮಗ ಬೇಕು ಎಂದು ಅಪ್ಸರೆಯೊಬ್ಬಳ ಜೊತೆ ಕೂಡಿ 'ಶುಕ ಮಹರ್ಷಿ'ಯನ್ನು ಮಗನನ್ನಾಗಿ ಪಡೆದುದ್ದನ್ನು ಕಾಣಬಹುದು. ವ್ಯಾಸರು ಪಿತೃಋಣ ಗುರುಋಣಗಳೆರಡು ಜೊತೆಜೊತೆಯಲ್ಲಿ ಸಂದಾಯವಾಗಲೆಂದು ಶುಕನನ್ನು ಪಡೆದರು. ಆದರೆ ಶುಕನು [6]"ಅಪ್ಪ ವೇದವನ್ನೆಲ್ಲ ಅಭ್ಯಾಸ ಮಾಡಿದೆ, ಹುಟ್ಟು ಹುಟ್ಟಿದ ಮೇಲೆ ಸಾವು ಇವೆರಡು ಸತ್ಯದ ಎರಡುಮುಖಗಳು. ನಡುವಿನದೆಲ್ಲ ಚಿಂತನೆ, ಹುಟ್ಟಿದ್ದೆಕೆ? ಬದುಕುವುದೇಕೆ? ಸಾಯುವುದೆಲ್ಲಿಗೆ? ಇದಕ್ಕಿಂತ ಹೆಚ್ಚಿನ ತಾತ್ಪರ್ಯ ನನಗೆ ಕಾಣುತ್ತಿಲ್ಲ. ನಿನಗೆ ಕಾಣುತ್ತದೆಯೇ"? ಸಂತಾನವನ್ನು ಸೃಷ್ಟಿಸುವುದರಲ್ಲಿ ನನಗೆ ಅರ್ಥ ಕಾಣುತ್ತಿಲ್ಲ. ಆದ್ದರಿಂದ ಬ್ರಹ್ಮಚರ್ಯವೇ ಶ್ರೇಷ್ಟವೆಂದು ವಾದಿಸಿದ ಹಾಗೂ ಶುಕಮಹರ್ಷಿಯು ಆಹಾರ ತ್ಯಜಿಸಿ ಪಿತೃಋಣ ತೀರಿಸು ವುದರಲ್ಲಿ ತನಗೆ ಅರ್ಥ ಕಾಣುತ್ತಿಲ್ಲವೆಂದು ಪ್ರಾಣ ತೊರೆದನು. ಇದರಿಂದ ವ್ಯಾಸರು ದುಃಖ ಮತ್ತು ಚಿಂತೆಯಲ್ಲಿ ಮುಳುಗುವಂತಾಯಿತು.

ಮಗನ ಸಾವು ಹಾಗೂ ಭೀಷ್ಮರ ಪ್ರಶ್ನೆ ದ್ವೈಪಾಯನರನ್ನು ತಮ್ಮ ಬದುಕಿನ ಗತಕಾಲಕ್ಕೆ ಕೊಂಡೊಯ್ದು ಇಲ್ಲಿ ಹುಟ್ಟು ಮತ್ತು ಸಾವಿನ ಅರ್ಥ ಕಾಣದಾಗುತ್ತದೆ. ಸಾವಿನ ನೆಲೆಯಲ್ಲಿ ನಿಂತುನೋಡಿದಾಗ ಬದುಕು ಅರ್ಥ ಪೂರ್ಣವೂ ಆಗಬಹುದು, ಅರ್ಥಹೀನವೂ ಆಗಬಹುದು. ಮಗನ ಸಾವನ್ನು ಕಾಣುತ್ತಾ ದ್ವೈಪಾಯನರಿಗೆ ನಿಯೋಗದಿಂದ ತಾವುಜನ್ಮ ಕೊಟ್ಟ ಹಾಗೂ ಶುಕಮುನಿಯ ಜನನದ ಪ್ರಸಂಗಗಳು ನೆನಪಿಗೆ ಬರುತ್ತವೆ. ಸಮಗ್ರ ವೇದ ಪಾಠಗಳನ್ನು ಅಧ್ಯಯನ ಮಾಡಿದ ವ್ಯಾಸರು, ಪೈಲಾ, ಸುಮಂತು, ವೈಶಂಪಾಯನ, ಜೈಮಿನಿ ಎಂಬ ನಾಲ್ಕು ಜನ ಶಿಷ್ಯರಿಗೆ ತಾವು ಕಲಿತ ವೇದವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿ, ಒಂದೊಂದನ್ನು ಒಬ್ಬೊಬ್ಬರಿಗೆ ಉಪದೇಶಿಸಿದ್ದಂತ ಮಹಾ ಪಂಡಿತರು. ಆದರೆ ಮಗನಾದ ಶುಕಮುನಿಯು ನಿರಾಹಾರಿಯಾಗಿ ಕುಳಿತಾಗ ವ್ಯಾಸರು ಕಣ್ಣೀರಾಕಿದರು. ಆಗ ಗುರುಗಳು ಎಂದು ಯಾವ ಕಾರಣಕ್ಕೂ ದುಃಖಕ್ಕೆ ಪಕ್ಕಾದವರಲ್ಲ, "ಅಪ್ಪ ನಾನು ಮಾಡುತ್ತಿರುವುದು ತಪ್ಪಲ್ಲದಿರುವಾಗ ನಿಮ್ಮ ಅಳುವಿಗೆ ಅರ್ಥವಿಲ್ಲ. ವೇದದಲ್ಲಿ ನೀವು ಇಷ್ಟೊಂದು ಪಾರಂಗತರಾಗಿ ಏನು ಸಾರ್ಥಕವಾಯಿತು?" ಎಂದು ಶುಕಮುನಿ ಕೇಳಿದರು.

6. ಪರ್ವ, ಪುಟ-491

ಇಲ್ಲಿ ವ್ಯಾಸರು ವೇದಪಾರಂಗತರಾಗಿರುವುದಕ್ಕಿಂತ ಮಗನಲ್ಲಿ ಮಮಕಾರ ಹೊಂದಿದ ಪಿತೃವಾಗಿ ಕಂಡಿದ್ದಾರೆ. ವ್ಯಾಸರ ಹಿನ್ನೋಟಗಳಲ್ಲಿ ಮುಳುಗಿ ಹುಟ್ಟು-ಸಾವು-ಕಾಮಗಳ ನಡುವಿನ ನಿಗೂಢ ಆಯಾಮವನ್ನು ತೆರೆಯುವುದಲ್ಲದೆ, ಪಾತ್ರಗಳಿಂದ ಲೇಖಕರು ಮಾನಸಿಕ ದೂರ ಸಾಧಿಸಿರುವುದನ್ನು ವ್ಯಾಸರ ಪಾತ್ರ ಚಿತ್ರಣದಲ್ಲಿ ಕಾಣಬಹುದು.

ಧೃತರಾಷ್ಟ್ರ:

ಧೃತರಾಷ್ಟ್ರ ಅಂಬಿಕೆಗೆ ವ್ಯಾಸರು ನಿಯೋಗ ಮಾಡಿದ್ದರಿಂದ ಹುಟ್ಟಿದವನು. ಈತನು ಹುಟ್ಟು ಕುರುಡನಾಗಿದ್ದರಿಂದ ರಾಜ್ಯದ ರಾಜನಾಗಿ ಪಟ್ಟಾಭಿಷೇಕ ಮಾಡಲಿಲ್ಲ. ಈತನಿಗೆ ಭೀಷ್ಮನು ಗಾಂಧಾರ ದೇಶದಿಂದ 'ಗಾಂಧಾರಿ' ಯನ್ನು ತಂದು ಮದುವೆ ಮಾಡಿಸಿದನು. ಧೃತರಾಷ್ಟ್ರನಿಗೆ ಗಾಂಧಾರಿಯಲ್ಲಿ ಹದಿನಾಲ್ಕು ಗಂಡು ಮಕ್ಕಳು ಹಾಗೂ ಒಬ್ಬಳು ಹೆಣ್ಣು ಮಗಳು ಹುಟ್ಟಿದಳು. ಧೃತರಾಷ್ಟ್ರ ಗಾಂಧಾರಿಯನ್ನು ಮದುವೆಯಾದ ಮೇಲೆ ಅತಿಕಾಮದಿಂದಾಗಿ ಕುರುಡುದೊರೆ ಹೆಣ್ಣಿನ ರುಚಿಕಂಡು ಭೋಗಿಸಿದ ದಾಸಿಯರ ಸಂಖ್ಯೆ ಎಷ್ಟೋ? ಕುರುಡನಾದರು ಮಹಾರಾಜನಲ್ಲವೆ ಮಹಾರಾಜನಿಂದ ಬಸಿರಾದ ಎಷ್ಟು ದಾಸಿಯರು 'ಮುಟ್ಟಿನೋಡು ಈ ಹೊಟ್ಟೆ' ಯನ್ನು ಎಂದು ತಮ್ಮ ಹೊಟ್ಟೆಯನ್ನು ಕುರುಡು ದೊರೆಯಿಂದ ಮುಟ್ಟಿಸಿಕೊಂಡು ತಮ್ಮ ಬಸಿರಿನ ಸಾಕ್ಷಿ ತೋರಿಸುತ್ತಿದ್ದರು. ಹೀಗೆ ಧೃತರಾಷ್ಟ್ರ ದಾಸಿಯರಲ್ಲಿ ಎಂಬತ್ತಾರು ಮಕ್ಕಳನ್ನು ಪಡೆದನು ಹಾಗೂ ದಾಸಿಯರು ಮತ್ತು ದಾಸಿಪುತ್ರದಿಂದ 'ಸೂತಕೇರಿ'ಯನ್ನು ಬೆಳೆಸಿದನು.

ಧೃತರಾಷ್ಟ್ರ ತನ್ನ ಮಕ್ಕಳಾದ ದುರ್ಯೋಧನ ಹಾಗು ದುಶ್ಯಾಸನರ ದುಶ್ಕೃತ್ಯಗಳಿಗೆ ಬೆಂಬಲ ನೀಡುತ್ತಿದ್ದನು. ತನ್ನ ಮಕ್ಕಳಿಂದ ಮೊಸದ ಜೂಜು ನಡೆಯದಂತೆ ತಡೆಯಲಿಲ್ಲ. ತುಂಬಿದ ರಾಜಸಭೆಯಲ್ಲಿ ದ್ರೌಪದಿಗೆ ಅವಮಾನವನ್ನು ಮಾಡುತ್ತಿರುವುದನ್ನು ಸಹ ತಡೆಯದೆ ಅವಮಾನವಾದ ಮೇಲೆ ನಾಟಕೀಯವಾಗಿ ಸಮಾಧಾನ ಮಾಡುವ ಪ್ರಯತ್ನವಾಗಿ ದ್ರೌಪದಿಗೆ [7]"ನಿನಗೆ ಏನು ವರ ಬೇಕೋ ಕೇಳು, ನೀನು ಕೇಳಿದ್ದು ಕೊಡುವ ಅಧಿಕಾರ ನನಗಿದೆ. ನನ್ನ ಮಗ ದುರ್ಯೋಧನ ರಾಜನಾದರೂ, ರಾಜ್ಯದ ಪರಮಾಧಿಕಾರ ನನ್ನದು. ಕೇಳು ಎಂದ". ಈ ರೀತಿ ವರ ನೀಡುವ ನಾಟಕ ಮಾಡುವ ಬದಲಿಗೆ ಆತ ಮೋಸದ ಆಟ/ಜೂಜನ್ನು ತಡೆಯಬಹುದಿತ್ತು. ಇಲ್ಲಿ ಧೃತರಾಷ್ಟ್ರನು ದ್ರೌಪದಿಯ ಕೋಪದಿಂದ ಮುಕ್ತನಾಗಲು ಸಣ್ಣ ಪ್ರಯತ್ನದಂತೆ ತೋರುತ್ತದೆ. ಆದರೆ ಈ ಪ್ರಯತ್ನ ಮುಂದೆ ನಡೆಯುವ ಯುದ್ಧ ನಡೆಯಲು ಸಾಧ್ಯವಾಗದ ಪ್ರಯತ್ನವಾಗಿತ್ತಷ್ಟೆ ಎನ್ನಬಹುದು.

ದುರ್ಯೋಧನನು ತನ್ನ ಬೀಜಕ್ಕೆ ಹುಟ್ಟಿದವನು ಎಂಬ ಅತಿಯಾದ ವ್ಯಾಮೋಹದಿಂದ, ಧೃತರಾಷ್ಟ್ರನು ಪಾಂಡವರಲ್ಲಿ ಪಕ್ಷಪಾತ ಮಾಡಿ, ಅವರಿಗೆ ದಕ್ಕ ಬೇಕಾದ ರಾಜ್ಯವನ್ನು ನೀಡದೇ ಮಹಾಯುದ್ಧಕ್ಕೆ ಕಾರಣನಾಗಿದ್ದಲ್ಲದೆ, ತನ್ನಮಕ್ಕಳ ಸರ್ವನಾಶದ ಹೊಣೆಯನ್ನು ತಾನೇ ಒತ್ತಂತಾಯಿತು.

7. ಪರ್ವ, ಪುಟ-192

ಯುದ್ಧದ ನಂತರ ಪಾಂಡವರು ಈತನು ಹಾಗೂ ಗಾಂಧಾರಿಯಲ್ಲಿ ಕ್ಷಮೆ ಕೇಳಲು ಬಂದಾಗ ಅವರನ್ನು ಕ್ಷಮಿಸದೇ ಭೀಮನನ್ನು ಕೊಲ್ಲಲು ಮುಂದಾದಾಗ ಭೀಮ [8]"ಕೃಷ್ಣ ಈ ಮುದಿಹಾವಿನ ಯೋಗ್ಯತೆ ನಿನಗಿಂತ ನನಗೆ ಗೊತ್ತು. ಅದಕ್ಕೇ ನಾನು ಬರುವುದಿಲ್ಲ ಅಂದದ್ದು ಎಂದನು". ತನ್ನ ಮಕ್ಕಳನ್ನು ಕೊಂದ ಭೀಮನ ಮೇಲೆ ಪ್ರತೀಕಾರ ತೀರಿಸಿಕೊಳ್ಳಲು ಮುಂದಾದನು. ಆದರೆ ಅದು ವಿದುರನ ಮುನ್ನೆಚ್ಚರಿಕೆಯಿಂದ ಫಲಕಾರಿಯಾಗಲಿಲ್ಲ. ತನ್ನ ಮಕ್ಕಳು ಸರ್ವನಾಶವಾದರು ಸಹ ಧೃತರಾಷ್ಟ್ರ ಪಾಂಡವರಲ್ಲಿ ದ್ವೇಷ ತ್ಯಜಿಸಲಿಲ್ಲದ್ದನ್ನು ಕಾಣಬಹುದು.

ಧೃತರಾಷ್ಟ್ರ ಮತ್ತು ಗಾಂಧಾರಿ ಮಕ್ಕಳೆಲ್ಲರನ್ನು ಕಳೆದುಕೊಂಡದ್ದರಿಂದ ಇವರಿಗೆ ಪಾಂಡವರೆ ಬೆಂಬಲವಾಗಿ ನಿಲ್ಲಬೇಕಾಯಿತು. ಕೃಷ್ಣನು ಗಾಂಧಾರಿಯ ಕಣ್ಣಿನ ಪಟ್ಟಿಯನ್ನು ತೆಗೆಯಲು ಒಪ್ಪಿಸಿ, ಪಟ್ಟಿಯನ್ನು ತೆಗೆಸಿದ್ದರಿಂದ ಧೃತರಾಷ್ಟ್ರನು ಕೋಪಗೊಂಡು 'ಕೃಷ್ಣ ಪಾಪಿ ನೀನು' ಎಂದು ನಿಂದಿಸಿದನು. ಆದರೆ ಮಕ್ಕಳೆಲ್ಲರನ್ನೂ ಕಳಕೊಂಡು ಒಂಟಿಯಾದ ಧೃತರಾಷ್ಟ್ರನಿಗೆ, ಗಾಂಧಾರಿ ತನ್ನ ಕಣ್ಣಿನ ಪಟ್ಟಿ ತೆಗೆದು ಆಸರೆಯಗುವುದರಲ್ಲಿ ಯಾವುದೇ ತಪ್ಪು ಕಾಣುವುದಿಲ್ಲ. ಧೃತರಾಷ್ಟ್ರ ತನ್ನ ಮಕ್ಕಳು ದುಶ್ಕೃತ್ಯ ಮಾಡದಂತೆ ತಡೆಯಲು ಪ್ರಯತ್ನಿಸಬಹುದಿತ್ತು. ಆದರೆ ಆತ ತನ್ನ ಮಕ್ಕಳ ಕೃತ್ಯಗಳಿಗೆ ಬೆಂಬಲ ನೀಡಿ, ಪಾಂಡವರಲ್ಲಿ ಪಕ್ಷಪಾತ ತೋರಿದ ಪರಿಣಾಮವಾಗಿ ಕುರುಕುಲದ ನಾಶಕ್ಕೆ ಪರೋಕ್ಷವಾಗಿ ಕಾರಣವಾಗಿ ತನ್ನ ಇಳಿ ವಯಸ್ಸನ್ನು ದುಃಖದಲ್ಲಿ ಕಳೆಯುವಂತಾಗಿದ್ದು, ವಿಶಾದದ ಸಂಗತಿಯಾಗಿದೆ.

ವಿದುರ:

ವಿದುರನು ಅಂಬಿಕೆಯ ದಾಸಿಪುತ್ರ, ಭೀಷ್ಮರು ವ್ಯಾಸರನ್ನು ಕರೆಯಿಸಿ ವಿಚಿತ್ರವೀರ್ಯನ ವಿಧವೆ ರಾಣಿಯವರಿಗೆ ನಿಯೋಗ ಮಾಡಿಸಿದ ಸಂದರ್ಭದಲ್ಲಿ ಅಂಬಿಕೆಯ ದಾಸಿಗೆ ವ್ಯಾಸರಿಂದ ವಿದುರನು ಜನಿಸಿ, ದಾಸಿ ಪುತ್ರನಾದ್ದರಿಂದ ಈತ ಸೂತನೆನಿಸಿಕೊಂಡನು. ದುರ್ಯೋಧನನು ವಾರಣಾತದಲ್ಲಿ ಲಾಕ್ಷ ಗೃಹದಲ್ಲಿ ಪಾಂಡವರು ಹಾಗೂ ಕುಂತಿಯನ್ನು ಸುಟ್ಟುಹಾಕುವ ಸಂಚು ಮಾಡಿದಾಗ, ವಿದುರನು ಮುನ್ನೆಚ್ಚರಿಕೆ ನೀಡಿದ್ದರಿಂದ ಪಾಂಡವರು ಪಾರಾದರು. ಪಾಂಡವರು 'ರಾಜಸೂಯ' ಯಾಗ ಮಾಡಿದಾಗ, ಅದನ್ನು ಸಹಿಸಿಕೊಳ್ಳದ ದುರ್ಯೋಧನನು ಅವರನ್ನು ಜೂಜಿನಲ್ಲಿ ಸೋಲಿಸುವ ಕುತಂತ್ರ ಮಾಡಿ, ವಿದುರನೆ ಜೂಜಿಗೆ ಧರ್ಮರಾಜನನ್ನು ಕರೆತರುವಂತೆ ಹೇಳಿದರು. ಜೂಜಿನಲ್ಲಿ ಧರ್ಮರಾಜ ಸೋತಾಗ, ಧೃತರಾಷ್ಟ್ರನು ವಿಜಯದಿಂದ ಕುಣಿದಾಗ ಇದು ವಿಜಯವಲ್ಲ, ಸರ್ವನಾಶವೆಂದು ಭವಿಷ್ಯ ನುಡಿದನು. ಇಲ್ಲಿ ವಿದುರನು ಧರ್ಮದ ಪರವಾಗಿ ಮಾತನಾಡಿದನು. ಈತನು ಭವಿಷ್ಯ ನುಡಿದಂತೆ ಕುರುಕ್ಷೇತ್ರ ಯುದ್ಧದಲ್ಲಿ ಕೌರವರ ಸರ್ವನಾಶವಾದುದ್ದನ್ನು ಮನಗಾಣಬಹುದು.

8. ಪರ್ವ, ಪುಟ-660

ಧರ್ಮರಾಯ ಜೂಜಿನಲ್ಲಿ ಸೋತದ್ದರಿಂದ ಅವರು ಅನುಭವಿಸಬೇಕಾದ ಅರಣ್ಯವಾಸ ಮತ್ತು ಅಜ್ಞಾತವಾಸದ ಹದಿಮೂರು ವರ್ಷಗಳ ಕಾಲ ಕುಂತಿಯನ್ನು ತನ್ನ ಮನೆಯಲ್ಲೆ ಆಶ್ರಯಕೊಟ್ಟ ವಿದುರನು ಅವಳಿಗೆ ಧೈರ್ಯ ತುಂಬಿದನು. ಪಾಂಡವರು ಹಾಗೂ ಕೌರವರ ನಡುವೆ ಯುದ್ಧ ಪ್ರಾರಂಭವಾಗುವ ಮೊದಲು, ಧೃತರಾಷ್ಟ್ರನ ಸೂತಪುತ್ರ ಯುಯತ್ಸು ವಿದುರರನ್ನು ಕುರಿತು [9]"ನೀನೇಕೆ ಹೆಂಡತಿ ಮಕ್ಕಳು ಮೊಮ್ಮಕ್ಕಳನ್ನು ಕರೆದುಕೊಂಡು ಕುಂತಿಯ ಜೊತೆ ಪಾಂಡವರ ಕಡೆಯವರು ಬೀಡು ಬಿಟ್ಟಿರುವ ಉಪಪ್ಲಾವ್ಯ ನಗರಕ್ಕೆ ಹೋಗಿಬಿಡಬಾರದು"? ಎಂದು ಸಲಹೆ ನೀಡಿದಾಗ, ವಿದುರನು ನಿರಾಕರಿಸಿದನು. ಯುಯುತ್ಸುವು ತಾನು ಪಾಂಡವರ ಪಕ್ಷ ಸೇರುವ ಹಿಂಗಿತ ವ್ಯಕ್ತಪಡಿಸಿದಾಗ ವಿದುರನು [10]"ಕದ್ದು ಹೋಗಬೇಡ ನಿನ್ನದು ಅನ್ಯಯ. ನನಗೆ ನ್ಯಾಯವೆಂದು ತೋರಿದ ಕಡೆಗೆ ಹೋಗುತ್ತೀನಿ ಅಂತ ಧೈರ್ಯವಾಗಿ ಮುಖಾಮುಖಿ ಹೇಳಿಹೋಗು" ಎಂಬ ಸೂಚನೆ ನೀಡಿದರು. ವಿದುರನು ನ್ಯಾಯದ (ಧರ್ಮದ) ಪರವಾಗಿ ಹೋರಾಡುತ್ತಿದ್ದ ಪಾಂಡವರ ಪರವನ್ನು ಸಹ ವಹಿಸದೇ ಹಸ್ತಿನಾವತಿಯಲ್ಲೇ ಉಳಿದುಕೊಂಡು ತಟಸ್ಥವಾದುದ್ದನ್ನು ಕಾಣಬಹುದು.

ಧೃತರಾಷ್ಟ್ರನಿಗೆ ಯುದ್ಧದ ವರದಿಯನ್ನು ಒಪ್ಪಿಸಲು ಬಂದಿದ್ದ ಸಂಜಯನು, ಧೃತನಿಗೆ ಸಂತೋಷಕರ ಸುದ್ದಿಗಳನ್ನು ಹೇಳಿ, ಸತ್ಯವನ್ನು ಮರೆಮಾಚಿದಾಗ ವಿದುರನು ಅವನಿಗೆ ಬುದ್ಧಿ ಹೇಳಿದನು. ಸಂಜಯನು [11]"ಚಿಕ್ಕಪ್ಪ, ನಾವು ಸೂತರು ನಮ್ಮ ನಮ್ಮ ರಾಜರ, ರಾಜಗಣದ ಶೌರ್ಯ ಪ್ರತಾಪ ವೈಭವಗಳನ್ನು ಉಬ್ಬಿಸುವುದೆ ಅಲ್ಲವೇ ನಮ್ಮ ಕುಲಕಸುಬು"? ಎಂದನು. ವಿದುರ ಯುದ್ಧದ ಸತ್ಯ ಸಂಗತಿಗಳನ್ನು ತನಗೆ ವರದಿಮಾಡುವಂತೆ ಹೇಳಿದನು. ವಿದುರನು ಸೂತರೆಲ್ಲರಿಂದಲೂ 'ಧರ್ಮಜ್ಞ'ನೆಂದು ಗೌರವವನ್ನು ಪಡೆಯುತ್ತಿದ್ದನು. ಆದರೆ ಸೂತರಲ್ಲಿ ಕರ್ಣ ವೀರನೆಂಬ ಹೆಮ್ಮೆ ಪಡೆದಿದರೂ ಸಹ ವಿದುರನಿಗೆ ಕುಂತಿಗೆ ಆಶ್ರಯ ನೀಡಿದ್ದರಿಂದ ಕರ್ಣನು "ಹಾವುಗಳ ತಾಯಿಗೆ ಆಶ್ರಯ ಕೊಡುವ ಹುತ್ತ" ಎಂದು ವಿದುರನನ್ನು ನಿಂದಿಸಿದನು.

ವಿದುರ ಮತ್ತು ಧೃತರಾಷ್ಟ್ರ ನಡುವೆ ಸಹೋದರ ಭಾವವಿದ್ದು, ಚಿಕ್ಕಂದಿನಿಂದಲೂ ಅವರು ಒಟ್ಟಿಗೆ ಬೆಳೆದರು. ಯುದ್ಧದ ಸಂದರ್ಭದಲ್ಲಿ ಸಂಜಯನು ಯುದ್ಧದ ವರದಿಯನ್ನು ಹೇಳುತ್ತಿರುವಾಗ ವಿದುರನು ಧೃತ ಹಾಗೂ ಗಾಂಧಾರಿಯರೊಡನೆ ಸಂತೋಷ ಪಡದೆ ಮೌನವಾಗಿದ್ದಾಗ, ಧೃತರಾಷ್ಟ್ರನು [12]"ಸಂತೋಷವನ್ನು ಹಂಚಿಕೊಳ್ಳುವ ಹೃದಯವಿಲ್ಲದ ಮೇಲೆ ನಾಳೆಯಿಂದ ನೀನು ಇಲ್ಲಿಗೆ ಬರಬೇಡ" ಎಂದು ಅಪ್ಪಣೆ ಮಾಡಿದನು. ಹೀಗೆ ಹಲವು ಬಾರಿ ವಿದುರನನ್ನು ಬರಬೇಡ ಎಂದು ಹೇಳಿ, ಮರುದಿನವೇ ಆತನನ್ನು ಅರಮನೆಗೆ ಬರುವಂತೆ ಹೇಳಿಕಳುಹಿಸುತ್ತಿದ್ದರಿಂದ ವಿದುರನಿಗೆ ಇದೆಲ್ಲವು ಅಭ್ಯಾಸವಾಗಿ ಬಿಟ್ಟಿತ್ತು. ಯುದ್ಧ ನಡೆಯುತ್ತಿರುವ ಸಂದರ್ಭದಲ್ಲಿ ಧೃತರಾಷ್ಟ್ರ ಹಾಗೂ ವಿರುರರು ಸೂತಕೇರಿಯಲ್ಲಿ ಓಡಾಡುತ್ತಿರುವಾಗ, ವಿದುರನು ರಾಜಮನೆತನದವರ ಕಾಮಭಾದೆ ತೀರಿಸುವರೆಂದು ದಾಸಿಯರಿಗೆ

9. ಪರ್ವ, ಪುಟ-522
10. ಪರ್ವ, ಪುಟ-523
11. ಪರ್ವ, ಪುಟ-520
12. ಪರ್ವ, ಪುಟ-518

ಮಹಲುಗಳನ್ನೇನೂ ಕಟ್ಟಿಸಿಕೊಟ್ಟಿರಲಿಲ್ಲ ಎಂದು ಮಾರ್ಮಿಕವಾಗಿ ನುಡಿದುದ್ದು. ಅಂದಿನ ಸಮಾಜ ಸ್ಥಿತಿಯನ್ನು ವಿವರಿಸುತ್ತದೆ. ಇಲ್ಲಿ ಮೇಲು ಕೀಳೆಂಬ ಸಮಾಜದ ಎರಡು ವರ್ಗಗಳು ಸೃಷ್ಟಿಯಾಗಿದ್ದನ್ನು ಕಾಣಬಹುದು.

ವಿದುರನು ಯುದ್ಧದಿಂದಾಗಿ ನಾಗರೀಕ ಸಮಾಜದಲ್ಲಿ ಉಂಟಾಗುವ ಅಸಮತೋಲವನ್ನು, ವಿಪರ್ಯಾಸವನ್ನೂ ಧೃತನಿಗೆ ವಿವರಿಸುತ್ತಾ, ಯುದ್ಧಮುಗಿಯುವ ಹೊತ್ತಿಗೆ ಯಾವ ಪಕ್ಷ ಗೆದ್ದರು ದಾಸಿಯರಲ್ಲಿ ಪ್ರತಿಯೊಬ್ಬರು ಬಸಿರಾಗಿ ಬರುತ್ತಾರೆ. ಈ ಗರ್ಭವೇ ಮುಂದಿನ ಪೀಳಗೆ. ಕ್ಷತ್ರೀಯ ವೀರರೆಲ್ಲಾ ಸತ್ತು ಹೋಗುತ್ತಾರಲ್ಲ ಎಂಬ ಭವಿಷ್ಯ ವಾಣಿಯನ್ನು ವಿದುರ ಆಡಿದ್ದು, ಧೃತರಾಷ್ಟ್ರನನ್ನು ಕಂಗೆಡಿಸುತ್ತದೆ. ಹಸ್ತಿನಾವತಿಯಲ್ಲಿ ಸೂತರು ಕೆಳಮಟ್ಟದ ಜೀವನವನ್ನು ನಡೆಸುತ್ತಾ, ಅಧಿಕಾರಿ ವರ್ಗದವರಿಗೆ ತಮ್ಮ ಸೇವೆ ಸಲ್ಲಿಸಬೇಕಾಗಿತ್ತು. ವಿದುರನು ಧರ್ಮಜ್ಞನಾಗಿದ್ದರೂ ಸಹ ದಾಸೀಪುತ್ರನೆಂಬ ಕಾರಣಕ್ಕಾಗಿ ಈತನಿಗೆ ರಾಜ್ಯ ದೊರೆಯಲಿಲ್ಲ. ಆದರೆ ಪಾಂಡವು ರೋಗಿಯಾಗಿದ್ದರೂ ಸಹ ಆತನಿಗೆ ರಾಜ್ಯ ದೊರೆಯಿತು. ದಾಸಿಯರಲ್ಲಿ ಹುಟ್ಟಿದ ರಾಜರ ಪುತ್ರರುರೆಲ್ಲರೂ ಸೂತರೆನಿಸಿಕೊಳ್ಳುತ್ತಿದ್ದರು.

ಅಂದಿನ ಸಮಾಜದಲ್ಲಿ ಸೂತರಿಗೆ ಯಾವುದೇ ಉನ್ನತ ಸ್ಥಾನವಿರಲಿಲ್ಲ. ಸೂತನಾದ ಅಧಿರಥನು ಸಾಕಿದ್ದರಿಂದ ಕರ್ಣ ಸೂತನಾದ, ಧೃತರಾಷ್ಟ್ರನ ಪುತ್ರನಾದ ಯುಯುತ್ಸವು ಸೂತನಾದ, ಯುದ್ಧದ ವರದಿಯನ್ನು ತಿಳಿಸುವ ಸಂಜಯನು ಸೂತನೆ. ವಿದುರನ ಪತ್ನಿ ಪಾರಶವಿಯು ಸೂತಳು, ವಿರಾಟನ ಹೆಂಡತಿ ಸುದೇಷ್ಣೆ ಹಾಗೂ ಆತನ ಸೇನಾಪತಿ ಕೀಚಕನು ಸೂತನೇ ಆಗಿದ್ದನು. ಈ ಸೂತರು ಕ್ಷತ್ರೀಯ ಸರಿಸಮಾನತ್ವವನ್ನು ಹೊಂದುತ್ತಿರಲಿಲ್ಲ. ವಿದುರನು ಧೃತರಾಷ್ಟ್ರನಿಗೆ ನಿಜ ಸಹೋದರನೇ ಆಗಿದ್ದರೂ, ಅನ್ನವಸ್ತ್ರದ ಹೊರತಾಗಿ, ಯಾವ ಬಾಧ್ಯತೆಯೂ ಇಲ್ಲದ ಸಹೋದರನಾಗಿದ್ದನು. ಧರ್ಮಜ್ಞನಾದ ವಿದುರ ದಾಸೀಪುತ್ರರ ಬವಣೆಯನ್ನು ಸ್ವಯಂ ಅನುಭವಿಸಬೇಕಾಯಿತು. ಈತ ಸೂತನಾಗಿಯೇ ತನ್ನ ಜೀವನವನ್ನು ಕಳೆಯಬೇಕಾಯಿತು. ವಿದುರನು ಧರ್ಮರಾಜನೊಡನೆ ನಿಕಟ ಸಂಬಂಧವನೊಂದಿದ್ದು, ಆತನಿಗೆ ಎದುರಾಗುತ್ತಿದ್ದ ಸಂಕಟಗಳು ಸೂಚನೆಗಳನ್ನು ನೀಡಿ, ಅವನನ್ನು ಪಾರು ಮಾಡುತ್ತಿದ್ದ. ವಿದುರನಿಂದ ಕುಂತಿಗೆ ಧರ್ಮರಾಜ ಜನಿಸಿರಬೇಕು. ವಿದುರನ ಪುತ್ರನಾದ್ದರಿಂದ ಯುದಿಷ್ಟಿರನಿಗೆ 'ಧರ್ಮ'ನೆಂಬ ಹೆಸರು ಬಂದಿರುವ ಸಾಧ್ಯತೆ ಇದ್ದು, ಈ ಕಾರಣದಿಂದ 'ಧರ್ಮನು ವಿದುರನ ಪುತ್ರನಿರಬೇಕೆಂದು ಅನಿಸುತ್ತದೆ' ಎಂದು 'ಇರಾವತೀ ಕರ್ವೆ' ರವರು ಸಂದೇಹ ವ್ಯಕ್ತಪಡಿಸುತ್ತಾ, ಇವರ ಸಂಬಂಧ ಪಿತಾಪುತ್ರರದ್ದಾಗಿರಬಹುದು ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಪಾಂಡು

ಪಾಂಡುವು ಅಂಬಾಲಿಕೆಗೆ ವ್ಯಾಸರು ನಿಯೋಗ ಮಾಡಿದ್ದರಿಂದ ಜನಿಸಿದ. ಈತನು ಹುಟ್ಟು ಬಿಳಚು ರೋಗದಿಂದ ಬಳಲುತ್ತಿದ್ದು. ಧೃತರಾಷ್ಟ್ರ ಹಿರಿಯನಾದರು ಸಹ ಕುರುಡನಾದ್ದರಿಂದ. ಪಾಂಡು ಪಟ್ಟಾಭಿಷಕ್ತನಾದ ಭೀಷ್ಮನ ಕಟ್ಟುನಿಟ್ಟಿನ ಮೇಲ್ವಿಚಾರಣೆಯಲ್ಲಿ ವ್ಯಾಯಾಮ. ಸಮರಾಭ್ಯಾಸ. ಶಿಕ್ಷಣಗಳು ವ್ಯವಸ್ಥಿತವಾಗಿ ಸಾಗಿ ದೃಢಕಾಯನಾಗಿ ಬೆಳೆದ ಈತನಿಗೆ ಅಂಟಿಕೊಂಡ ದೊಡ್ಡ ದೋಷ ಅತಿರತಿಯದು. [13]"ಪಾಂಡುವು ಹದಿನೈದನೇ ವಯಸ್ಸಿನಲ್ಲಿದ್ದಾಗ. ಅನೇಕ ದಾಸಿಯರು ರಾಜಕುಮಾರನ ಪ್ರೇಮವನ್ನು ಗೆದ್ದುಕೊಳ್ಳಲು ಒಬ್ಬರಿಗಿಂತ ಒಬ್ಬರು ಮೇಲೆ ಬಿದ್ದು ಕಾಮದ ಸಕಲ ಕಲೆಗಳನ್ನು ಪ್ರಯೋಗಿಸಿ ಇವನನ್ನು ರಂಜಿಸಿದ್ದರು". ಇದರಿಂದ ಪಾಂಡುವಿಗೆ ವೀರ್ಯನಷ್ಟತನ ಕಾಯಿಲೆ ಅಂಟಿಕೊಂಡಿತು.

ಪಾಂಡುವು ಹದಿಹರಯದಲ್ಲಿ ಭೀಷ್ಮನ ಕಣ್ಣು ತಪ್ಪಿಸಿ ದಾಸಿಯರೊಡನೆ ಅತಿಕಾಮದಲ್ಲಿ ತೊಡಗಿದ್ದರಿಂದ ಮೂರು ವರ್ಷಗಳಲ್ಲೇ ವೀರ್ಯನಷ್ಟವಾದ. ಪಾಂಡುವು ಕುಂತಿಯನ್ನು ಸ್ವಯಂವರದ ಮೂಲಕ ಮದುವೆಯಾದ. ಪಾಂಡುವಿನ ವೀರ್ಯನಷ್ಟವಾದ್ದರಿಂದ ಕುಂತಿಗೆ ಮಕ್ಕಳಾಗಲಿಲ್ಲ. ಇದರಿಂದ ಇಬ್ಬರ ನಡುವೆ ಜಗಳವಾಗುತ್ತಿತ್ತು. ಪಾಂಡುವು ಕುಂತಿಗೆ ಆರ್ಯಪುತ್ರನಿಗೆ ತಕ್ಕ ಹೆಂಡತಿಯಲ್ಲ ಅಂತ ಬೈಯುತ್ತಿದ್ದಾಗ ಕುಂತಿಯು 'ಬೇರೆ ಯಾವ ಹೆಂಗಸಿನಲ್ಲಿ ಇನ್ನೇನಿರುತ್ತೆ? ನಿನ್ನಲ್ಲಿ ಶಕ್ತಿಯಿದ್ದರೆ ನಾನು ತಕ್ಕವಳೇ ಆಗುತ್ತಿದ್ದೆ' ಎಂದಳು. ಆಗ ಅವನ ಕೋಪ ಮಿತಿಮೀರಿ ಕೆನ್ನೆಗೆ ಹೊಡೆದು. [14]"ಶಕ್ತಿಇಲ್ಲ ಅನ್ನುವ ಮಾತು ನಿನ್ನ ಬಾಯಲ್ಲಿ ಬಂತೇನು? ನನ್ನ ಅರಮನೆಯ ಯಾವ ದಾಸಿಯನ್ನು ನಾನು ಬಿಟ್ಟವನಲ್ಲ. ಈಗ ಒಂದು ವರ್ಷದಿಂದ ಬ್ರಹ್ಮ ಚರ್ಯೆಯಲ್ಲಿದ್ದೆ ತಿಳಿದುಕೊ. ನೂರು ದಾಸಿಯರನ್ನು ಸೋಲಿಸಿ ಕೆಡವಿರಬಹುದು ಒಟ್ಟಿನಲ್ಲಿ". ಎಂದು ತನ್ನ ಪ್ರತಾಪವನ್ನು ಕೊಚ್ಚಿಕೊಳ್ಳುತ್ತಿದ್ದನು. ಆದರೆ ಮದುವೆಯಾಗಿ ಎರಡು ವರ್ಷವಾದರೂ ಕುಂತಿಗೆ ಮಕ್ಕಳಾಗಲಿಲ್ಲದ್ದು. ಪಾಂಡುವಿನ ದೋಷದಿಂದ ಎಂಬುದನ್ನು ತಿಳಿಯಬಹುದು.

ಪಾಂಡು ವೀರ್ಯನಷ್ಟತೆಯನ್ನು ತಿಳಿಯದ ಭೀಷ್ಮ ಕುಂತಿಗೆ ದೋಷವಿರಬಹುದು ಎಂದು ಊಹಿಸಿ ತನ್ನ ಸೈನ್ಯ ಜೊತೆಗೆ ಇಪ್ಪತ್ತು ಗಾಡಿ. ವಸ್ತ್ರ. ಪಾತ್ರೆ. ಕಂಬಳಿ. ಒಡವೆ ಮೊದಲಾದವುಗಳನ್ನು ಹೇರಿಸಿಕೊಂಡು ಮದ್ರದೇಶದಿಂದ 'ಮಾದ್ರಿ' ಯನ್ನು ತಂದು ಪಾಂಡುವಿನೊಡನೆ ಮದುವೆ ಮಾಡಿಸಿದ. ಆದರೆ ಪಾಂಡು. ಕುಂತಿ ಮತ್ತು ಮಾದ್ರಿಯರ ಋತುಸ್ರಾವವನ್ನು ತಡೆದು ನಿಲ್ಲಿಸಲಾಗದ ಹತಾಶೆಯಲ್ಲಿ ಹಿಮಾಲಯಕ್ಕೆ ಹೋಗಿ ತಪ್ಪಸ್ಸು ಮಾಡುವ ನಿರ್ಧಾರ ಮಾಡಿದ. ತನ್ನ ಹೆಂಡತಿಯರೊಡನೆ ಪಾಂಡುವು ಹಿಮಾಲಯಕ್ಕೆ ಹೋಗಿ ಅಲ್ಲಿ ತನ್ನ ಕಾಯಿಲೆಗೆ ಚಿಕಿತ್ಸೆ ಪಡೆಯಲು ಆರಂಭಿಸಿದನು. ಹಸ್ತಿನಾವತಿಯಲ್ಲಿ

13. ಪರ್ವ, ಪುಟ-50
14. ಪರ್ವ, ಪುಟ-49

ಧೃತರಾಷ್ಟ್ರನಿಗೆ ಗಾಂಧಾರಿಯೊಡನೆ ಮದುವೆಯಾದ ವಿಚಾರವನ್ನು ತಿಳಿದ ಪಾಂಡುವು ರಾಜ್ಯವನ್ನು ಕಳೆದುಕೊಳ್ಳಬೇಕಾಗುವುದೆಂಬ ಭಯದಲ್ಲಿ ತನ್ನ ಅಣ್ಣನಿಗೆ ಮಕ್ಕಳಾಗುವ ಮೊದಲು ತನಗೆ ಮಕ್ಕಳಾಗಬೇಕೆಂದು ಬಯಸಿದ್ದು ಮುನ್ನೆಚ್ಚರಿಕೆಯಾಗಿದೆ.

ಪಾಂಡುವು ತನ್ನ ಚಿಕಿತ್ಸೆ ಫಲಕಾರಿಯಾಗೂವವರೆಗೂ ಕಾಯದೇ ತನ್ನ ಪಟ್ಟಮಹಿಷಿ ಕುಂತಿಯ ಮನವೊಲಿಸಿ ನಿಯೋಗಕ್ಕೆ ಒಪ್ಪಿಸಿ ದೇವಜನಾಂಗದ ಧರ್ಮಾಧಿಕಾರಿಯನ್ನು ಕರೆಯಿಸಿ. ನಿಯೋಗದ ಮೊದಲು ಕುಂತಿಯಿಂದ "ಈ ಪುರುಷನೊಡನೆ ನಾನು ಮೋಹಗೊಳ್ಳುವುದಿಲ್ಲ. ಅವನು ಸಮೀಪಸ್ಥನಾಗಿರುವಾಗ ನನ್ನ ಮನಸ್ಸೆಲ್ಲಾ ಪತಿಯಲ್ಲಿಲೀನವಾಗಿರುತ್ತದೆ. ಸಂತಾನಾಪೇಕ್ಷೆಯು ವಿನಾ ನನ್ನಲ್ಲಿ ಬೇರೆ ಬಯಕೆ ಇರುವುದಿಲ್ಲ. ಗರ್ಭ ಕಟ್ಟಿದುದು ಖಚಿತವಾದ ತಕ್ಷಣ ನಾನು ಈತನನ್ನು ಪಿತೃ ಸಮಾನನೆಂದು ಭಾವಿಸಿ ದೂರವಾಗುತ್ತೇನೆ" ಎಂದೆಲ್ಲಾ ಪ್ರತಿಜ್ಞೆ ಮಾಡಿಸಿದ್ದು. ಗರ್ಭದಾನ ಮಾಡಿದವನೆಂದು ಅವನಲ್ಲಿ ಕುಂತಿಗೆ ಮೋಹ ಬೆಳೆಯಬಾರದೆಂಬ ಭಯದಿಂದ ಎನ್ನಬಹುದು. 'ಧರ್ಮಾಧಿಕಾರಿ'ಯಿಂದ ಕುಂತಿಗೆ ನಿಯೋಗ ಮಾಡಿಸಿ. 'ಧರ್ಮರಾಜ'ನನ್ನು ಪಡೆದ ಎರಡನೇ ಬಾರಿ ದೇವಗಣದ ಸೈನ್ಯ ಮುಖ್ಯಸ್ಥ 'ಮರುತ್' ನಿಂದ ನಿಯೋಗ ಮಾಡಿಸಿ. 'ಭೀಮ'ನನ್ನು ಪಡೆದ ನಂತರ ಕುಂತಿಗೆ ದೇವಲೋಕದ 'ಇಂದ್ರ' ನಿಂದ ನಿಯೋಗ ಮಾಡಿಸಿ 'ಅರ್ಜುನ'ನ್ನು ಪಡೆದ. ಕುಂತಿಗೆ 'ಕಾನೀನ ಪುತ್ರ' ನಿರುವುದು ಪಾಂಡುವಿಗೆ ತಿಳಿದರು ಅವನನ್ನು ಮಗನೆಂದು ಸ್ವೀಕರಿಸಲು ಪಾಂಡುವಿನ ಮನ ಒಪ್ಪಲಿಲ್ಲ. ಅಲ್ಲಿ ದುರ್ವಾಸ ಇವನ (ಪಾಂಡುವಿನ) ಸಮ್ಮತಿಯಿಂದೇನು ಕುಂತಿಗೆ ಬೀಜಪೇಕ್ಷಣ ಮಾಡಿದ್ದಲ್ಲವಲ್ಲ ಎಂದಿರಬೇಕು.

ಪಾಂಡುವು ತನ್ನ ಎರಡನೇ ಹೆಂಡತಿ 'ಮಾದ್ರಿ' ಗೂ ಸಹ ದೇವಲೋಕದ 'ಅವಳ ವೈದ್ಯ'ರಿಂದ ನಿಯೋಗ ಮಾಡಿಸಿ. ನಕುಲ-ಸಹದೇವರೆಂಬ ಅವಳ ಮಕ್ಕಳನ್ನು ಪಡೆದ. ಪಾಂಡುವು ತನ್ನ ಹೆಂಡತಿಯರಿಗೆ ನಿಯೋಗ ಮಾಡಿಸಿದಾಗಲೆಲ್ಲಾ ಪ್ರತಿಜ್ಞೆ ಮಾಡಿಸುತ್ತಿದ್ದ. ಮಾದ್ರಿಗೆ ಪ್ರತಿಜ್ಞೆ ಮಾಡಿಸಿದ್ದು. ಅವಳ ಕಾಮಕಲಾ ಪರಿಣತಿಯ ಹೆಚ್ಚಿನ ಭೀತಿಯಿಂದಾಗಿ ಎನ್ನಬಹುದು. ಈ ರೀತಿ ನಿಯೋಗದಿಂದ ಐದು ಮಕ್ಕಳನ್ನು ಪಡೆದರು ಸಹ ತನ್ನದೇ ಬೀಜದಿಂದ ಮಗುವನ್ನು ಪಡೆಯಬೇಕೆಂಬ ಆಸೆಯನ್ನು ಹೊಂದಿದ್ದು. ಮಾದ್ರಿಯೊಡನೆ ಹಠದ ಸಂಭೋಗಾವಧಿಯಲ್ಲಿ ಉದ್ವೇಗದ ಒತ್ತಡ ತಡೆದುಕೊಳ್ಳುವ ಸಾಮರ್ಥ್ಯವಿಲ್ಲದೇ ಸ್ತಂಬಿಸಿ ಸುರತದಲ್ಲೆ ಸಾವು ಕಾಣುತ್ತಾನೆ.

15. ಪರ್ವ, ಮಟ-72

ಎನ್.ಗುರುರಾಜ್ ರವರು ಪರ್ವ: ಪ್ರಜನನ ಕ್ರಿಯೆ ಎಂಬ ಲೇಖನದಲ್ಲಿ [16]"ಪಾಂಡು ಭೈರಪ್ಪನವರು ಹೇಳಿರುವಂತೆ ನಾಲ್ಕಾರು ವರ್ಷಗಳ ಅತಿ ಸಂಭೋಗದಿಂದ ಷಂಡನಾಗಲಿಲ್ಲ. ದಾಸಿಯರ ಪ್ರಚೋದನೆ ಜೊತೆಗೆ ಉತ್ಸಾಹ ಹಾಗೂ ಭೀಷ್ಮನಿಗೆ ಕಾಣದಂತೆ ಅನುಭವಿಸುವ ಆತುರದಲ್ಲಿ ಶೀಘ್ರಸ್ಖಲನ ದೌರ್ಬಲ್ಯವು ಪಾಂಡುವಿಗೆ ಅಂಟಿಕೊಂಡಿರಬಹುದು". ಮಾದ್ರಿ ಹೇಳುವ 'ನನ್ನ ತಿಳುವಳಿಕೆ ಇದ್ದಷ್ಟು ಮಾಡಿದೆ ಅದರಿಂದ ಮಹಾರಾಜನಿಗೂ ಸಂತೋಷವಾಗುತ್ತಿತ್ತು ಫಲವಾಗಲಿಲ್ಲ ಅಷ್ಟೆ. ವೈದ್ಯರ ಔಷಧಿಯನ್ನು ರೋಗಿ ತುಂಬ ಮೆಚ್ಚಿದರು. ರೋಗ ಗುಣವಾಗಲಿಲ್ಲ ಅನ್ನುವ ಹಾಗೆ' ಎಂಬ ಹೇಳಿಕೆ ವಿಶ್ಲೇಷಿಸಿದಾಗ ಪಾಂಡುವಿಗಿದ್ದ ದೌರ್ಬಲ್ಯ ಪ್ರಜನನ (ಹುಟ್ಟಿಸುವ) ಸಾಮರ್ಥ್ಯವಿಲ್ಲದ್ದು ಅಥವಾ ಶೀಘ್ರಸ್ಖಲನದ್ದು ಎಂದು ಅರ್ಥೈಸಬಹುದೇ ಹೊರತು ಷಂಡತ್ವದಲ್ಲ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಧರ್ಮರಾಯ (ಯುಧಿಷ್ಠಿರ)

ಧರ್ಮರಾಯನು ಕುಂತಿಗೆ ದೇವಲೋಕದ ಧರ್ಮಾಧಿಕಾರಿಯಿಂದ ನಿಯೋಗ ಮಾಡಿಸಿದ್ದರಿಂದ ಜನಿಸಿದವನು. ಈತನು ಶಾಂತ ಸ್ವಭಾವದವನಾಗಿದ್ದನು. ದ್ರುಪದ ರಾಜನ ಮಗಳು ದ್ರೌಪದಿಯ ಸ್ವಯಂವರದಲ್ಲಿ ಅರ್ಜುನನು ಅವಳನ್ನು ಗೆದ್ದು ತಂದ. ಅರ್ಜುನ ಮತ್ತು ಭೀಮರು ಅವಳಿಗಾಗಿ ಜಗಳವಾಡುತ್ತಿದ್ದಾಗ ಕುಂತಿ ಧರ್ಮನಿಗೆ ನಿಜ ಹೇಳುವಂತೆ ಕೇಳಿದಾಗ [17]"ಅಮ್ಮಾ ಇವಳು ಅರ್ಜುನ ಭೀಮರಲ್ಲಿ ಯಾರನ್ನು ಮದುವೆಯಾದರೂ ಒಂದು ಅಧರ್ಮ ಉಂಟಾಗುತ್ತೆ. ಹಿರಿಯನಿಗೆ ವಿವಾಹವಾಗದೆ ಕಿರಿಯರು ಮಾಡಿಕೊಳ್ಳುವುದು ಆರ್ಯ ಪದ್ಧತಿಯೇ"? ಎಂದು ಹೇಳಿ ದ್ರೌಪದಿಯ ಮೇಲೆ ತನಗಿದ್ದ ಆಸೆಯನ್ನು ವ್ಯಕ್ತಪಡಿಸಿದ. ಕುಂತಿ ತನ್ನ ಮಕ್ಕಳಲ್ಲಿ ಒಗ್ಗಟ್ಟನ್ನು ಮೂಡಿಸಲು ಐವರು ಸಹ ಅವಳನ್ನು ಮದುವೆಯಾಗಲು ಒಪ್ಪಿಗೆ ಸೂಚಿಸಿದಾಗ. ದ್ರುಪದ ರಾಜನಿಗೆ [18]"ಧರ್ಮನು ನಾವು ಗೆದ್ದ ಕನ್ಯೆಯನ್ನು ನಾವು ಐವರು ಮದುವೆಯಾಗುತ್ತೇವೆ. ಈಗ ನಿನ್ನ ಮಗಳು ನಮ್ಮ ಸ್ವತ್ತು. ಅದರಲ್ಲಿ ಅಡ್ಡ ಬರುವ ಅಧಿಕಾರ ಯಾರಿಗೂ ಇಲ್ಲ" ಎಂದು ಹೇಳಿದ. ರಾಜ್ಯ ಸಿಂಹಾಸನವು ಹಿರಿಯನಿಗೆ ಮಾತ್ರ ಸೇರುವಂತೆ ದ್ರೌಪದಿ ಹಿರಿಯ ಧರ್ಮನಿಗೆ ಮಾತ್ರ ವಿವಾಹದಲ್ಲಿ ದಾನವಾಗಿರಬೇಕು. ಅವನು ಪಟ್ಟವೇರಿದರೂ ತಮ್ಮಂದಿರಿಗೆ ರಾಜ್ಯ ಭೋಗ್ಯದಲ್ಲಿ ಸಮಾನಾಧಿಕಾರ ವಿರುವಂತೆ ದ್ರೌಪದಿ ಮೇಲೆ ಎಲ್ಲರಿಗೂ ಪೂರ್ಣಾಧಿಕಾರವಿರುವಂತೆ ಹಾಗೂ ದ್ರೌಪದಿಗೆ ಹುಟ್ಟಿದ ಮಕ್ಕಳಿಗೆಲ್ಲಾ ಹಿರಿಯನಾದ ಧರ್ಮನ ಹೆಸರಿನಲ್ಲಿ ನಾಮಕರಣವಾಗಬೇಕೆಂಬ ನಿಯಮಗಳನ್ನು ರೂಪಿಸಿ ಪಾಂಡವರ ಜೊತೆ ದ್ರೌಪದಿಯ ವಿವಾಹ ಮಾಡಿಸಲಾಯಿತು. [19]"ಧರ್ಮರಾಯನ ಪಟ್ಟಮಹಿಷಿಯಾಗಿ ಅವನ ರಾಜ್ಯದ ಪ್ರತಿರೂಪವಾಗಿ ಅವನ ಜೂಜಿನ ಪಣವಾಗಿ. ಅವಮಾನಿತಳಾಗಿ ದ್ರೌಪದಿಯು ಕಷ್ಟಪಡಲು ಧರ್ಮರಾಯನೇ ಕಾರಣನಾಗಿರುವುದನ್ನು ತಿಳಿಯಬಹುದು".

16. ಪರ್ವ, ಒಂದು ಸಮೀಕ್ಷೆ, ಪುಟ-61
17. ಪರ್ವ, ಪುಟ-164
18. ಪರ್ವ, ಪುಟ-168
19. ಪರ್ವ, ಪುಟ-169

ಧೃತರಾಷ್ಟ್ರನು ಪಾಂಡವರಿಗೆ 'ಖಾಂಡವ ಪ್ರಸ್ಥ' ವನ್ನು ನೀಡಿ ಅಲ್ಲಿ ಅಧಿಕಾರ ಸ್ಥಾಪಿಸುವಂತೆ ಹೇಳಿದನು. ಪಾಂಡವರು ಖಾಂಡವಪ್ರಸ್ಥ ಕಾಡನೆಲ್ಲ ಕಡಿದು ದಹನ ಮಾಡಿ ಅಲ್ಲಿ ರಾಜ್ಯವನ್ನು ಕಟ್ಟಿಕೊಂಡು. ಅಲ್ಲಿ ಯಾದವರ ಕೃಷ್ಣನ ಸಹಾಯದಿಂದ ಮಯಾಸಭೆಯನ್ನು ಮಯಾ ಎಂಬ ರಾಕ್ಷಸನ ಸಹಾಯದಿಂದ ಕಟ್ಟಿಸಿ, ಸುಂದರ ಪಟ್ಟಣವಾಗಿ ರೂಪಿಸಿ ಇದಕ್ಕೆ 'ಇಂದ್ರಪ್ರಸ್ಥ' ಎಂಬ ಹೆಸರಿಟ್ಟನು. ಧರ್ಮರಾಜನು ಇಲ್ಲಿ ಸಿಂಹಾಸನದೀಶನಾದ. ಧರ್ಮರಾಜನು ತನ್ನ ತಮ್ಮಂದಿರನ್ನು ನಾಲ್ಕು ದಿಕ್ಕಿಗೂ ದಿಗ್ವಿಜಯಕ್ಕಾಗಿ ಕಳುಹಿಸಿದ. ಕೃಷ್ಣನು ಭೀಮನಿಂದ ಜರಾಸಂಧನನ್ನು ಕೊಲ್ಲಿಸಿದ್ದರಿಂದ ಅನೇಕ ರಾಜರು 'ರಾಜಸೂಯ' ಯಾಗ ಮಾಡಲು ಕಪ್ಪಕಾಣಿಕೆಗಳನ್ನು ನೀಡಿದರು. ರಾಜಸೂಯಯಾಗ ಮಾಡಿದ ಧರ್ಮರಾಯ ಸಾಮ್ರಾಟನೆನಿಸಿಕೊಂಡನು. ಆದರೆ ಧರ್ಮರಾಯನು ದುರ್ಯೋಧನ ಹಾಗೂ ಶಕುನಿಯರ ಕುತಂತ್ರಕ್ಕೆ ಬಲಿಯಾಗಿ ಕಷ್ಟ ಅನುಭವಿಸುವಂತಾಯಿತು.

ಪಾಂಡವರು ಪ್ರವರ್ಧಮಾನಕ್ಕೆ ಬರುತ್ತಿರುವುದನ್ನು ಕಂಡಂತಹ ದುರ್ಯೋಧನನು ಇವರನ್ನು ಯುದ್ಧದಲ್ಲಿ ಸೋಲಿಸಲು ಸಾಧ್ಯವಿಲ್ಲವೆಂದು ತಿಳಿದು, ಧರ್ಮರಾಜನನ್ನು ಜೂಜಿಗೆ ಕರೆದನು. ಜೂಜಿಗೆ ಕರೆದರೆ ಬರುವುದಿಲ್ಲವೆನ್ನುವುದು ಆರ್ಯಧರ್ಮವಲ್ಲ ಎಂದು ಹೇಳಿ ಧರ್ಮರಾಜ ಜೂಜಿನಲ್ಲಿ ಆಡಿ ರಾಜ್ಯ, ತಮ್ಮಂದಿರು ಹಾಗೂ ತನ್ನನ್ನು ಸೋತು ಕೊನೆಗೆ ದ್ರೌಪದಿಯನ್ನು ಪಣಕಿಟ್ಟು ಸೋತು, ದ್ರೌಪದಿಯ ಅವಮಾನಕ್ಕೆ ಕಾರಣನಾದನು. ಇದರಿಂದ ಕೋಪಗೊಂಡ ಭೀಮ ಧರ್ಮರಾಜನ ಎರಡುಕೈಗಳನ್ನು ಸುಡುವುದಾಗಿ ಕೂಗಾಡಿದನು. ಜೂಜಿನಲ್ಲಿ ಸೋತ ಧರ್ಮರಾಜ [(20)] "ರಾಜಸೂಯ ಮಾಡಿದ ನಾವು ಈ ಸೋಲಿನ ಅವಮಾನ ಸಹಿಸಬೇಕೆ? ಮತ್ತೆ ಹೋಗಿ ಆಡಿ ಅವನನ್ನು ಸೋಲಿಸದಿದ್ದರೆ ಪಾಂಡು ಕುಮಾರರಾದ ನಮ್ಮ ಗೌರವ ಏನಾಗಬೇಕು? ಈಗ ನನಗೆ ಅರ್ಥವಾಗಿದೆ". ದಾಳದಲ್ಲಿಯೇ ಏನು ಮೋಸ ಮಾಡಿದ್ದಾನೆ. ಬೆಸ ಸಂಖ್ಯೆ ಬೀಳದ ರೀತಿಯಲ್ಲಿ ಕೊರೆದ ದಾಳ ಅದುಬೇಡ ಬೇರೆ ಬೇರೆ ದಾಳ ತರಿಸು. ಅಥವಾ ಇಲ್ಲಿ ನೋಡು ನಾನು ತಂದಿರುವ ದಾಳಗಳಲ್ಲಿ ಆಡು ಅನ್ನುತ್ತೀನಿ. ಅದು ಹೇಗೆ ಗೆಲ್ಲುತ್ತಾನೆ ನೋಡೋಣ ಎಂದು ತಮ್ಮಂದಿರನ್ನು ಒಪ್ಪಿಸಿದನು. ಈ ಸನ್ನಿವೇಶದಲ್ಲಿ ಧರ್ಮನು ಜೂಜಿನಲ್ಲಿ ಸೋತರು ಸಹ ಬುದ್ಧಿ ಕಲಿಯದೇ ಅದೇ ತಪ್ಪನ್ನು ಮುಂದುವರೆಸಿರುವುದನ್ನು ಕಾಣಬಹುದು.

ಧರ್ಮರಾಜನಿಂದಾಗಿ ಪಾಂಡವರು, ದ್ರೌಪದಿಯು ಹನ್ನೆರಡು ವರ್ಷ ವನವಾಸ ಹಾಗೂ ಒಂದು ವರ್ಷ ಅಜ್ಞಾತವಾಸವನ್ನು ಅನುಭವಿಸಬೇಕಾಯಿತು. ಆಗ ಕುಂತಿಯು ದ್ರೌಪದಿಯನ್ನು ಕುರಿತು [(21)] "ಮಗಳೇ ಧರ್ಮ ಜೂಜಾಡಿ ಅವಿವೇಕ ಮಾಡಿದನೆಂದು ಅವನನ್ನು ತಿರಸ್ಕರಿಸಬೇಡ" ಎಂದು ಹೇಳಿದಳು. ಧರ್ಮರಾಯ ಜೂಜಿನಲ್ಲಿ ಸೋತಾಗಿನಿಂದ ದ್ರೌಪದಿಗೆ ಮುಖ ಕೊಟ್ಟು ಮಾತಾಡುವುದನ್ನು

20. ಪರ್ವ, ಪುಟ-193
21. ಪರ್ವ, ಪುಟ-197

ನಿಲ್ಲಿಸಿದ. ಧರ್ಮನು ಜಯದ್ರಥನು ದ್ರೌಪದಿಯನ್ನು ಹೊತ್ತುಕೊಂಡು ಹೋಗುವಾಗ ತಡೆದ ಭೀಮ. ಅವನನ್ನು ಕೊಲ್ಲಲು ಮುಂದಾದಾಗ ಅವನನ್ನು ಧರ್ಮರಾಯ ನೀತಿ ಬೋಧಿಸಿ. ತಡೆದು ಮುಂದೆ ಯುದ್ಧದಲ್ಲಿ ಅಭಿಮನ್ಯು ಜಯದ್ರಥನಿಂದ ಸಾಯಲು ಕಾರಣನಾದನು. ವಿರಾಟನಗರದಲ್ಲಿ ಒಂದು ವರ್ಷ ಅಜ್ಞಾತ ಅನುಭವಿಸುವಾಗ ಧರ್ಮರಾಯ 'ಕಂಕ' ಎಂಬ ಹೆಸರಿನ ಧರ್ಮನೀತಿ ಹೇಳುವ ಬ್ರಾಹ್ಮಣನಾಗಿ ವಿರಾಟನೊಡನೆ ಜೂಜಿನಲ್ಲಿ ಕಳೆದನು. ವಿರಾಟನಗರದಲ್ಲಿ ಕೀಚಕನು ದ್ರೌಪದಿಯನ್ನು ಬಲವಂತ ಮಾಡಿ ಭೋಗಿಸಲು ಮುಂದಾಗಿ ಅವಳನ್ನು ರಾಜನ ಎದುರೆ ಒದೆದರು ಧರ್ಮರಾಯ ಸಹಿಸಿಕೊಳ್ಳುವಂತೆ ಹೇಳಿದನು. ಇಲ್ಲಿಯೂ ಸಹ ದ್ರೌಪದಿಯ ಅವಮಾನವನ್ನು ತಡೆಯಲು ಧರ್ಮರಾಜ ಪ್ರಯತ್ನಿಸದೇ, ಸಹಿಸುವಂತೆ ಹೇಳಿರುವುದನ್ನು ಮನಗಾಣಬಹುದು.

ಧರ್ಮರಾಯನು ಯುದ್ಧದ ಆರಂಭದಲ್ಲಿ ನೀತಿ ನಿರೂಪಿಸಲು ಎರಡು ಪಕ್ಷಗಳು ಮುಂದಾದಾಗ, ಶಲ್ಯನಿಗೆ [22]"ಮಾವ ಧರ್ಮವೇನು ಅಂತ ನಿನಗೆ ಈಗ ಗೊತ್ತಾಗಿದೆ. ನಾವು ಎರಡೂ ಕಡೆಯೂ ಮನಸ್ಸು ಬದಲಾಯಿಸಿದವನು ಪಕ್ಷ ಬದಲಿಸಬಹುದಂತ ಸಾರಿದಾಗ ನೀನು ಸೈನ್ಯದೊಡನೆ ನಮ್ಮ ಕಡೆಗೆ ನಡೆದು ಬಾ" ಎಂದು ಹೇಳಿದನು. ಯುದ್ಧದ ಸಂದರ್ಭದಲ್ಲಿ ಕರ್ಣನು ದ್ರೋಣನಂತೆ ತನ್ನನ್ನು ಸೆರೆಹಿಡಿಯಬಹುದೆಂಬ ಭಯದಿಂದ ಧರ್ಮರಾಯ ತನಗೆ ಬಾಣ ತಗುಲಿದ ತಕ್ಷಣ ಬಿಡಾರಕ್ಕೆ ಹೋಗಿ ದ್ರೌಪದಿಯಿಂದ ಶುಶ್ರೂಷೆ ಪಡೆಯುತ್ತಿದ್ದ. ಆಗ ಅರ್ಜುನನ್ನು ಧರ್ಮರಾಯನ ಕ್ಷೇಮ ವಿಚಾರಿಸಲು ಬಂದಾಗ ಕರ್ಣನನ್ನು ಕೊಂದಾಯಿತೆ? ಎಂದು ಕೇಳಿದಾಗ ಇಲ್ಲ ಎಂದ ಅರ್ಜುನನನ್ನು ಮಾತಾಡಲು ಬಿಡದ ಧರ್ಮನು [23]"ಇನ್ನು ಮಾತು ಬೇಡ. ಬಾಯಿ ಮುಚ್ಚು ಕರ್ಣನನ್ನು ಎದುರಿಸಲಾರದೆ ಹೆದರಿ ಬಂದಿದ್ದೀಯ ನೀನು. ನಾಚಿಕೆಯಾಗಬೇಕು. ನಿನ್ನ ಜಂಬದ ಗಾಂಡೀವಕ್ಕೆ ನಾಚಿಕೆಯಾಗಬೇಕು. ನಮ್ಮ ತಂದೆ ಪಾಂಡುವಿನ ಕ್ಷಾತ್ರಕೀರ್ತಿಗೆ ನಾಚಿಕೆಯಾಗಬೇಕು. ಇನ್ನು ಮೇಲೆ ನನಗೆ ಮುಖ ತೋರಿಸಬೇಡ. ಇದು ನನ್ನ ಆಜ್ಞೆ" ಎಂದು ಹೇಳಿದ್ದರಿಂದ ಅರ್ಜುನನ ಕೋಪಕ್ಕೆ ಗುರಿಯಾದನು. ನಂತರ ಅರ್ಜುನನಲ್ಲಿ ಕ್ಷಮೆಯಾಚಿಸಿದನು. ಈ ಸಂದರ್ಭದಲ್ಲಿ ಧರ್ಮರಾಯನ ದುಡುಕುತನದ ಸ್ವಭಾವವು ವ್ಯಕ್ತವಾಗಿದೆ.

ಧರ್ಮರಾಯ ಯುದ್ಧದಲ್ಲಿ ದುರ್ಯೋಧನನ ಕೈಗೆ ಸಿಕ್ಕಿದರೆ ಅವನ ಶಿಬಿರದಲ್ಲಿ ಕೂರಿಸಿಕೊಂಡು ಗಂಡಸಾದರೆ ಮತ್ತೆ ಪಗಡೆ ಜೂಜಾಡು ಬಾ ಅಂತ ಗಹಗಹಿಸಿ ನಗುತ್ತಾ ಸವಾಲು ಹಾಕದೆ ಬಿಡುವುದಿಲ್ಲ. ಆಗ ಏನು ಮಾಡಬೇಕು ನಾನು ಎಂದು ತನ್ನ ಭಯವನ್ನು ಕೃಷ್ಣನಿಗೆ ಹೇಳಿದನು. ಕೃಷ್ಣ ಆಡುವುದಿಲ್ಲ ಅನ್ನಬೇಕು ಎಂದಾಗ, ಧರ್ಮರಾಯನು [24]"ಕ್ಷತ್ರಿಯನಾಗಿ ರಾಜಸೂಯ ಮಾಡಿದ ರಾಜನಾಗಿ

22. ಪರ್ವ, ಪುಟ-402
23. ಪರ್ವ, ಪುಟ-574
24. ಪರ್ವ, ಪುಟ-575

ಹಾಗನ್ನುವುದಕ್ಕೆ ಆಗುತ್ತೆಯೆ"? ಎನ್ನುವಾಗ, ಕೆಂಪು ತಿರುಗಿದ್ದ ಧರ್ಮರಾಯನ ಕಣ್ಣುಗಳಲ್ಲಿ ಗುಡ್ಡೆಗಳು ಅಸಹಾಯಕವಾಗಿ ತಿರುಗುತ್ತಿದ್ದವು. ನಂತರ ಯುದ್ಧದಲ್ಲಿ ಗೆದ್ದ ಪಾಂಡವರಲ್ಲಿ ಹಿರಿಯನಾದ ಧರ್ಮರಾಯ ಸಿಂಹಾಸನವನ್ನೇರಿದ. ಆದರೆ ಧರ್ಮರಾಯ ಯುದ್ಧದಲ್ಲಿ ತಮ್ಮ ಗಂಡಂದಿರನ್ನು ಕಳೆದುಕೊಂಡಿದಂತ ವಿಧವೆಯರ ರಾಜ್ಯವನ್ನಾಳಬೇಕಾಯಿತು. ಸುರಿಯುವ ಮಳೆಯಲ್ಲೇ ಹಿಂಡುಗಟ್ಟಲೆ ಹೆಂಗಸರು ಸಭಾಭವನಕ್ಕೆ ನುಗ್ಗಿ,[25] "ಮಹಾರಾಜಾ, ನಿಮ್ಮ ವಂಶದ ಯುದ್ಧದಲ್ಲಿ ನಾವೆಲ್ಲ ಹಿಂಸೆಯ ಬಸುರಾಗಿದ್ದೇವೆ. ಹುಟ್ಟುವ ಮಕ್ಕಳಿಗೆ ತಂದೆ ಎಂದು ಯಾರ ಹೆಸರು ಹೇಳಬೇಕು"? ಎಂದು ಕೇಳಿದಾಗ ಧರ್ಮರಾಯ ಮೂಕನಂತಾದ. ತಂದೆ ಯಾರೆಂದು ತಿಳಿಯದ ಮಕ್ಕಳು ಧರ್ಮನ ಆಳ್ವಿಕೆಯ ಮುಂದಿನ ಪೀಳಿಗೆಯಾಗಿ ರೂಪುಗೊಂಡರು.

ಭೀಮ:

ಭೀಮ ಕುಂತಿಗೆ ದೇವಲೋಕದ ಮಾರುತ್‌ನಿಂದ ನಿಯೋಗ ಮಾಡಿಸಿದ್ದರಿಂದ ಹುಟ್ಟಿದ ಬಲಶಾಲಿಯಾದ ಮಗ. ಪಾಂಡವರು ವಾರಣಾಂತದಲ್ಲಿ ದುರ್ಯೋಧನನ ಕುತಂತ್ರದಂತೆ ಲಾಕ್ಷ ಗೃಹದಲ್ಲೇ ಸುಟ್ಟು ಹೋಗದೆ ಅಲ್ಲಿಂದ ತಪ್ಪಿಸಿಕೊಂಡು, ಅರಣ್ಯದಲ್ಲಿ ತಲೆಮರೆಸಿಕೊಂಡಿದ್ದರು. ಆ ಅರಣ್ಯದಲ್ಲಿ 'ಹಿಂಡಿಬ'ನೆಂಬ ರಾಕ್ಷಸನನ್ನು ಕೊಂದು ಆತನ ತಂಗಿ ಹಿಡಿಂಬೆ (ಸಾಲಕಂಟಕಟಿ) ಯನ್ನು ಭೀಮ ಮದುವೆಯಾಗಿ 'ಘಟೋತ್ಕಚನೆಂಬ' ಮಗ ಹುಟ್ಟುವವರೆಗೂ ಪಾಂಡವರು ಹಾಗೂ ಕುಂತಿ ಅಲ್ಲೆ ನೆಲೆಸಿದ್ದರು. ಅಲ್ಲಿಂದ 'ಏಕಚಕ್ರನಗರ'ದಲ್ಲಿ ಬ್ರಾಹ್ಮಣರ ಮನೆಯಲ್ಲಿ ಪಾಂಡವರು ನೆಲೆಸಿದ್ದಾಗ, ಆ ನಗರದಲ್ಲಿ ವಾಸಿಸುತ್ತಿದ್ದ ಜನರಿಗೆ ತೊಂದರೆ ನೀಡುತ್ತಿದ್ದ 'ಬಕ'ನೆಂಬ ರಾಕ್ಷಸನನ್ನು ಭೀಮ ಕೊಂದನು. ಅಲ್ಲಿದ್ದಂತಹ ರಾಕ್ಷಸ ಪರಿವಾರವನ್ನು ಅಲ್ಲಿಂದ ಓಡಿಸಿದನು. ಭೀಮನು ಏಕಚಕ್ರನಗರದ ಜನರನ್ನು 'ಬಕ'ನಿಂದ ಕಾಪಾಡಿದನು. ಆದರೆ, ಭೀಮ ಈ ನಗರದಲ್ಲೇ ಆಳ್ವಿಕೆ ಮಾಡುವ ಅವಕಾಶವಿದ್ದರು ಸಹ ಆಳ್ವಿಕೆ ಮಾಡದೇ ಪಿತ್ರಾರ್ಜಿತ ಆಸ್ತಿಗಾಗಿ ಹೋರಾಡಿರುವುದನ್ನು ಮನಗಾಣಬಹುದು.

ಪಾಂಚಾಲದ ದ್ರುಪದ ರಾಜನ ಮಗಳಾದ ದ್ರೌಪದಿಯ ಸ್ವಯಂವರದಲ್ಲಿ ಭಾಗವಹಿಸಿದ್ದ ಪಾಂಡವರು, ಅರ್ಜುನ ಅವಳನ್ನು ಗೆದ್ದರೆ, ಭೀಮ ಅವಳನ್ನು ಬೇರೆ ರಾಜರುಗಳ ಆಕ್ರಮಣದಿಂದ ರಕ್ಷಿಸಿದನು. ಇದರಿಂದ ದ್ರೌಪದಿಯನ್ನು ಮದುವೆಯಾಗಲು ಭೀಮ ಮತ್ತು ಅರ್ಜುನರಲ್ಲಿ ಜಗಳ ಶುರುವಾಗಿ, ಉಳಿದ ಮೂವರಿಗೂ ಅವಳ ಮೇಲೆ ಒಲವಿರುವುದನ್ನು ಕಂಡ ಕುಂತಿ ಪಾಂಡವರೈವರೊಡನೆ ದ್ರೌಪದಿ ಮದುವೆ ಮಾಡಿಸಿದಳು. ಭೀಮ ಕೃಷ್ಣನ ಸಹಾಯದೊಡನೆ ಜರಾಸಂಧನನ್ನು ಕೊಂದು, ಧರ್ಮರಾಜನ ರಾಜಸೂಯ ಯಾಗಕ್ಕಾಗಿ ದಿಗ್ವಿಜಯ ಮಾಡಿದನು. ಮುಂದೆ ಧರ್ಮರಾಜ ಕೌರವರೊಡನೆ ಜೂಜಾಡಿ ಎಲ್ಲವನ್ನು ಕಳೆದುಕೊಂಡಾಗ, ಭೀಮ ಕೋಪಗೊಂಡು ಅವನ ಕೈಗಳನ್ನು ಸುಟ್ಟು ಹಾಕುವುದಾಗಿ ಹೇಳಿದನು. ಭೀಮ ಈ ಸಂದರ್ಭದಲ್ಲಿ ತಪ್ಪು ಮಾಡಿರುವವರು ಯಾರೇ ಆದರೂ ಅವರನ್ನು ಶಿಕ್ಷಿಸಬೇಕೆಂಬ ಮನೋಭಾವವನ್ನು ಕಾಣಬಹುದು.

25. ಪರ್ವ, ಮಟ-683

ಧರ್ಮರಾಜ ಜೂಜಾಡಿ ಸೋತದ್ದರಿಂದ. ದ್ರೌಪದಿಯನ್ನು ದುಶ್ಯಾಸನನು ತುಂಬಿದ ರಾಜಸಭೆಗೆ ಎಳೆದು ತಂದು ಅವಳಿಗೆ ಅವಮಾನ ಮಾಡಿದನು. ಕರ್ಣನ ಪ್ರೋತ್ಸಾಹದಿಂದ ದುಶ್ಯಾಸನನು ದ್ರೌಪದಿಯ ಸೆರಗಿಗೆ ಕೈ ಹಾಕಿ ಎಳೆದಾಗ ಕೋಪಗೊಂಡ ಭೀಮನು [26] "ಏ ದುಶ್ಯಾಸನ. ನನ್ನ ಹೆಂಡತಿಯ ಮೈ ಮುಟ್ಟಿದ್ದೀಯ ನಿನ್ನನ್ನು ಅಂಗಾತ ಕೆಡವಿ ನಿನ್ನ ಎದೆಗೂಡನ್ನು ಮುರಿದು ರಕ್ತ ತೆಗೆದು ಕುಡಿಯದಿದ್ದರೆ ನಾನು ಭೀಮನಲ್ಲ. ನಮ್ಮಪ್ಪ ಅಜ್ಜಂದಿರಿಗೆ ಸ್ವರ್ಗ ಸಲ್ಲ" ಎಂದು ಪ್ರತಿಜ್ಞೆ ಮಾಡಿದನು. ಜೂಜಿನ ಪರಿಣಾಮವಾಗಿ ಅರಣ್ಯವಾಸಕ್ಕೆ ಹೋದಾಗ ಅಲ್ಲಿ ಭೀಮ ಬಕಾಸುರನ ತಮ್ಮನಾದ 'ಕಿಮ್ಮೀರ' ರಾಕ್ಷಸನನ್ನು ಕೊಂದನು. ಮುಂದೆ 'ಜಯದ್ರಥ'ನು ದ್ರೌಪದಿಯನ್ನು ಹೊತ್ತುಕೊಂಡುಹೋಗುವಾಗ ಅವಳನ್ನು ಭೀಮ ರಕ್ಷಿಸಿದನು. ಜಯದ್ರಥನನ್ನು ಕೊಲ್ಲಲು ಸಹ ಮುಂದಾದನು. ಆದರೆ. ಧರ್ಮರಾಯ ಮತ್ತು ಅರ್ಜುನರು. ಭೀಮನನ್ನು ತಡೆದರು. ಮುಂದೆ ಯುದ್ಧದಲ್ಲಿ ಜಯದ್ರಥನಿಂದ 'ಅಭಿಮನ್ಯು'ವನ್ನು ಕಳೆದುಕೊಳ್ಳಬೇಕಾಯಿತು.

ಪಾಂಡವರು ತಮ್ಮ ವನವಾಸವನ್ನು ಕಳೆದ ಮೇಲೆ ಒಂದು ವರ್ಷ ಅಜ್ಞಾತವಾಸವನ್ನು ವಿರಾಟನಗರದಲ್ಲಿ ಕಳೆಯಲು ನಿರ್ಧರಿಸಿದರು. ಆಗ 'ಭೀಮ-ಬಲ್ಲವನಾಗಿ' ತನ್ನ ವೇಷ ಬದಲಿಸಿಕೊಂಡು. ಅಡುಗೆ ಮಾಡುವವನಾಗಿ ಕೆಲಸಕ್ಕೆ ಸೇರಿಕೊಂಡನು. ವಿರಾಟನಗರದಲ್ಲಿ ಸುದೇಷ್ಣೆಯ ಸಹೋದರ 'ಕೀಚಕ' ದ್ರೌಪದಿಯನ್ನು ಬಲವಂತವಾಗಿ ಹಿಡಿದು ಭೋಗಿಸುವ ಬೆದರಿಕೆ ಹಾಕಿದಾಗ. ಭೀಮ ಆತನನ್ನು ಹಾಗೂ ಆತನ ತಮ್ಮಂದಿರನ್ನು ಕೊಂದನು. ಇದರಿಂದ ಸೂತ ಗಂಡಸರ ಹೊಗಳಿಕೆಗೆ ಭೀಮ ಪಾತ್ರನಾದನು. ಸೂತ ಹೆಂಗಸರು ತಮ್ಮ ಗಂಡಂದಿರಿಗೆ ಗೌರವ ನೀಡುತ್ತಾ. ಅವರು ಹೇಳಿದಂತೆ ಕೇಳಲು ಶುರು ಮಾಡಿದ್ದರಿಂದ ಸೂತ ಗಂಡಸರ ಗೌರವಕ್ಕೆ ಭೀಮ ಪಾತ್ರನಾದನು. ಮಹಾಭಾರತ ಯುದ್ಧ ಪ್ರಾರಂಭವಾಗುವ ಮೊದಲು. ಕೃಷ್ಣನ ಆಜ್ಞೆಯಂತೆ. ಭೀಮ ತನ್ನ ಮೊದಲ ಹೆಂಡತಿ ಸಾಲಕಂಟಕಟಿ ಹಾಗೂ ಮಗನಾದ ಘಟೋತ್ಕಚನ ಸಹಾಯ ಬೇಡಲು ಅವರ ಅರಣ್ಯಕ್ಕೆ ಪ್ರಯಾಣ ಬೆಳೆಸಿದನು. ಪ್ರಯಾಣದ ಸಂದರ್ಭದಲ್ಲಿ ಘಟೋತ್ಕಚನನ್ನು ಸಾಕಿ ಬೆಳಸದೆ ಅವನ ಸಹಾಯ ಬೇಡಲು ಮುಜುಗರವಾಗುವುದಾಗಿ ತಿಳಿದು. ಮರಳಿ ಉಪಪ್ಲಾವ್ಯಕ್ಕೆ ಹೋಗುವುದಾಗಿ ಯೋಚಿಸಿದನು. ಆದರೆ ದುರ್ಯೋಧನನ ಕಡೆ ಇದ್ದ ರಾಕ್ಷಸ ಸೈನ್ಯದ ಪ್ರತಿಯಾಗಿ. ಭೀಮ ಘಟೋತ್ಕಚನ ಸಹಾಯ ಪಡೆದ. ಇವನು ಪಾಂಡವರ ಪರವಾಗಿ ಹೋರಾಡಿ. ಕರ್ಣನಿಂದ ಹತನಾದನು. ಇದರಿಂದ ಭೀಮ ತುಂಬ ದುಃಖ ಪಡುವಂತಾಯಿತು. ಭೀಮ ದುಶ್ಯಾಸನನ್ನು ಯುದ್ಧದಲ್ಲಿ ತಾನು ಮಾಡಿದ ಪ್ರತಿಜ್ಞೆಯಂತೆ ಕೊಂದು ಸೇಡು ತೀರಿಸಿಕೊಂಡನು. ಇಲ್ಲಿ ಪತ್ನಿಗೆ ಅವಮಾನ ಮಾಡಿದ ದುಶ್ಯಾಸನನ್ನು ಕೊಂದ ಭೀಮ. ದ್ರೌಪದಿಯ ನೆಚ್ಚಿನ ಪತಿಯಾಗಿರುವುದನ್ನು ಮನಗಾಣಬಹುದು.

26. ಪರ್ವ, ಪುಟ-190

ಕುರುಕ್ಷೇತ್ರ ಯುದ್ಧದ ಕೊನೆಯಲ್ಲಿ ಕೌರವರ ಸೈನ್ಯವೆಲ್ಲವೂ ನಾಶವಾಗಿ ದುರ್ಯೋಧನನು ಓಡಿಹೋಗಿ 'ವೈಶಂಪಾಯನ ಸರೋವರದಲ್ಲಿ ಅವಿತಿರುವಾಗ. [27]"ಲೋ ಹೆದರಿದ ನಾಯಿ ಯಾಕೆ ಅವಿತು ಕೂತಿದಿಯ ಬಾರೋ" ಎಂದು ಕಟುವಾಗಿ ಮಾತನಾಡಿ ಅವನು ಹೊರ ಬಂದ ಮೇಲೆ ಭೀಮನೊಡನೆ 'ಗಧಾಯುದ್ಧ' ಮಾಡಲು ನಿರ್ಧಾರವಾಯಿತು. ಭೀಮ ಗದೆ ತೆಗೆದುಕೊಂಡು ದುರ್ಯೋಧನನನ್ನೆ ದಿಟ್ಟಿಸುತ್ತಾ ನೋಡಿ. ಇಚ್ಛಕ್ಕಿದಂತೆ ತನ್ನ ಗದೆಯನ್ನು ನೆಲಕ್ಕೆಸೆದು [28]"ಇವನಾಗಲೇ ಸತ್ತು ಹೋಗಿದ್ದಾನೆ ಇವನ ಮುಖ ನೋಡು" ಎಂದು ಹೇಳಿ ಗೆದ್ದವನಂತೆ ಅಲ್ಲಿಂದ ಭೀಮ ಹೊರಟುಹೋದನು. ಭೈರಪ್ಪನವರು ಮೂಲಭಾರತದಲ್ಲಿರುವಂತಹ ಭೀಮ ಮತ್ತು ದುರ್ಯೋಧನರ ಗದಾಯುದ್ಧ ಪ್ರಸಂಗವನ್ನು ತಮ್ಮ ಕಾದಂಬರಿಯಲ್ಲಿ ಕೈಬಿಟ್ಟಿರುವುದನ್ನು ಕಾಣಬಹುದು.

ಭೀಮನು ಯುದ್ಧದ ನಂತರ ಧರ್ಮನ ಆಳ್ವಿಕೆಯ ಸಂದರ್ಭದಲ್ಲಿ ತನ್ನ ಸೇವಕ ನೀಲನೊಡನೆ ಪ್ರಯಾಣಿಸುತ್ತಿರುವಾಗ. ರಾಕ್ಷಸನಾಡಿನ ಗಡಿಯನ್ನು ಕಂಡು ಹಿಂದಿನ ಘಟನೆಗಳೆಲ್ಲ ನೆನಪಾಗಿ ದುಃಖಿಸುತ್ತಾನೆ. ರಾಕ್ಷಸ ನಾಡಿನಿಂದ ಸಾಲಕಟಂಕಟೀಯ ಮಗ ಘಟೋತ್ಕಚ ಹಾಗೂ ಅವಳ ಇತರ ಮಕ್ಕಳನ್ನು ಕರೆತಂದು ಯುದ್ಧ ಮಾಡಿ. ಆವರಣವನ್ನು ಕಳೆದುಕೊಂಡದ್ದರಿಂದ ಅವಳಿಗೆ ಹೇಗೆ ಸುದ್ದಿ ತಿಳಿಸುವುದೆಂದು ದುಃಖಿಸುತ್ತಾನೆ. ಆ ವೇಳೆಗಾಗಲೇ ಹಿಡಿಂಬವನದಲ್ಲಿ ಕಾಡುಕಿಚ್ಚು ಹೊತ್ತಿ ಉರಿದು. ಕಾಡೆಲ್ಲವೂ ಕರಕಲಾಗಿರುವುದನ್ನು ಕಂಡು. ಭೀಮನು ಸಾಲಕಂಟಕಟೀ ಕಾಮಕಂಟಕಟಿ. ಮೊಮ್ಮಗನಾದ ಬರ್ಬರಕರನ್ನು ಹುಡುಕಿಕೊಂಡು ಕಾಡನೆಲ್ಲ ಸುರಿಯುತ್ತಿರುವ ಮಳೆಯಲ್ಲೇ. [29]"ಹೋ. ಸಾಲಕಂಟಕಟಿ. ಸಾಲಕಂಟಕಟಿ. ಕೇಳಿಸಿತೇನು. ನಾನು ಭೀಮ ಬಂದಿದ್ದೀನಿ". ಎಂದು ಗಟ್ಟಿಯಗಿ ಮಳೆಯ ಮೋಡದ ಆಚೆಯ ಆಕಾಶಕ್ಕೆಲ್ಲಾ ಕೇಳುವಂತೆ ಕರೆಯುತ್ತಾನೆ. ಈ ಕಾಡಿನಲ್ಲಿ ಯಾರೂ ಇಲ್ಲವೆನ್ನಿಸಿ ಭೀಮನ ಎದೆ ಹೊಡೆದುಕೊಳ್ಳುತ್ತದೆ. ಇಲ್ಲಿ ಭೀಮನು ಸಾಲಕಂಟಕಟಿಯ ಮೇಲೆ ಇಟ್ಟಿದ್ದ ಅಪಾರ ಪ್ರೀತಿಯಲ್ಲಿ ಕಾಣಬಹುದು.

ಭೀಮ ಹೀಗೆ ಕಾಡನೆಲ್ಲಾ ಹುಡುಕುತ್ತಿರುವಾಗ. ಘಟೋತ್ಕಚನ ಜೊತೆ ಬಂದು ಯುದ್ಧ ಮಾಡಿದ ವ್ಯಕ್ತಿಯೊಬ್ಬ ಯುದ್ಧದಿಂದ ಹೊರಟು ಬಂದು ತಮ್ಮ ಕಾಡಿಗೆ ಬಂದಾಗ. ಕುರುಗಳ ಕಡೆಯ ಜನ ಹಾಗೂ ಖಾಂಡವದ ಕಡೆಯವರು ಹಿಡಿಂಬ ವನವನ್ನೆಲ್ಲಾ ಸುಟ್ಟು ಕರಕಲು ಮಾಡಿರುವುದನ್ನು ಕಣ್ಣಾರೆ ಕಾಣುತ್ತಾನೆ. ಈ ವಿಷಯವನ್ನೆಲ್ಲಾ ಭೀಮನಿಗೆ ತಿಳಿಸಿದ. ಆತನನ್ನು 'ಮಗು ಬರ್ಬರಕನಿಗೆ ಈಗ ಒಂದು

27. ಪರ್ವ, ಮಟ-648
28. ಪರ್ವ, ಮಟ-649
29. ಪರ್ವ ಮಟ-680

ವರ್ಷವಲ್ಲವೆ? ಬದುಕಿದೆಯೋ? ಅಥವಾ ಬೆಂಕಿಯಲ್ಲಿ' ಎಂದು ಭೀಮ ಉದ್ವೇಗದಿಂದ ಕೇಳುತ್ತಾನೆ. ಆತನು [30] "ಹೇಳಿದೆನ್ನಲ್ಲ ಸುಟ್ಟು ಕರುಕಾದ ಎಷ್ಟೋ ಮನುಷ್ಯ ದೇಹಗಳು ಮಕ್ಕಳ ದೇಹಗಳು. ಯಾವುದು ಯಾರದ್ದೆಂಬ ಗುರುತು ಹೇಗೆ ಹತ್ತಬೇಕು?" ಎಂದು ತಿಳಿಸಿದಾಗ ಭೀಮ ತನ್ನ ಹೆಂಡತಿ, ಸೊಸೆ ಹಾಗೂ ಒಂದು ವರ್ಷದ ಕೈಗೂಸನ್ನು ಕಳೆದುಕೊಂಡು ತುಂಬ ದುಃಖಿಸುತ್ತಾನೆ. ಯುದ್ಧದಲ್ಲಿ ಪಡೆದ ವಿಜಯವನ್ನು ಅನುಭವಿಸಲಾರದ ಸ್ಥಿತಿಯನ್ನು ಈ ಸಂದರ್ಭದಲ್ಲಿ ಕಾಣಬಹುದು.

<u>ಅರ್ಜುನ:</u>

ಅರ್ಜುನನು ಕುಂತಿಗೆ ದೇವಲೋಕದ ಇಂದ್ರನಿಂದ ನಿಯೋಗ ಮಾಡಿಸಿದ್ದರಿಂದ ಹುಟ್ಟಿದವನು. ಅರ್ಜುನ ಇಂದ್ರನಂತೆ ಸುಂದರ ರೂಪ ಹೊಂದಿದ್ದು, ಹೆಂಗಸರನ್ನು ವಶಪಡಿಸಿಕೊಳ್ಳುವಂತ ನೀಲ ಕಣ್ಣುಗಳನ್ನೊಂದಿದ್ದನು. ಅರ್ಜುನನು ದ್ರುಪದ ರಾಜನ ಮಗಳು ದ್ರೌಪದಿಯ ಸ್ವಯಂವರದಲ್ಲಿ 'ಆರ್ಯಾವರ್ತದ ಯಾವ ಕ್ಷತ್ರಿಯನೂ ಬಗ್ಗಿಸಲಾಗದಂತಹ ಬಿಲ್ಲನ್ನು ಬಗ್ಗಿಸಿ' ಅವಳನ್ನು ಗೆದ್ದು, ಕುಂತಿಯ ಆಜ್ಞೆಯಂತೆ ದ್ರೌಪದಿಯನ್ನು ತನ್ನ ಸಹೋದರರೊಟ್ಟಿಗೆ ಹಂಚಿಕೊಂಡನು. ದ್ರೌಪದಿಯು ಧರ್ಮರಾಯನ ಸರದಿಯಲ್ಲಿ ಅರ್ಜುನನ್ನು ಆಲಿಂಗಿಸಲು ನಿರಾಕರಿಸಿದ್ದರಿಂದ, ಕೋಪಗೊಂಡಂತಹ ಅರ್ಜುನನು ದೇಶ ದೇಶಗಳನ್ನು ತಿರುಗಿ ನಾಗಕನ್ಯೆ 'ಉಲೂಪಿ' ಯನ್ನು ಮದುವೆಯಾಗಿ ಅಲ್ಲಿ ಕೆಲವು ಕಾಲ ಇದ್ದು ಮುಂದೆ ಮಣಿಪುರಕ್ಕೆ ಬಂದು, ರಾಜ ಚಿತ್ರವಾಹನನ ಮಗಳು 'ಚಿತ್ರಾಂಗದೆ'ಯಲ್ಲಿ ಅನುರಕ್ತನಾಗಿ ಅವಳನ್ನು ಮದುವೆಯಾಗಿ, ಅವಳಿಗೆ ಮಗ ಹುಟ್ಟಿದ ಮೇಲೆ ಅವನ ಪಟ್ಟಾಭಿಷೇಕ ಜರುಗುತ್ತದೆ. ಚಿತ್ರವಾಹನನಿಗೆ ಗಂಡು ಮಕ್ಕಳಿಲ್ಲದ ಕಾರಣ, ಮೊಮ್ಮಗನಿಗೆ ಪಟ್ಟ ಕಟ್ಟಲಾಯಿತು.

ಮಣಿಪುರದಿಂದ ಅರ್ಜುನ ಇನ್ನೇನು ತೀರ್ಥಯಾತ್ರೆಗೆ ಹೊರಡಬೇಕೆನ್ನುವಾಗ ಒಂದು ಪ್ರಸಂಗ ನಡೆಯುತ್ತದೆ. ಇದು 'ಪರ್ವ'ದಲ್ಲಿ ಮಾತ್ರ ನಡೆಯುವ ಪ್ರಸಂಗ. ಚಿತ್ರವಾಹನನ ರಾಜ್ಯದ ಮೇಲೆ ಗಂಧರ್ವರು ದಾಳಿ ಮಾಡುತ್ತಾರೆ. ಅವರನ್ನು ಸೋಲಿಸಲು ತಕ್ಕವನೆಂದರೆ ಅರ್ಜುನನೊಬ್ಬನೇ. ಅವನು ಯುದ್ಧಕ್ಕೆ ಸಿದ್ಧನಾಗಿ ಗಂಧರ್ವರನ್ನು ಸೋಲಿಸುತ್ತಾನೆ. ಅಲ್ಲಿ [31]"ಅರ್ಜುನನಿಗೆ ಗಂಧರ್ವರ ಐದು ಹೆಣ್ಣುಗಳು ಮುತ್ತಿಗೆ ಹಾಕುತ್ತಾರೆ. ಐದು ಜನ ಯಾಕೆ? ದ್ರೌಪದಿಗೆ ಐದು ಜನ ಗಂಡಂದಿರಬಹುದಾದರೆ ಅರ್ಜುನನಿಗೆ ಐದು ಪ್ರೇಯಸಿಯರಾದರೂ ಇರಲಿ ಎಂದಿರಬಹುದು". ಅರ್ಜುನ ಅವರ ಜೊತೆಗೆ ಹಗಲು ರಾತ್ರಿ ಬಿಟ್ಟು ಬಿಡದೆ ಕಾಮ ಕೇಳಿಯನ್ನಾಗಿ ದಣಿದು ಹೋಗುತ್ತಾನೆ. ತಿರುಗಿ ಅವನು ಮೊದಲಿನಂತೆ ಗಂಡು ಆಗುವುದೇ ಇಲ್ಲ ಎಂದು ಸೂಚನೆ ಕಾದಂಬರಿಯಲ್ಲಿದೆ.

30. ಪರ್ವ, ಪುಟ-682

31. ಪರ್ವ, ಒಂದು ಸಮೀಕ್ಷೆ, ಪುಟ-8

ಅರ್ಜುನ ತೀರ್ಥಯಾತ್ರೆಯನ್ನು ಮಾಡುತ್ತಾ ದ್ವಾರಕೆಗೆ ಹೋಗುತ್ತಾನೆ. ಅಲ್ಲಿ ಕೃಷ್ಣನ ಮಲಸಹೋದರಿಯಾದ 'ಸುಭದ್ರೆ'ಯನ್ನು ಕಂಡು ಅನುರಕ್ತನಾಗಿ ಅವಳೊಡನೆ ಮದುವೆ ಮಾಡಿಸುವಂತೆ ಕೃಷ್ಣನಿಗೆ ಕೇಳಿದಾಗ ಆತ ಅವಳನ್ನು ಹೊತ್ತುಕೊಂಡುವಂತೆ ಹೇಳಿದಾಗ ಅದರಂತೆ ಅರ್ಜುನ ನಡೆದುಕೊಂಡಾಗ ಅವರನ್ನು ಕರೆತಂದ ಮೇಲೆ ಸುಭದ್ರೆ ಅನೇಕ ಶರತ್ತುಗಳನ್ನು ಹಾಕಿ ಅರ್ಜುನನನ್ನು ಮದುವೆಯಾದಳು. ಸುಭದ್ರೆ 'ಕುರುವೀರ, ನಿನ್ನ ಕೈ ಹಿಡಿಯುವುದೆಂದರೆ ನನ್ನ ಪುಣ್ಯವಿಶೇಷವೆಂದು ಭಾವಿಸುತ್ತೇನೆ. ಆದರೆ, ನಾನು ಹಿಡಿಯುವುದು ನಿನ್ನ ಕೈಯನ್ನು' ಆರ್ಯ ಹೆಂಗಸಿಗೆ ಒಬ್ಬನೇ ಗಂಡ ಎಂದಳು. ನಾನು ಜೀವಂತವಿರುವತನಕ ನೀನು ಬೇರೊಬ್ಬಳನ್ನು ತರಕೂಡದು. ಯಾವುದೇ ಸ್ವಯಂವರದಲ್ಲಿ ಭಾಗವಹಿಸಬಾರದು. ಕಾಣಿಕೆ ಎಂದು ಯಾವ ರಾಜನಿಂದಲೂ, ಯಾರಿಂದಲೂ ಕನ್ಯೆಯನ್ನು ಸ್ವೀಕರಿಸಬಾರದೆಂಬ ಶರತ್ತನ್ನು ಹಾಕಿ ಮದುವೆಯಾದಳು. ಇವರಿಗೆ 'ಅಭಿಮನ್ಯು' ಜನಿಸಿದನು. ಈತನು ಸಹ ತಂದೆಯಂತೆ ಪರಾಕ್ರಮಿಯಾಗಿದ್ದು, ಯುದ್ಧದಲ್ಲಿ ಹೋರಾಡಿ ವೀರ ಮರಣ ಪಡೆದನು.

ಅರ್ಜುನನು ಅಜ್ಞಾತವಾಸದ ಕಾಲದಲ್ಲಿ ವಿರಾಟನ ಆಸ್ಥಾನದಲ್ಲಿ ಒಂದು ವರ್ಷ 'ಬೃಹನ್ನಳೆ'ಯ ವೇಷದಲ್ಲಿ ಹೆಣ್ಣು ಮಕ್ಕಳಿಗೆ ನೃತ್ಯ ಹೇಳಿಕೊಡುವುದರ ಮೂಲಕ ನಪುಂಸಕತ್ವವನ್ನು ಅನುಭವಿಸಿದ್ದು, ಪೌರುಷ ಮೂರ್ತಿಯಾದ ಅರ್ಜುನನಿಗೆ ನಪುಂಸಕತ್ವ ಅವನಿಗೆ ವಿರುದ್ಧವಾದ ಸ್ಥಿತಿಯಲ್ಲಿರಬೇಕಾಯಿತು. ಅರ್ಜುನನು ದೇವಲೋಕದಲ್ಲಿ ಬಿಲ್ಲು ವಿದ್ಯೆ ಕಲಿಯುತ್ತಿರುವಾಗ ಅಲ್ಲಿ ದೇವಲೋಕದ ಜನರಿಗೆ ತೊಂದರೆ ನೀಡಿ, ಅವರ ಸರಕು, ಕಂಬಳಿಗಳನ್ನು ದೋಚುತ್ತಿದ್ದ. 'ನಿವಾತಕವಚರ' ಎಂಬ ನಾಡಿನ ಜನರನ್ನು ಸೋಲಿಸಿದನು. ಇದರಿಂದ ಇಂದ್ರನು 'ವಿಜಯ' ಎಂಬ ಬಿರುದನ್ನು ನೀಡಿದನು. ಅರ್ಜುನನಿಗೆ ಇಂದ್ರನು ನಿನಗೆ ಇನ್ನೊಂದು ಬಹುಮಾನ ಕಾದಿದೆ ಬಾ ಎಂದು ಕರೆದೊಯ್ದ. ಇಂದ್ರನಿಗೆ ಮೀಸಲಾದ ಊರ್ವಶಿಯನ್ನು ಬಹುಮಾನವಾಗಿ ನೀಡಿದನು. ಆ ಸಂದರ್ಭದಲ್ಲಿ ಊರ್ವಶಿಯು [32]"ಚೆಲುವ ಮೊದಲು ಈ ಪಾನೀಯ ಕುಡಿ, ಆನಂತರ ಈ ದೇವಲೋಕದ ನಿಜವಾದ ಸುಖವನ್ನು ಪ್ರವೇಶಿಸುವೆಯಂತೆ" ಎಂದಳು. ಅರ್ಜುನ ಅವಳನ್ನು ಆಲಿಂಗಿಸಲು ನಿರಾಕರಿಸಿದ್ದರಿಂದ ಕೋಪಗೊಂಡ ಅವಳು ಇಂದ್ರನನ್ನೇ ಕರೆದು ಸಭೆ ನಡೆಸಿ, [33]"ಅರ್ಜುನ, ಛೀ ಬಿಲ್ಲುಗಾರನಿರಬಹುದು ನೀನು, ಆದರೆ ನಪುಂಸಕ, ನನಗೆ ಪುಂಸತ್ವವಿಲ್ಲವೆಂದು ಮೊದಲೇ ಹೇಳಿಬಿಟ್ಟಿದ್ದರೆ ನಾನು ಆಸೆ ಪಡುತ್ತಲೂ ಇರಲಿಲ್ಲ. ಹೀಗೆ ನಿರಾಶೆಯ ಯಾತನೆಯನ್ನು ಅನುಭವಿಸುತ್ತಿರಲಿಲ್ಲ" ಎಂದು ಅರ್ಜುನನ್ನು ಹೀಯಾಳಿಸಿ ಹೊರಟು ಹೋದಳು. ಈ ಸಂದರ್ಭದಲ್ಲಿ ಅರ್ಜುನ ಗಾಂಧರ್ವರ ಐದು ಹೆಣ್ಣುಗಳೊಡನೆ ಹಗಲು-ರಾತ್ರಿ ಬಿಟ್ಟೂಬಿಡದೆ ಕಾಮಕೇಳಿಯನ್ನಾಗಿ ನಪುಂಸಕತ್ವ ಪಡೆದಿರುವ ಸೂಚನೆಯನ್ನು ತಿಳಿಯಬಹುದು.

32. ಪರ್ವ, ಪುಟ-152
33. ಪರ್ವ, ಪುಟ-153

ಅರ್ಜುನ ಕುರುಕ್ಷೇತ್ರ ಯುದ್ಧದ ಆರಂಭದಲ್ಲಿ [34]"ಎದುರು ಪಕ್ಷದ ಸೇನಾಧಿಪತಿಯಾಗಿ ನಿಂತಿರುವ ಭೀಷ್ಮ, ಅವರಿಗೆ ಒತ್ತಾಸೆಯಾಗಿ ನಿಂತಿರುವ ದ್ರೋಣರು, ದುರ್ಯೋಧನಾದಿಗಳಂತೂ ಅಣ್ಣ-ತಮ್ಮಂದಿರೇ, ರಾಜ್ಯದಾಸೆಗೆ ಸಿಕ್ಕಿ ಇವರನ್ನು ಯುದ್ಧದಲ್ಲಿ ಕೊಲ್ಲುವುದು ಧರ್ಮವೆ"? ತಾನು ಯುದ್ಧ ಮಾಡುವುದಿಲ್ಲ ಎಂದಾಗ ಕೃಷ್ಣ ಅವನಿಗೆ ಬುದ್ಧಿ ಹೇಳಿ, ಯುದ್ಧ ಮಾಡುವಂತೆ ತಿಳಿಸಿದನು. ಅರ್ಜುನನು ಯುದ್ಧದಲ್ಲಿ ಪರಾಕ್ರಮದಿಂದ ಹೋರಾಟ ಮಾಡಿದನು. ತನ್ನ ಮಗ 'ಅಭಿಮನ್ಯು'ವಿನ ಸಾವಿಗೆ ಪ್ರತಿಕಾರವಾಗಿ ಮರುದಿನವೇ ಜಯದ್ರಥನನ್ನು ಕೊಂದು, ತನ್ನ ಪ್ರತಿಜ್ಞೆಯನ್ನು ಪೂರೈಸಿದನು. ಪಾಂಡವರ ಸೇನಾಧಿಪತಿಯಾದ ಧೃಷ್ಟದ್ಯುಮ್ನ ದ್ರೋಣರ ಕತ್ತನ್ನು ಹಿಡಿದು ದುರ್ಯೋಧನ ಸೇನೆಯ ನಡುಭಾಗಕ್ಕೆ ಎಸೆದಾಗ ಅವನ ಮೇಲೆ ಕುಪಿತನಾದನು. ಇಲ್ಲಿ ಅರ್ಜುನನಿಗೆ ಗುರುಪ್ರೀತಿಯ ಜ್ವರ ಮರುಕಳಿಸಿತ್ತು ಎನ್ನಬಹುದು.

ಅರ್ಜುನನು ಧರ್ಮರಾಯನ ಆಜ್ಞೆಯಂತೆ ಕರ್ಣನ ಜೊತೆ ಯುದ್ಧ ಮಾಡಿ, ಅವನ ಮಗ ಸುಷೇಣನನ್ನು ಕರ್ಣನ ಎದುರಿನಲ್ಲೇ ಕೊಂದನು. ನಂತರ ಕರ್ಣನ ಜೊತೆ ಯುದ್ಧಮಾಡಿ, ಕರ್ಣನಿಂದ ಬಂದು ತಗುಲಿದ ಬಾಣ ಅರ್ಜುನನ ಕಿರೀಟಕ್ಕೆ ತಾಗಿತು. ನಂತರ ಅರ್ಜುನನು ಕರ್ಣ ತನ್ನ ರಥದಿಂದ ಕೆಳಗಿಳಿದು, ರಥದ ಚಕ್ರವನ್ನು ಎತ್ತುತ್ತಿರುವಾಗ ಅವನಿಗೆ ಬಾಣ ಒಡೆದು ಅವನನ್ನುಕೊಂದು ತನ್ನ ಪ್ರತಿಜ್ಞೆಯನ್ನು ಪೂರೈಸಿದನು. ಅರ್ಜುನನು ಕುರುಕ್ಷೇತ್ರ ಯುದ್ಧದಲ್ಲಿ ತನ್ನ ಗಾಂಢೀವ ಬಿಲ್ಲನ್ನು ಬಳಸಿ ವಿಜಯವನ್ನು ಪಡೆದನು. ಆದರೆ ಕಾದಂಬರಿ ಕೊನೆಯಲ್ಲಿ ತನ್ನ ಪ್ರೀತಿಯ ಬಿಲ್ಲನ್ನೆ ಕಳೆದುಕೊಂಡ ಒಟ್ಟಿಯಾದನು.

ನಕುಲ-ಸಹದೇವ:

ಮದ್ರದ ರಾಜ ಶಲ್ಯನ ತಂಗಿ ಮಾದ್ರಿಯ ಅವಳ ಮಕ್ಕಳೇ ಈ ನಕಲು-ಸಹದೇವರು. ಮಾದ್ರಿಯು ಪಾಂಡುವಿನೊಡನೆ ಸಹಗಮನ ಮಾಡಿದ ನಂತರ, ಇವರು ಕುಂತಿಯ ಆರೈಕೆಯಲ್ಲೇ ಬೆಳೆದರು. ಕುಂತಿ ಇವರನ್ನು ತುಂಬಾ ಪ್ರೀತಿಯಿಂದ ಸಲಹಿದಳು. ಸ್ವಯಂವರದಲ್ಲಿ ಅರ್ಜುನನ್ನು ದ್ರೌಪದಿಯನ್ನು ಗೆದ್ದ ಸಂದರ್ಭದಲ್ಲಿ ಅವಳ ರೂಪಕ್ಕೆ ನಕುಲ ಸಹದೇವರು ಸಹ ಸೋತರು. ದ್ರೌಪದಿಯನ್ನು ಪಡೆಯಲು ಇವರು ಸಹ ಇಚ್ಚಿಸುತ್ತಿದುದ್ದನ್ನು ತಿಳಿದ ಕುಂತಿಯು ಪಾಂಡವರೊಡನೆ ಅವಳ ಮದುವೆ ಮಾಡಿಸಿದಳು. ದ್ರೌಪದಿಯನ್ನು ತುಂಬಿದ ಸಭೆಯಲ್ಲಿ ಅವಮಾನ ಮಾಡಿದ ಸಂದರ್ಭದಲ್ಲಿ [35]"ಎಲವೋ ಶಕುನಿ, ನಮ್ಮ ಹೆಂಡತಿ ದ್ರೌಪದಿಗೆ ಮಾಡಿರುವ ಅಪಮಾನಕ್ಕೆ ಕಾರಣನಾದ ನೀನು ಯುದ್ಧದಲ್ಲಿ ನನ್ನನ್ನು ಎದುರಿಸಿದ್ದರೆ ನಿನ್ನನ್ನು ನಾನು ಕೊಲ್ಲುತ್ತೇನೆ" ಎಂದು ಸಹದೇವ ಕೂಗಿದನು. ಅದೇ ರೀತಿ ನಕಲು [36]"ಧರ್ಮರಾಜನ

34. ಪರ್ವ, ಪುಟ-513
35. ಪರ್ವ, ಪುಟ-195
36. ಪರ್ವ, ಪುಟ-195

ಅನುಮತಿ ದೊರೆತಲ್ಲಿ ದ್ರೌಪದಿಗೆ ಪ್ರಿಯವನ್ನುಂಟು ಮಾಡಲು ನಾನು ಧೃತರಾಷ್ಟ್ರ ಸಂಹಾರದಲ್ಲಿ ಪಾಲ್ಗೊಳ್ಳುತ್ತೇನೆ" ಎಂದು ಹೇಳಿದನು. ಇವರಿಬ್ಬರು ತಮ್ಮ ಪತ್ನಿಗೆ ಆದಂತಹ ಅವಮಾನವನ್ನು ಸಹಿಸದೆ, ಕೋಪಗೊಂಡು ಈ ಸಂದರ್ಭದಲ್ಲಿ ಮಾತನಾಡಿದರು.

ಪಾಂಡವರೆಲ್ಲರು ವಿರಾಟನಗರದಲ್ಲಿ ಒಂದು ವರ್ಷಗಳ ಕಾಲ ಅಜ್ಞಾತವಾಸ ಅನುಭವಿಸುವ ಸಂದರ್ಭದಲ್ಲಿ ನಕುಲನು, 'ಗ್ರಂಥಿಕ'ನಾಗಿ ವಿರಾಟನ ಬಳಿ ಕುದುರೆ ಕಾಯುವವನಾಗಿ ಹಾಗೂ ಸಹದೇವ 'ತಂತ್ರಿಪಾಲ'ನಾಗಿ ವಿರಾಟನಗರದಲ್ಲಿ ದನಕಾಯುವವರಾಗಿ ತಮ್ಮ ವೇಷ ಬದಲಿಸಿಕೊಂಡು ಅಜ್ಞಾತವನ್ನು ಮುಗಿಸಿದನು. ಯುದ್ಧದ ಸಂದರ್ಭದಲ್ಲಿ ಭೀಷ್ಮ, ದ್ರೋಣ, ಶಲ್ಯರು, ಪಾಂಡವರ ಬಿಡಾರದಲ್ಲಿ ಯುದ್ಧದ ನಿಯಮಗಳನ್ನು ರೂಪಿಸಿದರು. ಆ ವೇಳೆ ನಕುಲನು ಶಲ್ಯನನ್ನು ಕುರಿತು, [37]"ಮಾವ, ನಮ್ಮ ದೂತನ ಕೈಲಿ ಭಾಷೆ ಕೊಟ್ಟು ಕಳಿಸಿದ ನೀನೇಕೆ ಸೈನ್ಯದೊಡನೆ ಶತ್ರುಪಕ್ಷ ಸೇರಿ ಈಗ ಅವರ ಒಬ್ಬ ಸೇನಾಪತಿಯೂ ಆದೆ?" ಎಂದು ಕೇಳಿದನು. ಶಲ್ಯನು ಕೌರವರ ಪರ ವಹಿಸಿದ್ದು, ಅವರು ಗೆದ್ದರೆ ತನ್ನ ತಂಗಿಯ ಇಬ್ಬರೂ ಮಕ್ಕಳಿಗೂ ಖಂಡಿತ ರಾಜ್ಯ ಕೊಡುತ್ತೇವೆ ಎಂದು ದುಶ್ಯಾಸನು ಹೇಳಿದ್ದರಿಂದ ಅವರ ಪಕ್ಷ ವಹಿಸಿದರ ಬಗ್ಗೆ ನಕುಲನಿಗೆ ತಿಳಿಸಿದನು. ಆಗ ನಕುಲ ನಿಜ ವಿಷಯದ ಶಲ್ಯನ್ನು 'ಈಗಲಾದರೂ ನಿನ್ನ ಸೈನ್ಯದ ಸಮೇತ ನಮ್ಮ ಕಡೆಗೆ ಬಂದುಬಿಡು' ಎಂದು ಹೇಳಿದನು. ಆದರೆ ಶಲ್ಯ ಇಷ್ಟು ದಿನ ದುರ್ಯೋಧನರ ಆಥಿತ್ಯವನ್ನು ಪಡೆದು, ಈಗ ನಿಮ್ಮ ಕಡೆ ಬರಲು ಸಾಧ್ಯವಿಲ್ಲ ಎಂದು ತಿಳಿಸಿದನು. ನಕುಲ-ಸಹದೇವರು ತಮ್ಮ ಸಹೋದರರ ಆಜ್ಞೆಯಂತೆ ವಿಧೇಯವಾಗಿ ನಡೆದುಕೊಂಡು, ಯುದ್ಧದಲ್ಲಿ ಸಹ ಸಹೋದರರು ಹೇಳಿದಂತೆ ಯುದ್ಧ ಮಾಡಿ ತಮ್ಮ ಒಗ್ಗಟ್ಟನ್ನು ಸಾಧಿಸಿದರು.

ನಕುಲ-ಸಹದೇವರು ಕುಂತಿಯ ಆರೈಕೆಯಲ್ಲಿ ಬೆಳೆದು ಕುಂತಿ ಪುತ್ರರೊಡನೆ ವಿಧೇಯರಾಗಿ ಒಗ್ಗಟ್ಟಿನಿಂದ ಬಾಳಿದರು. ಯುದ್ಧದಲ್ಲಿ ಗೆದ್ದ ಪಾಂಡವರು, ಹಸ್ತಿನಾವತಿಯಲ್ಲಿ ಧರ್ಮರಾಯನ ಆಳ್ವಿಕೆಯಲ್ಲಿ ನಕುಲ ಸಹದೇವನು ಸಹ ಸಮಾನ ಅಧಿಕಾರವನ್ನು ಹೊಂದಿದ್ದರು. ಅದರಂತೆ ಇವರು ದ್ರೌಪದಿಯಿಂದ ಸೇವೆ ಮಾಡಿಸಿಕೊಳ್ಳಲು ಮುಜುಗರ ಪಡುವಂತ ಸೌಮ್ಯ ಸ್ವಭಾವದವರಾಗಿದ್ದರು. ಒಟ್ಟಾರೆಯಾಗಿ ನಕುಲ ಸಹದೇವರು ತಮ್ಮ ಪಿತ್ರಾರ್ಜಿತ ಆಸ್ತಿಗಾಗಿ ಸಹೋದರೊಡನೆ ಹೋರಾಡಿ ಅದರಲ್ಲಿ ಸಫಲರಾಗಲು ಕಾರಣರಾದರು. ನಕಲು-ಸಹದೇವರು ಕುಂತಿಯ ಆರೈಕೆ ಪಡೆದು, ತಮ್ಮ ಹಿರಿಯ ಸಹೋದರನಿಗೆ ವಿಧೇಯರಾಗಿದ್ದುಕೊಂಡು ತಮ್ಮ ಏಳ್ಗೆ ಹಾಗೂ ಕುಂತಿಪುತ್ರರ ಏಳ್ಗೆಗೆ ಕಾರಣರಾದರು. ಇಲ್ಲಿ ಒಗ್ಗಟ್ಟಿನಲ್ಲಿ ಬಲವಿದೆ ಎಂಬ ಮಾತು ನೆನಪಾಗುತ್ತದೆ. ಈ ರೀತಿ ಒಗ್ಗಟ್ಟಾಗಿದ್ದ ಪಾಂಡುಪುತ್ರರ ಹೆಸರು ಚಿರಕಾಲ ಉಳಿಯುವಂತೆ ಮಾಡಿದೆ.

37. ಪರ್ವ, ಪುಟ-339

ಕರ್ಣ

ಕರ್ಣ ಕುಂತಿಯ ಕಾನೀನಪುತ್ರ. ಈತನನ್ನು ಸೂತ ದಂಪತಿಗಳಾದ ರಾಧೆ ಮತ್ತು ಅದಿರಥನು ಪಡೆದು, ಪಾಲನೆ ಪೋಷಣೆ ಮಾಡಿದರು. ಅದಿರಥನು ಕರ್ಣನಿಗೆ 'ವಸುಷೇಣ' ನೆಂಬ ಕ್ಷತ್ರಿಯನ ಹೆಸರನ್ನು ಇಟ್ಟಿದ್ದನು. ಪಾಂಡವರು ಮತ್ತು ಕೌರವರು ಶಸ್ತ್ರವಿದ್ಯೆ ನಿಪುಣತೆ ಪ್ರದರ್ಶನ ಮಾಡುತ್ತಿರುವಾಗ [38]"ಈ ಅರ್ಜುನ ತೋರಿಸಿದ ಚಳಕವನ್ನೆಲ್ಲ ನಾನು ಮಾಡಿ ತೋರಿಸಬಲ್ಲೆ" ಎಂದು ಕರ್ಣ, ಅರ್ಜುನನು ಮಾಡಿ ತೋರಿಸಿದ ಎಲ್ಲಾ ಸಾಹಸಗಳನ್ನು ಮಾಡಿ ತೋರಿಸಿದನು. ಕರ್ಣ ಇದೇ ಸಂದರ್ಭದಲ್ಲಿ ತನ್ನ ಜನ್ಮ ರಹಸ್ಯದ ಬಗ್ಗೆ ತಿಳಿಯುವ ಉದ್ದೇಶ ಹೊಂದಿದ್ದನು.

ಇರಾವತಿ ಕರ್ವೆಯವರು ಹೇಳುವಂತೆ: ಈ ಕ್ಷತ್ರಿಯರ ಸಭೆಯಲ್ಲಿ ತನ್ನ ಸಾಹಸವನ್ನು ಪ್ರದರ್ಶಿಸಿದರೆ ಸಂತಷಪಟ್ಟ ತನ್ನ ನಿಜವಾದ ತಂದೆ-ತಾಯಿಯರು ತನ್ನನ್ನು ಅಂಗೀಕರಿಸಬಹುದೆಂದು ಕರ್ಣ ಆಶಿಸಿದ್ದ. ಆದರೆ ವಿನಾಕಾರಣವಾಗಿ ಆತ ಅರ್ಜುನನ್ನು ಧ್ವಂಧ್ವ ಯುದ್ಧಕ್ಕೆ ಕರೆದ. ಕರ್ಣನಿಗಿಂತ ಐದು ವರ್ಷ ಚಿಕ್ಕವನಾಗಿದ್ದ, ಅರ್ಜುನ ಕುಮಾರನೊಡನೆ ಧ್ವಂಧ್ವವನ್ನು ಅಪೇಕ್ಷಿಸುವುದು ವೀರನಿಗೆ ಶೋಭಿಸುವುದಿಲ್ಲ. ಈ ತರಹದ ಸ್ವಭಾವ ದೋಷವು ಇನ್ನೆರಡು ಮೂರು ಕಡೆ ಗೋಚರವಾಗುತ್ತದೆ. ದುಶ್ಯಾಸನನು ದ್ರೌಪದಿಯನ್ನು ರಾಜಸಭೆಗೆ ಎಳೆತಂದಾಗ ಕರ್ಣನು [39]"ಐವರ ಹೆಂಡತಿಯಾದ ಇವಳು ಎಂಥ ಪತಿವ್ರತೆ? ಇವಳು ಸ್ವೈರಿಣಿಯೆ ಸರಿ!" ಇವರೆಲ್ಲರೂ ತಮ್ಮ ಸರ್ವಸ್ವವನ್ನು ಸೋತಿದ್ದಾರೆ. ಅವರು ದಾಸರಾಗಿದ್ದು, ಅವರ ವಸ್ತ್ರಗಳ ಮೇಲೆಯು ಅವರಿಗೆ ಅಧಿಕಾರವಿಲ್ಲ ಅವರ ವಸ್ತ್ರಗಳನ್ನು ಕಳಚಿ ಎಂದು ಹೇಳಿದ್ದರಿಂದ ದ್ರೌಪದಿಯ ಅವಮಾನ ಮಾಡಲು ನೇರವಾಗಿ ಪ್ರೋತ್ಸಾಹಿಸಿದಂತಾಯಿತು. 'ಘೋಷಯಾತ್ರೆ'(ತುರು/ಕರುಮಂದೆಗಳ ನಿರೀಕ್ಷಣೆಗಾಗಿ ಮಾಡುವ ಯಾತ್ರೆ) ನೆವದಲ್ಲಿ ಕಾಡಿಗೆ ತೆರಳಿದ ಕರ್ಣ, ದುರ್ಯೋಧನ ಹಾಗೂ ಅವನ ಸಹಚರರು ಗಂಧರ್ವರೊಡನೆ ಯುದ್ಧ ಮಾಡಲಾಗಿ ಕರ್ಣ ಅಲ್ಲಿಂದ ಓಡಿ ಹೋಗಿ ಭೀಷ್ಮನ ನಿಂಧನೆಗೊಳಗಾದ. ಮುಂದೆ ವಿರಾಟ ನಗರದ 'ಗೋಗ್ರಹಣ' (ಗೋವುಗಳ ಅಪಹರಣ) ಸಂದರ್ಭದಲ್ಲಿ ಸಮರ್ಪಕವಾಗಿ ಯುದ್ಧ ಮಾಡದೆ ಅರ್ಜುನನಿಗಿಂತ ಕನಿಷ್ಟನೆನಿಸಿಕೊಂಡನು.

ಕೃಷ್ಣ ಸಂಧಾನ ಸಂದರ್ಭದಲ್ಲಿ ಕರ್ಣನನ್ನು ಕುರಿತು 'ನೀನು ಪಾಂಡವರ ಪಕ್ಷ ಸೇರು' ಇದರಿಂದ ನೀನು ಶ್ರೇಷ್ಠ ಕುಲದವನೆಂದು ಗೌರವ ದೊರೆತು, ರಾಜ್ಯ ದೊರಕುವಂತಾಗುತ್ತದೆ ಎಂಬ ಆಮಿಷವನ್ನು ಒಡ್ಡಿದರು ಸಹ ಕರ್ಣ ಅದಕ್ಕೆ ತಲೆ ಭಾಗದೆ ದುರ್ಯೋಧನನಿಗೆ ನಿಷ್ಟೆ ತೋರಿಸಿದ. ಕುಂತಿಯು ಸಹ 'ನೀನು ಪಾಂಡವರನಾಗು' ನೀನು ಸೂತನಲ್ಲ ಶೂರನೆಂದಣಿಸು ಎಂದಾಗ ಅದನ್ನು ತಿರಸ್ಕರಿಸಿ

38. ಯುಗಾಂತ, ಪುಟ-121
39. ಯುಗಾಂತ, ಪುಟ-125

ದುರ್ಯೋಧನ ಹಾಗೂ ಗಾಂಧಾರಿಯ ಪ್ರೀತಿಗೆ ಸೋತು. ಅವರ ಪರವಾಗಿ ನಿಲ್ಲಲು ನಿರ್ಧರಿಸಿದನು. ಕರ್ಣನು ಭೀಷ್ಮನ ಸೇನಾಧಿಪತ್ಯದಲ್ಲಿ ಯುದ್ಧ ಮಾಡಲಿಲ್ಲ. ನಂತರ ದ್ರೋಣನ ಸಾವಿನ ತರುವಾಯ ಕರ್ಣ ತಾನೇ ಸೇನಾಧಿಪತ್ಯವನ್ನು ವಹಿಸಿ ಯುದ್ಧದಲ್ಲಿ ಅರ್ಜುನನ ವಿರುದ್ಧ ಹೋರಾಡುತ್ತಿರುವಾಗ ಶಲ್ಯ ಕರ್ಣನ ರಥವನ್ನು ಬಿಟ್ಟು ಹೊರಟು ಹೋದುದ್ದರಿಂದ ರಥದ ಚಕ್ರ ಹೂತುಕೊಂಡಿತ್ತು. ಈ ಹೂತ ಚಕ್ರವನ್ನು ಹೊರ ತೆಗೆಯುವ ಸಂದರ್ಭದಲ್ಲಿ ಅರ್ಜುನನ ಬಾಣ ತಗುಲಿ ಕರ್ಣನು ಹತನಾದನು. ಇಲ್ಲಿ ಕರ್ಣ ಹೂತ ರಥದ ಚಕ್ರ ತೆಗೆಯುವ ಬದಲು ಬೇರೆ ರಥವನ್ನು ಏಕೆ ಬಳಸಲಿಲ್ಲ? ಆ ವೇಳೆ ಸಂಜೆಯಾಗಿದ್ದರಿಂದ ಉಪಾಯ ಮಾಡಿ ಸ್ವಲ್ಪ ಸಮಯವನ್ನು ಕಳೆದು ಒಂದು ರಾತ್ರಿಯಷ್ಟು ಅವಧಿಯನ್ನು ಪಡೆಯುವ ಉದ್ದೇಶವನ್ನು ಕರ್ಣ ಇಟ್ಟುಕೊಂಡಿದ್ದನು ಎಂಬ 'ಇರಾವತಿಕರ್ವೆ' ರವರ ಊಹೆಯು ಸಮಂಜಸವಾಗಿದೆ. ಹೀಗೆ ಎಲ್ಲಾ ಸಂದರ್ಭಗಳಲ್ಲಿ ಕರ್ಣ ನಡೆದುಕೊಂಡ ರೀತಿಯನ್ನು ನೋಡಿದರೆ ಅವನು ನಾವೆಂದುಕೊಂಡಷ್ಟು ವೀರನಾಗಿರಲಿಲ್ಲ ಎನಿಸುತ್ತದೆ.

ದ್ರೋಣಾಚಾರ್ಯ:

ದ್ರೋಣ ಭರದ್ವಾಜ ಮುನಿಯ ಮಗ. ದ್ರೋಣರು ತನ್ನ ತಂದೆಯಿಂದ ಶಸ್ತ್ರ ವಿದ್ಯಾಭ್ಯಾಸ ಮಾಡಿ. ಧನುರ್ವಿದ್ಯೆ ಪಾರಂಗತರಾದರು. ದ್ರೋಣ ತನ್ನ ತಂದೆಯಿಂದ ವೇದ. ಧನುರ್ವೇದ ಎರಡನ್ನು ಕಲಿತರು. ಆದರೆ ಧನುರ್ವಿದ್ಯೆಯೊಂದನ್ನು ರೂಢಿಸಿಕೊಂಡರು. ಅಪ್ಪ ಸತ್ತ ಮೇಲೆ ದ್ರೋಣರು ಮುಂದಿನ ವಿದ್ಯಾಭ್ಯಾಸ ಅಗ್ನಿವೇಶರಲ್ಲಿ ಮುಂದುವರೆಸಿದರು. ಆ ಸಂದರ್ಭದಲ್ಲಿ ದ್ರುಪದನು ಸಹ ಅಲ್ಲಿಯೇ ವಿದ್ಯಾಭ್ಯಾಸ ಮಾಡುತ್ತಿದ್ದು. ಅವರಿಬ್ಬರಲ್ಲಿ ಸ್ನೇಹ ಬೆಳೆಯಿತು. ದ್ರುಪದನು [40] "ದ್ರೋಣ. ನೀನು ನನಗೆ ಹಿರಿಯಣ್ಣನಂತೆ ಮುಂದೆ ಬೇರೆಲ್ಲಿಯೂ ಇರಬೇಡ. ನನಗೆ ಪಟ್ಟವಾದ ಮೇಲೆ ನನ್ನ ಸಿಂಹಾಸನದ ಅರ್ಧಭಾಗದಲ್ಲಿ ನಿನಗೆ ಸ್ಥಾನ ಕೊಡುತ್ತೇನೆ. ಸೂರ್ಯಚಂದ್ರರಾಣೆ" ಎಂದು ಹೇಳಿದನು. ಆದರೆ ಮುಂದೆ ದ್ರುಪದ ಈ ಪ್ರತಿಜ್ಞೆ ಮರೆತು ದ್ರೋಣನನ್ನು ನಿಂಧಿಸಿ ಅವರ ಕೋಪಕ್ಕೆ ಕಾರಣನಾದನು.

ದ್ರೋಣ ಧನುರ್ವಿದ್ಯೆ ಪಾರಂಗತನಾಗಿ ಹತ್ತು ಜನ ಕ್ಷತ್ರಿಯರನ್ನು ಇರಿದು ಬಿಸುಡುವ ಆಯುಧ ಸಾಮರ್ಥ್ಯ. ಹೊಡೆದುರುಳಿಸುವ ಬಾಣಶಕ್ತಿಯನ್ನು ಹೊಂದಿದ್ದನು. ಆದರೂ ಸ್ವಯಂವರಗಳಲ್ಲಿ ಸ್ಪರ್ಧಿಸುವ ಅಧಿಕಾರವಿಲ್ಲದೆ. ಹಸ್ತಿನಾಪುರದ ರಾಜನ ಆಶ್ರಯದಲ್ಲಿದ್ದ ಬಡ ಬ್ರಾಹ್ಮಣನಾದ ಕೃಪಾಚಾರ್ಯನ ತಂಗಿ. ಕಾಮ ಕೆರಳದಾಗಷ್ಟೆ ಸುಂದರಿಯಾಗಿ ಕಾಣಬಹುದಾದ 'ಕೃಪೆ'ಯನ್ನು ಮದುವೆಯಾದರು.

40. ಪರ್ವ, ಪುಟ-445

ಇವರಿಗೆ ಅಶ್ವತ್ಥಾಮನು ಹುಟ್ಟಿದನು. ಮುಗ್ಧ ಮಗು ಅಶ್ವತ್ಥಾಮನಿಗೆ ಹಾಲು ಕೊಡಲು ಸಾಧ್ಯವಾಗದ ಬಡತನದಲ್ಲಿ, ಗೋಧಿಯ ಹಿಟ್ಟನ್ನು ನೀರಿನಲ್ಲಿ ಕದಡಿ ಹಾಲು ಎಂದು ಕೊಟ್ಟ ಸ್ಥಿತಿಯಲ್ಲಿ ದ್ರೋಣನ ಕುಟುಂಬವು ಬಳಲುತ್ತಿತ್ತು. ದ್ರೋಣರು ಕೃಪೆ ಸತ್ತ ನಂತರ ಮಗನನ್ನು ಕರೆದುಕೊಂಡು ದ್ರುಪದ ಆಸ್ಥಾನಕ್ಕೆ ಹೋಗಿ ಸಲುಗೆಯಿಂದ ಮಾತನಾಡಿದ್ದರಿಂದ ಕೋಪಗೊಂಡ ದ್ರುಪದನು [41]"ನೀನು ದುಃಸ್ಥಿತಿಯಲ್ಲಿದ್ದರೆ ನಾನು ಆಶ್ರಯಕೊಡುತ್ತೇನೆ. ಆದರೆ ಸಖಗಿಖ ಎಂಬ ಸಮಾನತೆಯ ಮಾತು ಬಿಟ್ಟು ರಾಜ ಸನ್ನಿಧಿಯಲ್ಲಿ ಭಯಭಕ್ತಿಯಿಂದಿರುವುದನ್ನು ಕಲಿಯಬೇಕೆಂದು" ನಿಂದಿಸಿ ಮಾತನಾಡಿದನು. ಇದರಿಂದ ಕೋಪಗೊಂಡ ದ್ರೋಣರು ದ್ರುಪದನ ವಿರುದ್ಧ, ತಮ್ಮ ಶಿಷ್ಯರ ಮೂಲಕ ಸೇಡು ತೀರಿಸಿಕೊಂಡರು.

ದ್ರೋಣನು ಪಾಂಚಾಲದಿಂದ ಹಸ್ತಿನಾವತಿಗೆ ಬಂದು, ಭಾವನಾದ ಕೃಪಾಚಾರ್ಯರು ಹೇಳಿದಂತೆ ಕೌರವರು ಹಾಗೂ ಪಾಂಡವರಿಗೆ ಬಿಲ್ವಿದ್ಯೆಯನ್ನು ಹೇಳಿಕೊಡಲು ಒಪ್ಪಿ, ಹಸ್ತಿನಾವತಿಯಲ್ಲೇ ಉಳಿದನು. ದ್ರೋಣನ ನೆಚ್ಚಿನ ಶಿಷ್ಯನೆಂದರೆ ಅರ್ಜುನ. ಈತನನ್ನು ಶಸ್ತ್ರಾಸ್ತ್ರ ವಿದ್ಯೆಯಲ್ಲಿ ನಿಪುಣನ್ನಾಗಿ ಮಾಡಿದನು. ದ್ರೋಣನು ತನ್ನ ಶಿಷ್ಯರಿಂದ ಗುರುದಕ್ಷಿಣೆಯನ್ನು ಪಡೆಯಲು ಮುಂದಾಗಿ ತಮ್ಮ ಹಿಂಗಿತದಂತೆ 'ದ್ರುಪದನನ್ನು ಸೆರೆಹಿಡಿದು ತಂದು ನನ್ನ ಮಂಚದ ಕಾಲಿಗೆ ಕಟ್ಟಿದರೆ ಗುರುದಕ್ಷಿಣೆ ಸಂದಂತೆ' ಎಂದಾಗ ಭೀಷ್ಮರಿಗೆ ಸಂತೋಷವಾಯಿತು. ಅರ್ಜುನನು ದ್ರುಪದನನ್ನು ಸೆರೆಹಿಡಿದು, ದ್ರೋಣದ ಮಂಚದ ಕಾಲಿಗೆ ಅವನನ್ನು ಕಟ್ಟಿ ಹಾಕಿದನು. ಆಗ ದ್ರುಪದನು ಸೋಲನ್ನು ಒಪ್ಪಿಕೊಂಡು [42]"ಪಾಂಚಾಲದ ಉತ್ತರ ಭಾಗಪೂರ್ತಿನಿನ್ನದಿರಲಿ ದಕ್ಷಿಣವನ್ನಾದ್‌ರೂ ನನಗೆ ಬಿಡು ಪಿತ್ರಾರ್ಜಿತ ರಾಜ್ಯದಿಂದ ಪೂರ್ತಿ ಭ್ರಷ್ಟನಾದ ಕಳಂಕದಿಂದ ಪಾರು ಮಾಡು, ಒದೆಯಬೇಡ ನಾನೇ ಭಕ್ತಿಯಿಂದ ಶಿರಭಾಗಿಸಿ ನಮಸ್ಕರಿಸುವೆ" ಎಂದು ಹೇಳಿ ಪಾಂಚಾಲದ ಕಾಂಪಿಲ್ಯವಿರುವ ದಕ್ಷಿಣ ಭಾಗವನ್ನು ತಾನಿಟ್ಟುಕೊಂಡನು.

ದ್ರೋಣರು ಕುರುಕ್ಷೇತ್ರ ಯುದ್ಧದಲ್ಲಿ ದುರ್ಯೋಧನ ಪರವಾಗಿ ನಿಂತರು. ತಂದೆಯಂತೆ ಅಶ್ವತ್ಥಾಮನು ಸಹ ಕೌರವರ ಪರವಾಗಿ ಯುದ್ಧ ಮಾಡಿದನು. ಯುದ್ಧದ ಆರಂಭದಲ್ಲಿ ಕೌರವ-ಪಾಂಡವ ಎರಡು ಪಕ್ಷಗಳು ನೀತಿ ನಿಯಮಗಳನ್ನು ನಿರೂಪಿಸಲು ಭೀಷ್ಮರ ಜೊತೆ ದ್ರೋಣರು ಹೋಗಿದ್ದರು. ಯುದ್ಧದ ಸಂದರ್ಭದಲ್ಲಿ ನಿಷಾದ ಕುಲದ ರಾಜಕುಮಾರ 'ಏಕಲವ್ಯ'ನು ದ್ರೋಣರನ್ನು ಭೇಟಿಯಾಗಿ.

41. ಪರ್ವ, ಪುಟ-449
42. ಪರ್ವ, ಪುಟ-458

[43]"ಗುರುಗಳೇ, ಅರ್ಜುನನ್ನು ನಿಮ್ಮ ಅತ್ಯಂತ ಪ್ರಿಯ ಶಿಷ್ಯನೆಂದು ಭಾವಿಸಿ ಅವನಿಗಾಗಿ ನನ್ನ ಹೆಬ್ಬೆರಳನ್ನು ಕೇಳದಿರಿ. ಈಗ ಅವನೇ ನಿಮ್ಮ ಮೇಲೆ ಯುದ್ಧಕ್ಕೆ ನಿಂತಿದ್ದಾನೆ" ಎಂದಾಗ ದ್ರೋಣರಿಗೆ ಕಸಿವಿಸಿಯಾಯಿತು. 'ಪರ್ವ'ದಲ್ಲಿ ದ್ರೋಣನು ಭೀಷ್ಮರ ಆಜ್ಞೆಯಂತೆ ಏಕಲವ್ಯನ ಹೆಬ್ಬೆರಳನ್ನು ಪಡೆದನು. ತಮ್ಮ ಹೆಸರು ಎಲ್ಲಿಯೂ ಬರದಂತೆ ಹೆಬ್ಬೆರಳು ತರುವಂತೆ ಆಜ್ಞಾಪಿಸಿದ್ದನ್ನು ಕಾಣಬಹುದು.

ಕುರುಕ್ಷೇತ್ರ ಯುದ್ಧದಲ್ಲಿ ಸೇನಾಧಿಪತ್ಯ ವಹಿಸಿದ್ದಂತಹ ಭೀಷ್ಮರು ಮೊದಲ ಹತ್ತು ದಿನಗಳ ಯುದ್ಧ ಮಾಡಿ, ನಂತರ ಸೇನಾಧಿಪತ್ಯವನ್ನು ತ್ಯಜಿಸಿದಾಗ ದುರ್ಯೋಧನನು ದ್ರೋಣಾಚಾರ್ಯರಿಗೆ ಸೇನಾಧಿಪತ್ಯದ ಪಟ್ಟ ಕಟ್ಟಿದನು. ಇದರಿಂದ ದ್ರೋಣರ ಮುಖದಲ್ಲಿ ಕೃತಜ್ಞತೆ ಮತ್ತು ಧನ್ಯತೆಯ ಭಾವ ಮೂಡಿಬಂತು. ದುರ್ಯೋಧನನು ಧರ್ಮರಾಜನ್ನು ಸೆರೆಹಿಡಿಸಿ ತರಲು ಹೇಳಿದ್ದಕ್ಕೆ ಒಪ್ಪಿದ ದ್ರೋಣ [44]"ಧರ್ಮಜನ್ನು ಸೆರೆ ಹಿಡಿಯುವುದೇ ನಮ್ಮ ಉದ್ದೇಶ. ಅದಕ್ಕೆ ತಕ್ಕಂತೆ ನಾನೊಂದು ವ್ಯೂಹ ರಚಿಸುತ್ತೇನೆ. ಅದರ ಮರ್ಮವನ್ನು ನೀವೆಲ್ಲ ಸರಿಯಾಗಿ ಅರಿತು ಯುದ್ಧ ಮಾಡತಕ್ಕದ್ದು" ಎಂದು ಹೇಳಿದ್ದರಿಂದ ಅದರಂತೆ ನಡೆದ ಸೈನ್ಯವು 'ಚಕ್ರವ್ಯೂಹ'ವನ್ನು ಬೇಧಿಸಲು ಮುಂದಾದ ಅರ್ಜುನನ ಮಗ 'ಅಭಿಮನ್ಯು' ಹತನಾಗಲು ಕಾರಣರಾದರು. ಇವರ ಸೇನಾಧಿಪತ್ಯದಲ್ಲಿ ಅನೇಕ ಪ್ರಮುಖರನ್ನು ಸದೆ ಬಡಿದರು. ಪಾಂಚಾಲರ ದ್ರುಪದ ರಾಜನು ಸಹ ಹತನಾದನು.

ದ್ರೋಣನು ಪರಾಕ್ರಮದಿಂದ ಯುದ್ಧ ಮಾಡಿದರು. ಆದರೆ ಪಾಂಡವರ ಸೇನಾಧಿಪತಿ ಧೃಷ್ಟದ್ಯುಮ್ನ ತನ್ನ ತಂದೆಗೆ ಆದಂತಹ ಅವಮಾನ ಹಾಗೂ ದ್ರುಪದನ ಸಾವಿಗೆ ಕಾರಣನಾದ ದ್ರೋಣನ ಮೇಲೆ ಪ್ರತಿಕಾರ ತೀರಿಸಿಕೊಳ್ಳುವ ಪ್ರತಿಜ್ಞೆ ಮಾಡಿದನು. ಯುದ್ಧದಲ್ಲಿ ಧೃಷ್ಟದ್ಯುಮ್ನನು ದ್ರೋಣನನ್ನು ಕೊಂದು ಅವರ ಕೊರಳನ್ನು ಕತ್ತರಿಸಿ ಶಿರವನ್ನು ಚಂಡಿನಂತೆ ಕೌರವ ಸೇನಾ ಮಧ್ಯಭಾಗಕ್ಕೆ ಎಸೆದನು. ದ್ರೋಣರನ್ನು ಕೊಂದ ಧೃಷ್ಟದ್ಯುಮ್ನನನ್ನು ಅರ್ಜುನನು ನಿಂದಿಸಿದನು. ಇಲ್ಲಿ ಆತನು ದ್ರೋಣರ ಮೇಲೆ ಹಿಟ್ಟಿದ್ದಂತಹ ಗುರುಪ್ರೀತಿಯನ್ನು ಕಾಣಬಹುದಾಗಿದೆ. ದ್ರೋಣನು ತನ್ನ ಪ್ರಿಯ ಶಿಷ್ಯನಾದ ಅರ್ಜುನನ ಪಕ್ಷ ಸೇರದೆ, ಅನ್ನದ ಋಣ ತಿರಿಸುವ ಉದ್ದೇಶದಿಂದ ಹಾಗೂ ಭೀಷ್ಮ ಕೌರವರ ಪರವಹಿಸಿದ್ದರಿಂದ ತಾನು ಸಹ ಕೌರವರ ಪಕ್ಷ ವಹಿಸಿದ್ದನು. ದ್ರೋಣನು ದ್ರುಪದನಿಂದ ಪಡೆದ ರಾಜ್ಯವನ್ನು ಸ್ವತಂತ್ರವಾಗಿ ಆಳಬಹುದಾಗಿತ್ತು. ಆದರೆ ಈತ ಕೌರವರ ಅಧೀನನಾಗಿ ಇದ್ದು, ಅವರಿಗಾಗೇ ತನ್ನ ಪ್ರಾಣ ತೆತ್ತಬೇಕಾದದ್ದು ವಿಶಾದದ ಸಂಗತಿಯಾಗಿದೆ.

43. ಪರ್ವ, ಪುಟ-465
44. ಪರ್ವ, ಪುಟ-579

ಶಲ್ಯ:-

ಶಲ್ಯ ಮದ್ರಾಧಿಪತಿ ಪರ್ವದ ಆರಂಭ ಮದ್ರಾಧಿಪತಿ ಶಲ್ಯ ಮತ್ತು ಆತನ ಮೊಮ್ಮಗಳು ಹಿರಣ್ಯಾವತಿಯರ ಸಂಭಾಷಣೆಯೊಂದಿಗೆ ಆರಂಭವಾಗುತ್ತದೆ. ಹಿರಣ್ಯಾವತಿಗೆ ಋತುನಷ್ಟವಾಗುತ್ತಿದೆ ಎಂಬುದು ಶಲ್ಯನಿಗೆ ಪಾಪಭಯ ಕಾಡುತ್ತದೆ. [45]"ಋತುಚಕ್ರ ನಷ್ಟವಾದರೆ ಪಿತೃಪಿತಾಮಹರು ನರಕವಾಸ ಮಾಡಬೇಕಾಗುತ್ತದೆ" ಎಂಬ ಪರಿಕಲ್ಪನೆ. ಈ ಮೊದಲ ಭಾಗದಲ್ಲಿಯೇ ಕಂಡುಬರುತ್ತದೆ. ಶಲ್ಯನ ಮಗ ರುಕ್ಮರಥನಿಗೆ ಸ್ವಯಂವರ ಏರ್ಪಡಿಸುವ ಚೈತನ್ಯವಿಲ್ಲದೆ. ಹಿರಣ್ಯಾವತಿಯನ್ನು ಕನ್ಯಾಶುಲ್ಕ ಪಡೆದು ಹೆಣ್ಣನ್ನು ಕೊಡಲು ಇಷ್ಟವಿರುವುದಿಲ್ಲ. ಶಲ್ಯ ತನ್ನ ತಂಗಿ ಮಾದ್ರಿಯನ್ನು ಭೀಷ್ಮರಿಂದ ಕನ್ಯಾಶುಲ್ಕ ಪಡೆದು ಪಾಂಡುವಿನೊಡನೆ ಮದುವೆ ಮಾಡಿಸಿದ್ದನು. ಆದರೆ ಈ ಪದ್ಧತಿ ಹಿರಣ್ಯಾವತಿಯ ಕಾಲಕ್ಕೆ ಬದಲಾಗಿ. ಅದನ್ನು ಕೀಳಾಗಿ ಕಾಣುವ ಪರಿಸ್ಥಿತಿ ಉಂಟಾಗಿರುತ್ತದೆ. ಶಲ್ಯನ ಪಾತ್ರದ ಮೂಲಕ ಲೇಖಕರು ಅಂದಿನ ಸಮಾಜದ ಆಚಾರ-ವಿಚಾರ. ಸಾಮಾಜಿಕ ಪರಿಸ್ಥಿತಿಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ.

ಪಾಂಡವರು ಯುದ್ಧದ ಆರಂಭವಾಗುವ ಸಂದರ್ಭದಲ್ಲಿ ಮದ್ರರಾಜ ಶಲ್ಯನಲ್ಲಿಗೆ ಪಾಂಚಾಲರ ಪುರೋಹಿತನನ್ನು ಕಳುಹಿಸಿ ತಮ್ಮ ಬೆಂಬಲ ಪಾಂಡವರಿಗೆ ನೀಡುವಂತೆ ಕೋರಿದಾಗ ಶಲ್ಯ ನೀಡುವುದಗಿ ಭಾಷೆ ನೀಡುತ್ತಾನೆ. ನಂತರದಲ್ಲಿ ದುಶ್ಯಾಸನನು ಶಲ್ಯನ ಬಳಿ ಬಂದು ಅವನ ಮನವೊಲಿಸಿ ತಮ್ಮ ಪರವಾಗಿ ಯುದ್ಧ ಮಾಡಲು ಒಪ್ಪಿಸುತ್ತಾನೆ. ದುಶ್ಯಾಸನನು [46]"ಯುದ್ಧದಲ್ಲಿ ನಾವು ಗೆದ್ದರೆನಿನ್ನ ತಂಗಿಯ ಇಬ್ಬರುಮಕ್ಕಳಿಗೂ ಖಂಡಿತ ಆ ರಾಜ್ಯ ಕೊಡುತ್ತೇವೆ. ಇದು ದುರ್ಯೋಧನನ ಆಣೆ ಮಾತು ಅಂತ ತಿಳಿದುಕೋ: ನಮಗೆ ಜಗಳವಿರುವುದು ಹಿರಿಯ ಮೂವರಲ್ಲಿ. ಕಿರಿಯ ಸಾಧುಗಳೊಡನೆಯಲ್ಲ" ಎಂಬ ಮಾತುಗಳಾಗಿದ್ದರಿಂದ ಹಾಗೂ ಭೀಷ್ಮರು ದುರ್ಯೋಧನ ಪರ ಸೇನಾಧಿಪತ್ಯ ವಹಿಸಿಕೊಂಡಿರುವುದನ್ನು ತಿಳಿದು ಶಲ್ಯ ರಾಜನು ತಮ್ಮ ಬೆಂಬಲವನ್ನು ಕೌರವರಿಗೆ ನೀಡಬೇಕೆಂದು ನಿರ್ಧರಿಸಿದನು. ಮುಂದೆ ಸತ್ಯ ತಿಳಿದ ಶಲ್ಯ ಪಾಂಡವರ ಪರ ವಹಿಸದೆ ಕೌರವರ ಪರವಾಗಿಯೇ ಹೋರಾಡಿದನು.

ಶಲ್ಯ ಮಹಾರಾಜ ತನ್ನ ಮಗನಾದ ರುಕ್ಕರಥನನ್ನು ತನ್ನ ರಾಜ್ಯ ನೋಡಿಕೊಂಡಿರುವಂತೆ ಹೇಳಿ. ತನ್ನ ಇನ್ನಿಬ್ಬರು ಮಕ್ಕಳಾದ ವಜ್ರ ಮತ್ತು ಅಜರೊಡನೆ ಸೈನ್ಯ ಸಮೇತವಾಗಿ ದುರ್ಯೋಧನನ ಪರವಾಗಿ ಯುದ್ಧ ಮಾಡಲು ಹೊರಟರು. ದಾರಿಯ ಉದ್ದಕ್ಕೂ ಪ್ರಯಾಣದ ಎಲ್ಲಾ ಆತಿಥ್ಯವನ್ನು ಕೌರವರೇನೋಡಿಕೊಂಡು ಮದ್ರರಾಜ ಮತ್ತು ಆತನ ಸೈನ್ಯವನ್ನು ಸ್ವಾಗತಿಸಿದರು. ಯುದ್ಧದ ಆರಂಭದಲ್ಲಿ ಪಾಂಡವರು ತಮ್ಮ ಕಡೆಗೆ ಯುದ್ಧ ಮಾಡಲು ಸೈನ್ಯ ಸಹಿತವಾಗಿ ಬರುವಂತೆ ವಿನಂತಿಸಿದರೂ ಹೋಗದೆ.

45. ಯುಗಸಾಕ್ಷಿ, ಪುಟ-213
46. ಪರ್ವ, ಪುಟ-43

ಕೌರವರಿಂದ ಪಡೆದ ಆಥಿತ್ಯಕ್ಕೆ ಬದ್ಧನಾಗಿದ್ದನು. ಶಲ್ಯ ರಾಜ ಕರ್ಣನು ಸೇನಾಧಿಪತ್ಯ ವಹಿಸಿದಾಗ ಆತನ ಸಾರಥಿಯಾಗಿ ಕರ್ಣನನ್ನು ಬೆಂಬಲಿಸದೆ ಅವನನ್ನು ಹಿಯಾಳಿಸಿ ಅವನ ಉತ್ಸಾಹ ಕಡಿದುಬೀಳುವಂತೆ ಮಾಡಿದ. ಕರ್ಣನಿಗೆ ಸಮರ್ಥವಾಗಿ ಸಾರಥ್ಯ ವಹಿಸದೆ ಯುದ್ಧ ಭೂಮಿಯಲ್ಲಿ ರಥವನ್ನು ಅರ್ಧದಲ್ಲೇ ಬಿಟ್ಟು ಬಂದದುದು. ಈತನ ಕ್ಷತ್ರಿಯತ್ವಕ್ಕೆ ಶೋಭೆ ತರುವಂತದಲ್ಲ.

ಯುದ್ಧದಲ್ಲಿ ಕರ್ಣ ಸತ್ತ ನಂತರದಲ್ಲಿ ದುರ್ಯೋಧನ ಶಲ್ಯನಿಗೆ ಸೇನಾಧಿಪತ್ಯವನ್ನು ವಹಿಸಿದನು. ದುರ್ಯೋಧನ ಶಲ್ಯನಿಗೆ ನಿನ್ನ ಮಕ್ಕಳನ್ನು ಕೊಂದ ಅರ್ಜುನನ ಮೇಲೆ ಪ್ರತಿಕಾರ ತೀರಿಸಿಕೊಳ್ಳಲು ನೀನೇ ಸೇನಾಧಿಪತ್ಯ ವಹಿಸಬೇಕೆಂದು ಶಲ್ಯನಿಗೆ ಒಪ್ಪಿಸಿದನು. ಆ ರಾತ್ರಿ ಮದ್ರದಿಂದ ಬಂದ ಪುರೋಹಿತನಿಂದ ಹಿರಣ್ಯವತಿಯು ನಾಗರ ತರುಣರೊಡನೆ ಓಡಿಹೋದ ಸುದ್ದಿ ತಿಳಿದು. [47]"ಸಾಕು ಬಿಡು ಅವಳು ಓಡಿಹೋಗಿದ್ದಾಳೆ ಅವಳನ್ನೂ ಸೇರಿಸಿ ಇಡೀ ಕಾಡಿಗೆ ಬೆಂಕಿ ಹೊತ್ತಿಸಿ ಯಾವ ಕಾಡೆಂದು ನಿನಗೆ ಗೊತ್ತು ತಾನೆ" ಎಂದು ಶಲ್ಯ ಕೇಳಿದ. ಹಿರಣ್ಯವತಿಯನ್ನು ಕರೆದುಕೊಂಡು ಹೋದ ನಾಗ ಜನಾಂಗವನ್ನು ನಿರ್ನಾಮ ಮಾಡಲು ಅರ್ಜುನನ ಸಹಾಯ ಪಡೆಯಲು ಯೋಚಿಸಿದ. ಆದರೆ ಅನುಚಿತವಲ್ಲವೆಂದು ತಿಳಿದು ಸುಮ್ಮನಾದನು. ಶಲ್ಯ ಸೇನಾಧಿಪತ್ಯ ವಹಿಸಿ ಯುದ್ಧದಲ್ಲಿ ಸತ್ತ ಮೇಲೆ ದುರ್ಯೋಧನನ ಸೈನ್ಯವೆಲ್ಲ ನಾಶವಾಯಿತು.

ಕೃಷ್ಣ:

ಕೃಷ್ಣನ ಪಾತ್ರ ಮತ್ತು ಅವನ ವ್ಯಕ್ತಿತ್ವವು ಪರ್ವ ಕಾದಂಬರಿಯಲ್ಲಿ ಬಲರಾಮ, ಕುಂತಿ, ದ್ರೌಪದಿ, ಯುಯುಧಾನ, ಕ್ರತು, ಕ್ರತುವಿನ ತಾಯಿ ಇನ್ನೂ ಮುಂತಾದ ಅನೇಕ ಪಾತ್ರಗಳ ಮೂಲಕ ಅವರ ಸ್ವಗತಗಳ ಮೂಲಕ ಹಂತ ಹಂತವಾಗಿ ನಮ್ಮ ಮುಂದೆ ಅರಳುತ್ತವೆ. ಉಳಿದೆಲ್ಲಾ ಪಾತ್ರಗಳಂತೆ ಕೃಷ್ಣನ ಪಾತ್ರ ಸ್ವತಂತ್ರ ವಾಗಿ ಆಲೋಚಿಸುವಂತಹ ಸನ್ನಿವೇಶವನ್ನು ಲೇಖಕರು ಸೃಷ್ಟಿಸಿಯೇ ಇಲ್ಲ. ಕೃಷ್ಣನ ಪಾತ್ರ ರಚನೆ ಒಂದು ಯಶಸ್ವಿ ತಂತ್ರವಿನ್ಯಾಸವನ್ನು ಹೊಂದಿದೆ.

ಕೃಷ್ಣನ ಪಾತ್ರ ಯುಯುಧಾನದ ಹಿನ್ನೋಟದ ಮೂಲಕ ಪರಿಚಯವಾಗುತ್ತಾ. ಕೃಷ್ಣನು ವಸುದೇವ ಮತ್ತು ದೇವಕಿಯರ ಪುತ್ರನಾಗಿ ಜನಿಸಿ, ವಸುದೇವನ ಸ್ನೇಹಿತ ನಂದನ ಮನೆಯಲ್ಲಿ ಬೆಳೆದನು. ಕೃಷ್ಣ ಹದಿನೆಂಟು ವರ್ಷದವನ್ನಾಗಿದ್ದಾಗ ಬಲರಾಮನೊಡನೆ 'ಆಯುಧೋತ್ಸವ' ನೋಡಲು ವಜ್ರದಿಂದ ಮಧುರೆಗೆ ಬಂದಾಗ ಮಹಾಕ್ರೂರಿಯಾದ 'ಕಂಸ'ನನ್ನು ಕೊಂದನು. ಇದರಿಂದ ಕೋಪಗೊಂಡ ಕಂಸನಿಗೆ ಹೆಣ್ಣುಕೊಟ್ಟ ಮಾವ 'ಜರಸಂಧ' ಬಾರಿ ಸೈನ್ಯದಿಂದ ಯುದ್ಧಕ್ಕೆ ಬಂದು ಬಲರಾಮನೊಡನೆ

47. ಪರ್ವ, ಪುಟ-642

ಯುದ್ಧ ಮಾಡಿದ. ಎರಡನೇ ಬಾರಿಗೆ ಕೃಷ್ಣ ಅವನ ಸೈನ್ಯದ ದಿಕ್ಕು ತಪ್ಪಿಸಿದನು. ನಂತರ ಕೃಷ್ಣನು ವಿದರ್ಭದ 'ರುಕ್ಮಿಣಿಯನ್ನು' ಸ್ವಯಂವರದಿಂದ ಹೊತ್ತು ತಂದು ಮದುವೆಯಾದ. ಜರಸಂಧನು ಮೂರನೇ ಬಾರಿಗೆ 'ಮಥುರೆ' ಪಟ್ಟಣ ನಾಶ ಮಾಡಲು ಬರುತ್ತಿರುವುದನ್ನು ತಿಳಿದ ಕೃಷ್ಣ ತನ್ನ ಪರಿವಾರ ಸಮೇತವಾಗಿ ಪ್ರಜೆಗಳೊಂದಿಗೆ ಮಥುರೆಯನ್ನು ಬಿಟ್ಟು ಹೋಗಿ. ಸಮುದ್ರ ತೀರದ ಹೊಸ ಪಟ್ಟಣ 'ದ್ವಾರಕೆ'ಯನ್ನು ಕಟ್ಟಿ ಅಲ್ಲಿ ನೆಲೆಸಿದನು.

ಕೃಷ್ಣ ಹಾಗೂ ಪಾಂಡವರ ಭೇಟಿಯಾದದ್ದು ದ್ರೌಪದಿಯ ಸ್ವಯಂವರದ ಸಂದರ್ಭದಲ್ಲಿ. ಕೃಷ್ಣನು ಪಾಂಡವರಿಗೆ ಸಹಾಯ ನೀಡುತ್ತಿದ್ದನು. ಕೃಷ್ಣ ಮತ್ತು ಅರ್ಜುನರು ಜೊತೆಗೂಡಿ. ಕೌರವರು ನೀಡಿದ ಖಾಂಡವವನವನ್ನು ದಹನ ಮಾಡಿ. ಅಲ್ಲಿ ಹೊಸ ಪಟ್ಟಣವನ್ನು ಕಟ್ಟಲು ದ್ವಾರಕೆಯಿಂದ ಚಿನ್ನ. ತಾಮ್ರದ ಪಾತ್ರೆಗಳು. ರಥ. ಕುದುರೆ. ಶಿಲ್ಪಿ ಬಡಗಿಗಳನ್ನು ಕಳುಹಿಸಿ ಸಹಾಯ ಮಾಡಿದನು. ಮಯಾಸುರನಿಂದ ಖಾಂಡವ ಪ್ರಸ್ಥದಲ್ಲಿ ಮಯಾಸಭೆಯನ್ನು ಕಟ್ಟಿಸಿದರು. ಈ ನಗರಕ್ಕೆ 'ಇಂದ್ರಪ್ರಸ್ಥ'ವೆಂಬ ಹೆಸರನ್ನು ಇಟ್ಟರು. ಹೊಸ ನಗರ ಕಟ್ಟಿದ ಮೇಲೆ ಕೃಷ್ಣ ಧರ್ಮರಾಜನಿಗೆ 'ರಾಜಸೂಯ' ಯಾಗ ಮಾಡಲು ಸೂಚಿಸಿದನು. ಅದಕ್ಕೆ ಕಂಟಕವಾಗಿದ್ದ ಜರಾಸಂಧನನ್ನು ಕೃಷ್ಣ ಭೀಮನಿಂದ ಕೊಲ್ಲಿಸಿ. ಅವರು ಸೆರೆಹಿಡಿದಿದ್ದ ರಾಜರನ್ನು ಬಿಡುಗಡೆ ಮಾಡಿಸಿದನು. ರಾಜಸೂಯ ಯಾಗವನ್ನು ಮಾಡಿಸಿದ ಕೃಷ್ಣ ಪಾಂಡವರಿಂದ ಪ್ರಥಮ ಸತ್ಕಾರವನ್ನು ಪಡೆದನು.

ಪಾಂಡವರು ರಾಜಸೂಯ ಯಾಗದಲ್ಲಿ ಪ್ರಥಮ ಸತ್ಕಾರವನ್ನು ಕೃಷ್ಣನಿಗೆ ನೀಡುವುದು ಸರಿಯಲ್ಲವೆಂದು ಶಿಶುಪಾಲ ವಿರೋಧಿಸಿ. ಭೀಷ್ಮರನ್ನು ನಿಂಧಿಸಿದಾಗ. ಕೃಷ್ಣ 'ಶಿಶುಪಾಲ'ನನ್ನು ಕೊಂದನು. ಪಾಂಡವರು ಅರಣ್ಯವಾಸ ಮತ್ತು ಅಜ್ಞಾತವಸವನ್ನು ಮುಗಿಸಿ ಬಂದ ಮೇಲೆ ಅವರ ಪರವಾಗಿ ಕೌರವರ ಬಳಿ ಸಂಧಾನ ಮಾಡಿಕೊಳ್ಳಲು ಹಸ್ತಿನಾವತಿಗೆ ಬಂದು. 'ಕೊನೆಯ ಪಕ್ಷ ಐದು ಹಳ್ಳಿಗಳನ್ನಾದರೂ ಕೊಡುವಂತೆ ಕೇಳಿದನು'. ದುರ್ಯೋಧನನು ಕೊಡಲು ಒಪ್ಪದೆ ಯುದ್ಧಕ್ಕೆ ಮುಂದಾದನು. ಆಗ ಕೃಷ್ಣ ಪಾಂಡವರ ಪರವಾಗಿ ನಿಂತು ಯುದ್ಧದಲ್ಲಿ ಅವರು ಗೆಲ್ಲುವಂತೆ ಮಾಡಿದನು. ಅರ್ಜುನನ ಸಾರಥಿಯಾಗಿ ಯುದ್ಧದಲ್ಲಿ ಹೋರಾಡಲು ಸಹಾಯ ಮಾಡಿದನು.

ಎಸ್.ಎಲ್.ಭೈರಪ್ಪನವರು ಯಾದವರ ಬಗ್ಗೆ ಹೇಳುತ್ತಾ [48]"ಮೂಲಕಥೆಯ ಮಿತಿ ಕಳಚಿಕೊಂಡು ಬೇಕಾದಲ್ಲಿ ಹೊಸಪಾತ್ರ ಹೊಸ ಸನ್ನಿವೇಶಗಳನ್ನು ಸೃಷ್ಟಿಸಿಕೊಳ್ಳುವ ಸಾಮರ್ಥ್ಯ ಬಂದದ್ದು ಯಾದವರ ಜಗತ್ತು. ನನ್ನ ಭಾವಾನುಭವದ ಅವಿಭಾಜ್ಯ ಅಂಗವಾಗಿ ಸೇರಿಕೊಂಡಿದ್ದರಿಂದ"......... ಎಂದು 'ನಾನೇಕೆ

48. ಯುಗಸಾಕ್ಷಿ, ಪುಟ-221

ಬರೆಯುತ್ತೇನೆ' ಎಂಬ ಗ್ರಂಥದಲ್ಲಿ ಬರೆದಿದ್ದಾನೆ. ಪರ್ವದಲ್ಲಿ ಬೇರೆ ಬೇರೆ ಪಾತ್ರಗಳ ಮೂಲಕ ಕೃಷ್ಣನ ವ್ಯಕ್ತಿತ್ವವನ್ನು ಬಿಡಿಸಿಟ್ಟರೂ ಕೃಷ್ಣ ಎಲ್ಲರ ಸಂಪೂರ್ಣ ಗ್ರಹಿಕೆಗೆ ಮೀರಿದವನಾಗುತ್ತಾನೆ. ಹೀಗೆ ಯಾರ ಗ್ರಹಿಕೆಗೂ ಸಿಗದೆ ಕೃಷ್ಣ ಪರ್ವದ ಎಲ್ಲಾ ಪಾತ್ರಗಳ ಮನಸ್ಸುಗಳಲ್ಲಿ ಮತ್ತು ಕಾರ್ಯಗಳಲ್ಲಿ ಪ್ರೇರಕ ಶಕ್ತಿಯಾಗಿ ಸ್ಫೂರ್ತಿಯಾಗಿ, ಅನೇಕ ಬಾರಿ ಪಾತ್ರವೂ ಆಗಿ ಎಲ್ಲಾ ಪಾತ್ರಗಳಿಗಿಂತ ಉನ್ನತ ಸ್ಥಾನದಲ್ಲಿ ನಿಲ್ಲುತ್ತಾನೆ.

ಗಾಂಧಾರಿ:

ಪರ್ವದ ಕಡೆಯ ಭಾಗದಲ್ಲಿ ಕೌರವ ಪಾಂಡವರ ನಡುವೆ ನಡೆದಿದ್ದ ಯುದ್ಧ ಮುಗಿದು ಧೃತರಾಷ್ಟ್ರನ ಅರಮನೆಯಲ್ಲಿ ದೀಪದ ಎಣ್ಣೆಗೂ ಬರ ಬಂದಿದ್ದ ಪರಿಸ್ಥಿತಿಯಲ್ಲಿ, ಕುರುಡು ದೊರೆಯನ್ನು ಮದುವೆಯಾಗಿ ಕಣ್ಣಿಗೆ ಪಟ್ಟಿ ಕಟ್ಟಿಕೊಂಡೇ ಬಾಳು ಸವೆಸಿ, ತನ್ನೆಲ್ಲ ಮಕ್ಕಳನ್ನು ಕಳೆದುಕೊಂಡಿದ್ದ ಗಾಂಧಾರಿ, ಹೀಗೆ ಯೋಚಿಸುತ್ತಾಳೆ. [49]"ತನ್ನ ಶಿಸುವಿನ ರೂಪ, ಆಕಾರ, ಬಣ್ಣ, ಬುದ್ಧಿ, ಸ್ವಭಾವಗಳನ್ನು ಬಯಸಿ ನಿರ್ಧರಿಸುವ ಅದಕ್ಕೆ ತಕ್ಕ ಗಂಡನನ್ನು ಹುಡುಕಿ ಆಯ್ದು ಬೀಜವನ್ನು ಬೇಡಿ ಧರಿಸಿ ಮಕ್ಕಳನ್ನು ಹಡೆಯುವಂತಿದ್ದರೆ ಎಷ್ಟು ಚನ್ನ" ತನ್ನಮಕ್ಕಳನ್ನೆಲ್ಲಾ ಯುದ್ಧದಲ್ಲಿ ಕಳೆದುಕೊಂಡ ತಾಯಿಯ ಹೃದಯ, ಉಳಿದು ಬಾಳುವ ತಳಿಯನ್ನು ಸೃಷ್ಟಿಸಲಿಲ್ಲವಲ್ಲಾ ಎಂಬ ಕೊರಗಿನಿಂದ ವಿಲಪಿಸುವುದನ್ನು ಕಾಣಬಹುದು. 'ಕುಂತಿ ನಿಯೋಗದಿಂದ ಮಕ್ಕಳನ್ನುಪಡೆದ ನೀನೇ ಪುಣ್ಯವಂತೆ' ಎಂದು ಹೇಳಿಕೊಂಡಳು.

ಪರ್ವದ ಕೊನೆಯ ಭಾಗದಲ್ಲಿ ಕೃಷ್ಣನ ಮೂಲಕ ತನ್ನ ಜೀವನದ ಹಿನ್ನೋಟಕ್ಕೆ ಹೋದಂತೆ ಗಾಂಧಾರಿ, ಕುರುಡು ದೊರೆಯೊಡನೆ ಮದುವೆಯನ್ನು ವಿರೋಧಿಸಿದ ಬಗ್ಗೆ ನುಡಿಯುತ್ತಾ, [50]"ಅಪ್ಪ ಲೋಭಕ್ಕೆ ಪಕ್ಕಾರ ಅವನ ಎದುರಿಗೆ ನಾನು ಮೇಲು ವಸ್ತ್ರದ ಒಂದು ಸೆರಗನ್ನು ಸರ್ರನೆ ಗೀಳಿ ಕುರುಡನಿಗೆ ಕೊಡುವುದಾದರೆ ನಾನು ಅವನ ಮುಖ ನೋಡುವುದಿಲ್ಲ ಎಂದು ಎರಡು ಕಣ್ಣುಗಳನ್ನುಕಟ್ಟಿಕೊಂಡೆ" ಎಂದು ಹೇಳಿದಳು. ಮುಂದೆ ಅವಳು ಕೃಷ್ಣನ ಮಾತಿಗೆ ಬೆಲೆ ಕೊಟ್ಟು ಕಣ್ಣಿನ ಪಟ್ಟಿ ತೆಗೆದು ಪಾಂಡವರು ಕುಂತಿ, ದ್ರೌಪದಿ, ಕೃಷ್ಣರನ್ನು ಆಶೀರ್ವಧಿಸಿದಳು. ಸಂಜಯ ಯುದ್ಧದಲ್ಲಿ ಕರ್ಣನ ಸೈನಾಧಿಪತ್ಯದ ವಿಚಾರವನ್ನು ಹೇಳುತ್ತಿರುವಾಗ ಗಾಂಧಾರಿ: [51] "ಕರ್ಣ ನಾನು ಹೆತ್ತದು ಹದಿನಾಲ್ಕು ಗಂಡು ಮಕ್ಕಳನ್ನೆಲ್ಲಾ ಹದಿನೈದು" ಎನ್ನುವುದು ಅವಳು ಕರ್ಣನಲ್ಲಿ ಹೊಂದಿದ್ದ ಪ್ರೀತಿಯನ್ನು ತೋರುತ್ತದೆ. ಭೈರಪ್ಪನವರು ಗಾಂಧರಿ ಪಾತ್ರದ ಅಂತರಂಗದೊಳಕ್ಕಿಳಿದು, ಒಳತೋಟಿ ಮತ್ತು ಸಾಚಾತನಗಳ ಅತಿಸೂಕ್ಷ್ಮ ಪದರಗಳನ್ನು ಬಿಚ್ಚಿಡುವಂತೆ ಚಿತ್ರಿಸಿದ್ದಾರೆ.

49. ಯುಗಸಾಕ್ಷಿ, ಪುಟ-212
50. ಪರ್ವ, ಪುಟ-662
51. ಪರ್ವ, ಪುಟ-599

ಕುಂತಿ:

ಕುಂತಿ ಶೂರಸೇನನ ಮಗಳು. ಇವಳ ಸಾಕು ತಂದೆ ಭೋಜರಾಜ. ಇವಳು ಸ್ವಯಂವರದ ಮೂಲಕ ಪಾಂಡುರಾಜನನ್ನು ವೈಭವದಿಂದ ಮದುವೆಯಾಗಿ ಹಸ್ತಿನಾಪುರದ ಮಹಾರಾಣಿಯಾದಳು. ಪಾಂಡುರಾಜ ವೀರ್ಯಹೀನನಾಗಿದ್ದರಿಂದ ಕುಂತಿಗೆ ಅವನಲ್ಲಿ ಮೂಕ ತಿರಸ್ಕಾರ ಮೂಡಿತು. ಮದುವೆಯ ಮೊದಲೆ ದುರ್ವಾಸನಿಂದ ಕಾನೀನ ಪುತ್ರನನ್ನು ಪಡೆದ ಅನುಭವ. ಕುಂತಿಯಲ್ಲಿ, ಸಹಜವಾಗಿಯೇ ಪಾಂಡುವಿನ ಮೇಲೆ ತಿರಸ್ಕಾರ ಹುಟ್ಟುವಂತೆ ಮಾಡಿತ್ತು. ಪಾಂಡು, ಕುಂತಿ, ಮಾದ್ರಿಯರು ಹಿಮಾಲಯಕ್ಕೆ ಹೋಗಿದ್ದಾಗ, ಧೃತರಾಷ್ಟ್ರನ ಮದುವೆಯಾದ ವಿಷಯ ತಿಳಿದ ಪಾಂಡುರಾಜ ರಾಜ್ಯ ಉಳಿಸಿಕೊಳ್ಳುವ ಆಸೆಯಿಂದ ಕುಂತಿಗೆ 'ನನಗೊಂದು ಮಗು ಕೊಡು ಬೇಗ, ಅರ್ಥವಾಯಿತೆ'? ಎಂದು ಹೇಳಿ ಕ್ಷತ್ರೀಯ ಧರ್ಮದಂತೆ ಕುಂತಿಗೆ ನಿಯೋಗ ಮಾಡಿಸಲು ಒಪ್ಪಿಸಿದನು. ಪಾಂಡುರಾಜ ತಾನೆ ಆಯ್ಕೆ ಮಾಡಿದ ಹಿಮಾಲಯದ ದೇವಾಂಗ ಜನರ ಮುಖ್ಯಸ್ಥರಿಂದ ಕುಂತಿಗೆ ನಿಯೋಗ ಮಾಡಿಸಿ, ಧರ್ಮ, ಭೀಮ, ಅರ್ಜುನರೆಂಬ ಮೂರು ಗಂಡು ಮಕ್ಕಳನ್ನು ಪಡೆದನು. ಹಿಮಾಲಯದಲ್ಲೇ ಪಾಂಡು ತೀರಿಕೊಂಡಾಗ, ಮಾದ್ರಿ ಸಹಗಮನ ಮಾಡಿ, ತನ್ನ ಮಕ್ಕಳ ಜವಾಬ್ದಾರಿಯನ್ನು ಕುಂತಿಗೆ ನೀಡಿದಳು.

ಪಾಂಡವರನ್ನು ಹಸ್ತಿನಾಪುರಕ್ಕೆ ಕರೆತಂದು ಪಾಲನೆ ಮಾಡಿದ ಛಲಗಾತಿ, ದಾಯಾದಿ ಮತ್ಸರವನ್ನು ಅರಗಿನರಮನೆಯ ಕಿಚ್ಚನ್ನು, ಏಕಚಕ್ರನಗರಿಯ ವಾಸವನ್ನು ಅರಗಿಸಿಕೊಂಡಳು. ಮುಂದೆ ದ್ರೌಪದಿಯನ್ನು ತನ್ನ ಐದು ಮಕ್ಕಳಿಗೆ ತಂದುಕೊಳ್ಳಲು ನಿರ್ಧರಿಸಿ ಕುಂತಿ [52] "ದಾಂಪತ್ಯ ಸುಖ ಪಡೆಯುವುದರಲ್ಲಿ, ಕೊಡುವುದರಲ್ಲಿ ಹೆಂಗಸಿಗೆ ಗಂಡಸಿನ ಐದರಷ್ಟು ಶಕ್ತಿಯುಂಟು. ಮಳೆಸುರಿಸಿ ಮೋಡ ಬರಿದಾಗುತ್ತದೆ. ಒಂದುಮೋಡದಿಂದ ಭೂಮಿ ತೃಪ್ತವಾಗುತ್ತದೆಯೇ? ನನ್ನ ಐದು ಮಕ್ಕಳನ್ನು ನೀನು ಒಟ್ಟಿಗೆ ಮದುವೆಯಾಗು ನಿನಗೆ ಸುಖದ ಸಮೃದ್ಧಿಯಿರಲಿ ನಿನ್ನಂಥ ಸುಕದ ಸಮೃದ್ಧಿ ನಮ್ಮ ಆರ್ತ್ಯಾವರ್ತದ ಯಾವ ಹೆಂಗಸಿಗೂ ಇಲ್ಲ" ಹೇಳಿ ದ್ರೌಪದಿ ಕನಸಿನಲ್ಲಿಯೂ ಊಹಿಸಲಾಗದ ಐದು ಜನರೊಡನೆಯೂ ದಾಂಪತ್ಯಕ್ಕೆ ಒಪ್ಪಿಸುತ್ತಾಳೆ. ಕುಂತಿ ಸ್ವತಃ ಐದು ಗಂಡಸರ ಸಹವಾಸ ಮಾಡಿದ್ದು, ದುರ್ವಾಸ, ಪಾಂಡು, ಧರ್ಮಾಧಿಕಾರಿ, ಮರುತ್ತ, ಇಂದ್ರ ಸಹವಾಸದಿಂದ ನಾಲ್ಕು ಮಕ್ಕಳನ್ನು ಪಡೆದಿದ್ದಳು. ಈಕೆ ಪಾಂಡುವಿನಿಂದ ಸಾಂಸಾರಿಕ ತೃಪ್ತಿ ಪಡೆಯದೇ ಇದ್ದದರಿಂದಲೋ ಅಥವಾ ತನ್ನ ಮಕ್ಕಳಲ್ಲಿ ಒಗ್ಗಟ್ಟು ಮೂಡಿಸಲೋ, ತನ್ನ ಐದು ಮಕ್ಕಳೊಡನೆ ದ್ರೌಪದಿಯ ಮದುವೆ ಮಾಡಿದಳು.

ಪಾಂಡವರು ಮತ್ತು ದ್ರೌಪದಿಯ ವನವಾಸ, ಅಜ್ಞಾತವಾಸವನ್ನು ಅನುಭವಿಸುವಾಗ 'ವಿದುರ'ನ ಮನೆಯಲ್ಲಿ ಮಕ್ಕಳ ಮುಖ ನೋಡದೆ ಇದ್ದು 'ಮಕ್ಕಳು ಬಂದಾಗ ಯುದ್ಧ ಮಾಡಿ ರಾಜ್ಯ ಸಂಪಾದಿಸಿ ತನನ್ನು ಕರೆದುಕೊಂಡು ಹೋಗುವಂತೆ ಧೀರ ಸಂದೇಶ ಕಳುಹಿಸಿದಳು'. ಕುಂತಿಯ ಅಂತರಂಗ ನಾನು

52. ಪರ್ವ, ಪುಟ-167

ತ್ಯಜಿಸಿದ್ದ ಮಗು ಕರ್ಣನಿಗಾಗಿ ಮಿಡಿಯುತ್ತಿತ್ತು. ತನ್ನಿಂದ ಕರ್ಣನಿಗಾದ ಅನ್ಯಾಯ ಅವಳೆದೆಯನ್ನು ಚುಚ್ಚುತ್ತಿತ್ತು. ಯುದ್ಧದಲ್ಲಿ ಮಡಿದ ಕರ್ಣನ ಕಳೇಬರವನ್ನು ಹುಡುಕಲು ರಣರಂಗಕ್ಕೆ ವಿದುರನೊಡನೆ ಬರುವ ಬಿಳಿಕೂದಲ, ಬಿಳಿವಸ್ತ್ರದ ಸುಕ್ಕುಮುಖದ ಕುಂತಿ ಚಿತ್ರಣ ಮನಮಿಡಿಸುವಂತೆ ಚಿತ್ರಿತವಾಗಿದೆ.

ದ್ರೌಪದಿ ಮತ್ತು ಸುಭದ್ರೆ ಯುದ್ಧದಲ್ಲಿ ಮಕ್ಕಳನ್ನು ಕಳೆದುಕೊಂಡ ಮೇಲೆ, ಕುಂತಿಗಿದ್ದ ಆಸೆ ಉತ್ತರೆಯ ಗರ್ಭವೊಂದೆ. ಉತ್ತರೆ ಸತ್ತ ಮಗುವಿಗೆ ಜನ್ಮ ನೀಡಿದಾಗ ಕುಂತಿ ಅಳತೊಡಗಿದಾಗ, ದ್ರೌಪದಿ ನಡೆದು ಬಂದಿದ್ದ ಪದ್ಧತಿಯಂತೆ ಉತ್ತರೆಗೆ ನಿಯೋಗ ಮಾಡಿಸಲು ಸೂಚಿಸಿದಾಗ ಕುಂತಿ [53]"ಬೇಡ ಇನ್ನು ಅದು ಬೇಡ" ಎನ್ನುತ್ತಾಳೆ ಈ ನಿಯೋಗಗಳಲ್ಲಿ ಅನುಭವಿಸಬೇಕಾಗುವ ಮಾನಸಿಕ ತುಮುಲಗಳನ್ನು ಕುಂತಿಗಿಂತ ಹೆಚ್ಚಾಗಿ ಬೇರೆ ಯಾರು ಅರಿಯಲು ಸಾಧ್ಯ? ಆದರೂ ಕುಂತಿಗೆ ತನ್ನ ವಂಶ ಬೆಳೆಸಬೇಕೆನ್ನುವ ಆಸೆಯಾಗುತ್ತದೆ. ಇದಕ್ಕೆ ನಿಯೋಗ ಒಂದೇ ಪರಿಹಾರವೆಂಬುದನ್ನು ಮತ್ತೆ ಸೂಚಿತವಾಗಿದೆ.

ಮಾದ್ರಿ

ಕುರುವಂಶ ಬೆಳೆಸುವ ಸಂಕಲ್ಪದಿಂದ ಭೀಷ್ಮ, ಮದ್ರದೇಶದಿಂದ ಮಾದ್ರಿಯನ್ನು ಕೊಂಡು ತಂದು ಪಾಂಡುವಿನೊಡನೆ ಮದುವೆ ಮಾಡಿಸಿದ ಇವಳು ಕುಂತಿಗಿಂತ ತೆಳಗೆ ಆಕರ್ಷಕ ಮಾಟವುಳ್ಳವಳಾಗಿದ್ದಳು. ಪಾಂಡುವಿಗೆ ಮಾದ್ರಿ ತನಗೆ ತಿಳಿದೆಲ್ಲ ಕಾಮಕಲೆಯನ್ನು ತೋರುತ್ತಿದ್ದರಿಂದ ಅವನಿಗೆ ಸಂತೋಷವಾಗುತ್ತಿತ್ತು. ಆಗ [54]"ಕುಂತಿ ಅಂದರೆ ಭಾರೀ ಸುಂದರ ಹೆಣ್ಣಾನೆ, ಕಂಡರೆ ಮನಸ್ಸು ಸೋತು ದಾಸವಾಗುತ್ತದೆ. ಆದರೆ ಅವಳನ್ನು ಸವಾರಿ ಮಾಡಲು ಸಾಧ್ಯವಿಲ್ಲ ನೀನೇ ನನಗೆ ತಕ್ಕವಳು" ಅನ್ನುತ್ತಿದ್ದ. ಮಾದ್ರಿಯಿಂದ ಕಾಮಕಲೆಯನ್ನು ಕೇಳಿ ತಿಳಿದ ಕುಂತಿಗೆ ಅವಳಲ್ಲಿ ಮತ್ಸರ ಹುಟ್ಟಿತ್ತು. ಮಾದ್ರಿಯು ಪಾಂಡು ಮತ್ತು ಕುಂತಿಯ ಒಪ್ಪಿಗೆ ಪಡೆದು ದೇವಲೋಕದ 'ಅವಳಿ ವೈದ್ಯರಿಂದ' ನಿಯೋಗ ಮಾಡಿಸಿಕೊಂಡು ನಕುಲ–ಸಹದೇವ ಎಂಬ ಮಕ್ಕಳಗನೇತ್ತಳು. ಮತ್ತೆ ಕುಂತಿಯನ್ನು ಕುರಿತು [55]"ಅಕ್ಕ ನನಗೇನೋ ಇವು ಗಂಡಾದದ್ದರಿಂದ ನಿರಾಶೆಯೇ ಆಗಿದೆ. ಹೆಣ್ಣನ್ನು ಬಯಸುತ್ತಿದ್ದೆ ನಾನು" ಎಂದಳು ಕುಂತಿಗೆ ಮತ್ಸರ ಉಂಟಾಗಿ ಮತ್ತೆ ಇವಳಿಗೆ ಅವಳ ಮಕ್ಕಳಾದರೆ, ತನ್ನ ಪಟ್ಟ ಮಹಿಷಿ ಸ್ಥಾನಕ್ಕೆ ಧಕ್ಕೆಯಾಗಬಹುದೆಂದು ಜಾಗೃತಳಾಗಿ ಇನ್ನೂ ನನಗೂ ಮಕ್ಕಳು ಬೇಡ, ಮಾದ್ರಿ ಕೇಳಿದರೆ ಸಮ್ಮತಿಸಕೂಡದು ಎಂದು ಪಾಂಡುವರಿಗೆ ಹೇಳಿದಳು.

53. ಪರ್ವ, ಪುಟ-682
54. ಪರ್ವ, ಪುಟ-93
55. ಪರ್ವ, ಪುಟ-88

ಪಾಂಡುವು ಹಿಮಾಲಯದ ವೈದ್ಯರಿಂದ ಚಿಕಿತ್ಸೆ ಪಡೆಯುತ್ತಿದ್ದರಿಂದ ಅವನಲ್ಲಿ ಸ್ವಲ್ಪ ಮಟ್ಟಿನ ಸಾಮರ್ಥ್ಯ ಜಾಗೃತವಾಗಿ ಮಾದ್ರಿಯೊಡನೆ ಸಂಭೋಗದಲ್ಲಿ ತೊಡಗಿದಾಗ ಉದ್ರಿಕ್ತನಾಗಿ ಒತ್ತಾಡ ತಡೆಯುವ ಸಾಮರ್ಥ್ಯವಿಲ್ಲದೆ ಸಾಯುತ್ತಾನೆ. ಆ ಸಂದರ್ಭದಲ್ಲಿ ಮಾದ್ರಿ ಕುಂತಿಗೆ ಸತ್ಯ ಹೇಳುತ್ತಾ ತಿರುಗಾಡುವ ನೆಪಮಾಡಿ ಅಷ್ಟು ದೂರ ಕರೆದೊಯ್ಯುತ್ತಿದ್ದ ನಾನಂತೂ ಹಸಿದಿರುತ್ತಿದ್ದೆ. [56]"ಹಸಿವು ಅಂದರೆ ಎಷ್ಟು ಅಂತೀಯ? ಇದಕ್ಕಿಂತ ಕ್ರೂರ ಶಿಕ್ಷೆ ಬೇರೆ ಇಲ್ಲ. ಆ ಮುದುಕ ಭೀಷ್ಮ ಸೈನ್ಯಬಲ ಸಂಪತ್ತಿನ ಬಲ ಎರಡನ್ನೂ ಮುಂದೆ ಮಾಡಿ ನನ್ನನ್ನು ಕೊಂಡು ತಂದು ಕೊನೆಗಾಣದ ಹಸಿವಿಗೆ ನೂಕಿ ಹೊರಗಿನಿಂದ ಬಾಗಿಲು ಮುಚ್ಚಿಕೊಂಡನಲ್ಲ" ಅವನಿಗೆ ರೌರವ ನರಕವಲ್ಲದೆ ಸದ್ಗತಿ ಸಾಧ್ಯವಿಲ್ಲ ಎಂದು ಶಪಿಸುತ್ತಾಳೆ. ಮಾದ್ರಿ ಮಹಾರಾಜ ಪಾಂಡುವಿನ ಮಗು ತನ್ನ ಗರ್ಭದಲ್ಲಿ ಹುಟ್ಟಬೇಕೆಂಬ ಆಸೆ ಹೊಂದಿದ್ದು, ಕುಂತಿ ಮೇಲೆ ಮತ್ಸರ ಮತ್ತು ಭಯವನ್ನು ಹೊಂದಿ, ಅವಳಿಗೆ ತಿಳಿಯದಂತೆ ಪಾಂಡುವಿನೊಡನೆ ಸಂಭೋಗದಲ್ಲಿ ತೊಡಗಿ, ಅವನು ಸತ್ತದ್ದರಿಂದ ದುಃಖಿತಳಾಗಿ ತನ್ನ ಮಕ್ಕಳನ್ನು ಕುಂತಿಗೆ ಒಪ್ಪಿಸಿ ತಾನು ಸಹಗಮನ ಮಾಡುತ್ತಾಳೆ. ಗಂಡನ ಸಾವಿಗೆ ತಾನೇ ಕಾರಣವಾದೆ ಎಂಬ ಲೋಕನಿಂದನೆಗೆ ಒಳಗಾಗಬೇಕೆಂಬ ಭಯದಲ್ಲಿ ಈ ನಿರ್ಧಾರವನ್ನು ತೆಗೆದುಕೊಂಡಿರಬಹುದು.

ದ್ರೌಪದಿ (ಕೃಷ್ಣೆ)

ಪಾಂಚಾಲ ದೇಶದ ದ್ರುಪದ ರಾಜನ ಮಗಳೇ ಈ ದ್ರೌಪದಿ. ಇವಳನ್ನು ಸ್ವಯಂವರದಲ್ಲಿ ಅರ್ಜುನನು ಗೆಲ್ಲುತ್ತಾನೆ. ಆದರೆ ಉಳಿದ ಪಾಂಡವರಿಗೂ ಸಹ ಇವಳ ಮೇಲೆ ಮೋಹ ಹುಟ್ಟಿ ಒಬ್ಬರಿಗೊಬ್ಬರು ಜಗಳ ಮಾಡುತ್ತಾರೆ. ಆಗ ಕುಂತಿ [57]"ನಿನ್ನನ್ನು ವಾಪಸ್ಸು ನಿನ್ನ ತಂದೆಗೆ ಒಪ್ಪಿಸಿ ಬಿಡ್ತೀನಿ ಜಗಳವನ್ನೇಕೆ ಸೊಸೆಯಾಗಿ ತಂದುಕೊಳ್ಳಲು ನಾನು" ಎಂದಳು. ನಂತರ ಯೋಚನೆ ಮಾಡಿ ತನ್ನ ಮಕ್ಕಳಲ್ಲಿ ಒಗ್ಗಟ್ಟು ತರಲೆಂದು [58]"ನನ್ನ ಐದು ಜನ ಮಕ್ಕಳನ್ನು ನೀನು ಒಟ್ಟಿಗೆ ಮದುವೆಯಾಗು ಐದು ಜನರು ವೀರ್ಯಸಂಪನ್ನರು ನಿನಗೆ ಸುಖದ ಸಮೃದ್ಧಿ ಇರಲಿ" ಎಂದು ಹೇಳಿ, ಪಾಂಡವರೊಡನೆ ವೈಭವದಿಂದ ದ್ರೌಪದಿಯ ಮದುವೆ ಮಾಡಿಸಿದಳು. ತವರು ಮನೆಯಲ್ಲಿ 'ಕೃಷ್ಣೆ'ಯಾಗಿದ್ದ ಇವಳು ಐವರ ಹೆಂಡತಿಯಾದುದ್ದರಿಂದ 'ದ್ರೌಪದಿ' ಎನಿಸಿಕೊಂಡಳು. ಇವಳು ಪಾಂಡವರಿಂದ 'ಪ್ರತಿವಿಂಧ್ಯ, ಶ್ರುತಸೋಮ, ಶ್ರುಕಕೀರ್ತಿ, ಶತಾನೀಕ ಶ್ರುತಸೇನ' ಎಂದು ಐದು ಮಕ್ಕಳನ್ನು ಪಡೆದಳು ಧರ್ಮರಾಜ ಜೂಜಿನಲ್ಲಿ ಸೋತಾಗ ತನ್ನ ಮಕ್ಕಳು ದಾಸಪುತ್ರರೆಂಬ ನಿಂದನೆಗೆ ಒಳಗಾಗದಂತೆ ಮಾಡಿ ಪಾಂಡವರನ್ನು ಶಸ್ತ್ರಾಸ್ತ್ರ ಸಹಿತವಾಗಿ ಬಿಡುಗಡೆಯಾಗುವಂತೆ, ಧೃತರಾಷ್ಟ್ರನ ಬಳಿ ವರಬೇಡಿದಳು. ದುಶ್ಯಾಸನನು ರಾಜಸಭೆಯಲ್ಲಿ ದ್ರೌಪದಿಗೆ ಅವಮಾನ ಮಾಡಿದಾಗ ಅವಳು 'ಧರ್ಮ ನನ್ನನ್ನು ಹೀಗೆ ಜೂಜಿನಲ್ಲಿಟ್ಟಿದ್ದು ಧರ್ಮವೇ?" ಎಂದು ಪ್ರಶ್ನಿಸಿ ಪಾಂಡವರನ್ನು ಬಿಡುಗಡೆ ಮಾಡಿಸಿದಳು.

56. ಪರ್ವ, ಪುಟ-93
57. ಪರ್ವ, ಪುಟ-165
58. ಪರ್ವ, ಪುಟ-167

ಕರ್ಣನ ಪ್ರೋತ್ಸಾಹದ ಮಾತಿನಿಂದ ದುಶ್ಯಾಸನನು ದ್ರೌಪದಿಯ ಸೆರೆಗನ್ನು ಎಳೆದಾಗ ಅವಳು ತನ್ನ ಅಣ್ಣ ಧೃಷ್ಯದುಮ್ಮನ .ಪಾಂಚಾಲರ ಸೈನ್ಯ. ಅಣ್ಣನಾದ ಕೃಷ್ಣನ ಸೈನ್ಯ ಬಂದು ಹಸ್ತಿನಾವತಿಯನ್ನು ಧೂಳಿಪಟ ಮಾಡುವುದೆಂದು ಹೇಳಿದಳು. ಈ ರೀತಿ ಧೈರ್ಯದಿಂದ ಮಾತನಾಡಿ ತನ್ನ ಮಾನವನ್ನು ಉಳಿಸಿಕೊಂಡು. ಗಂಡಂದಿರ ಬಿಡುಗಡೆಗೆ ಕಾರಣಳಾದಳು. ದ್ರೌಪದಿಯು ಅರಣ್ಯವಾಸ ಮತ್ತು ಅಜ್ಞಾತವಾಸವನ್ನು ಅನುಭವಿಸುತ್ತಿ ರುವಾಗ 'ಜಯದ್ರಥ' ಹಾಗೂ 'ಕೀಚಕ'ನಿಂದ ತೊಂದರೆಯನ್ನು ಅನುಭವಿಸಬೇಕಾಯಿತು. ಯುದ್ಧ ಆರಂಭವಾಗುವ ಸಮಯದಲ್ಲಿ ತನ್ನ ಮಗನಾದ ಪ್ರತಿವಿಂಧ್ಯ 'ಆರ್ಯಧರ್ಮ ಅಂದರೇನು'? ಎಂದು ಕೇಳಿದಕ್ಕೆ ದ್ರೌಪದಿ 'ಬೇಟೆ. ಕುಡಿತ. ಹೆಂಗಸಿನ ಗೀಳು. ಜೂಜ ಅಂತ' ಮನಸ್ಸಿನಲ್ಲೆ ನಗುತ್ತಾಳೆ. ಇಲ್ಲಿ ಆರ್ಯಧರ್ಮದವರಿಂದಾಗಿ ಅವಳು ಅನುಭವಿಸಿದ ಕಷ್ಟ ಅವಮಾನಗಳೆ ಈ ನಗುವಿಗೆ ಕಾರಣವಿರಬಹುದು.

ದ್ರೌಪದಿಯ ಮಕ್ಕಳಾದ 'ಉಪಪಾಂಡವ' ರನ್ನು ಅಶ್ವತ್ಥಾಮ ಹತ್ಯೆಗೈದು ನಂತರ. ಅವಳು ತನ್ನ ಐದು ಮಕ್ಕಳ ಶವಗಳನ್ನು ಒಂದೇ ತಬ್ಬಿನಲ್ಲಿ ಹಿಡಿದು ಅವುಗಳ ಮೇಲೆ ಕೈಚಾಚಿ ಮಲಗಿದಾಗ ಪುತ್ರಶೋಕದ ಪ್ರತಿಮೆಯಾದ ಅವಳನ್ನು ಸಂತೈಸುವವರಾರು? ಅವಳ ನೆಚ್ಚಿನ ಭೀಮನು ಮೌನವಾಗಿದ್ದ ಅವಳನ್ನು ಸಂತೈಸಬೇಕಾದ ಗಂಡಂದಿರು ಮೌನವಾಗಿದ್ದರು. ಅಭಿಮನ್ಯು ಸತ್ತಾಗ ಅರ್ಜುನ ಸುಭದ್ರೆಯನ್ನು ಸಂತೈಸಿದಂತೆ. ಘಟೋತ್ಕಚನ ಶವವನ್ನು ಹೊತ್ತು ತಂದು ಭೀಮ ಗೋಳಾಡಿದಂತೆ ಯಾರೂ ಗೋಳಾಡದೆ. ಐವರು ಗಂಡಂದಿರು ಮೌನವಾಗಿರುವುದೇಕೆ? ಎಂದು ಕೃಷ್ಣನೊಡನೆ ಹೇಳಿ ದ್ರೌಪದಿಯು ಗೋಳಾಡಿದಾಗ ಭೀಮ ಕುಪ್ಪಳಿಸಿ ಬಂದು ಕಣ್ಣೀರುಸುರಿಸಿದ ನಂತರ ಉಳಿದವರೂ ಹಿಂಬಾಲಿಸಿದರು. ಆದರೆ ರಾತ್ರಿ ಇಡೀ ಮಕ್ಕಳ ಶವಗಳ ಜೊತೆ ಒಂಟಿಯಾಗಿದ್ದ ದ್ರೌಪದಿ [59] "ಹೀನ ಅಶ್ವತ್ಥಾಮ ನನಗೆ ಪುತ್ರಶೋಕವನ್ನು ಕೊಟ್ಟ. ಸತ್ಯವನ್ನು ತೋರಿಸಿದ ಮಕ್ಕಳಿಗೆ ಅಗ್ನಿ ಸಂಸ್ಕಾರ ಮಾಡಬೇಕಾದವಳು ನಾನೇ". ಎಂದು ಗೋಳಾಡಿದಳು.

ದ್ರೌಪದಿಯು ಐದೈದು ಗಂಡಂದಿರಿಗೂ. ಬೊಗಸೆ ಬೊಗಸೆ ಮೊಗೆ ಮೊಗೆದು. ಕಾಮ-ಪ್ರೇಮ-ರಕ್ಷಿತ ಭಾವಗಳನ್ನು ಕೊಟ್ಟು ಪುತ್ರಶೋಕದಿಂದ ತನ್ನ ಅಕ್ಷಯಪಾತ್ರೆ. ಹೃದಯವನ್ನು ಬರಿದು ಮಾಡಿಕೊಂಡು. ಶೂನ್ಯಳಾಗಿ ನಿಂತಿರುವ ಈ ಹೆಣ್ಣೇ ಪಾಂಚಾಲಿಯೇ? ಇದೇ ಸ್ತ್ರೀಯ ಶಾಶ್ವತ ರೂಪವೇನು ಎನಿಸಿಬಿಡುತ್ತದೆ. ಅಥವಾ ಸ್ತ್ರೀಯಲ್ಲಿ ಸಹಜವಾಗಿ ಶೀಘ್ರವಾಗಿ ಹೊರ ಹೊಮ್ಮುವ ಸಂತೈಸುವ. ಸಾಂತ್ವನಗೊಳಿಸುವ ಭಾವಗಳು ಪುರುಷರಲ್ಲಿ ಅಷ್ಟೇ ಸ್ಫುಟವಾಗಿ. ಶೀಘ್ರವಾಗಿ ಪುಟಿಯುವುದಿಲ್ಲವೆ? ಎಂತಹ ದುಃಖದ ಸಂದರ್ಭದಲ್ಲಿಯೂ ನಿರ್ಧಾರ ಕೈಗೊಳ್ಳುವ ಮನೋಬಲಕ್ಕೆ ಕುಂದುಬರುವುದಿಲ್ಲ. ದ್ರೌಪದಿಯ ಪಾತ್ರದಲ್ಲಿ ಕುಂತಿ ಮತ್ತು ದ್ರೌಪದಿಯ ಪಾತ್ರಗಳು ಎಲ್ಲಾ ಯುಗಗಳ ಸ್ತ್ರೀ ಸತ್ವ ಮತ್ತು ಸ್ತ್ರೀ ಪ್ರಜ್ಞೆಯ ಪ್ರತೀಕವಾಗುತ್ತವೆ.

59. ಯುಗಸಾಕ್ಷಿ, ಪುಟ-240

ಒಟ್ಟಿನಲ್ಲಿ ಪರ್ವದ ಹೆಂಗಸರು ಪೂರ್ತಿ ಹೆಣ್ತನ ತುಂಬಿಕೊಂಡು ನಿಂತರೆ. ಗಂಡಸರು ಪೂರ್ತಿ ಗಂಡಸರಾಗದೆ ನರಳುತ್ತಾರೆ. ಕುಂತಿ ಮತ್ತು ದ್ರೌಪದಿಯರಿಬ್ಬರು ಬಹುಪತಿತ್ವದ ಜೀವನ ಕೇಂದ್ರದಲ್ಲಿದ್ದು ಒಬ್ಬನ ಬಗ್ಗೆ ಮೋಹವನ್ನು ಬೆಳಸಿಕೊಂಡವರು. ಆದರೆ ಯಾರ ಪ್ರೀತಿಯನ್ನು ಇಡಿಯಾಗಿ ಪಡೆಯಲಾರದೆ ಹೋದರು. ಪರ್ವದಲ್ಲಿ ಅತಿಭೋಗದಿಂದ ಗಂಡಸುತನವನ್ನು ಕಳೆದುಕೊಂಡ ಪಾಂಡು . ಕುರುಡು ಮುದುಕನಾದರೂ ದಾಸಿಯ ಮೈ ತಡಕುವ ಧೃತರಾಷ್ಟ್ರ . ಗಂಧರ್ವರ ಐದು ಹೆಣ್ಣುಗಳನ್ನು ಒಟ್ಟಿಗೆ ಅನುಭವಿಸಿ ನಿರ್ವೀಯವಾದ ಅರ್ಜುನ. ದ್ರೌಪದಿಯ ಅವಮಾನ ತಡೆಯಲಾಗದ ಪಾಂಡವರು. ಇವರೆಲ್ಲರೂ ತಮ್ಮ ಹೆಂಡತಿಯರಿಗೆ ಮಾತ್ರ ನಿರ್ಮೀಯರಾಗದೆ. ಪರ್ವ ಓದಿದ ನಮಗೂ ಅವರು ನಿರ್ವೀರ್ಯರಾಗಿಯೇ ಕಾಣುತ್ತಾರೆ.[60] "ಪರ್ವ: ಒಂದು ಅಭಿಪ್ರಾಯ ಎಂಬ ಲೇಖನದಲ್ಲಿ 'ಹೇಮಲತಾ ಮಹಿಷಿ' ರವರು ಪರ್ವದ ಪಾತ್ರಚಿತ್ರಣದ ಬಗ್ಗೆ ವಿಮರ್ಶಿಸುತ್ತಾ: "ಪರ್ವದ ಎಲ್ಲಾ ಪಾತ್ರಗಳೂ ಪೋಷಣೆ

ಇಲ್ಲದೆ ಸೊರಗಿವೆ. ಯಾವ ಪಾತ್ರಗಳೂ ಮೇಲೆದ್ದು ಕಾಣುವುದಿಲ್ಲ". ಪಾತ್ರಗಳಿಗೆ ಆರೋಪಿತವಾಗಿರುವ ದೈವಾಂಶಗಳನ್ನು ತೆಗೆದು ಹಾಕುವ ಗಡಿಬಿಡಿಯಲ್ಲಿ ಅವು ತೀರಾ ಕೆಳಮಟ್ಟದ ಮಾನವರಾಗಿ ಚಿತ್ರಿತವಾಗಿವೆ. ಹಾಗೆ ನೋಡಿದರೆ ಮಹಾಭಾರತದಲ್ಲಿ ಬರುವ ಯಾವ ವ್ಯಕ್ತಿಗಳೂ ದೈವಾಂಶ ಸಂಭೂತರಲ್ಲ. ಎಲ್ಲರೂ ಸಾಮಾನ್ಯ ಮಾನವರು. ಎಲ್ಲರಲ್ಲಿಯೂ ಮಾನವ ಸಹಜ ಗುಣ ದೋಷಗಳಿವೆ. ಆದರೆ ಆ ದೋಷಗಳು ಅವರನ್ನು ನೆಲದ ಮಟ್ಟದಲ್ಲಿಯೇ ಉಳಿಯಲು ಬಿಟ್ಟಿಲ್ಲ. ಅವರಲ್ಲಿಯೂ ವಿಶಿಷ್ಟತೆ ಇದೆ. ತಮ್ಮ ತಮ್ಮ ವಿಶಿಷ್ಟತೆಯಿಂದಾಗಿ ಆ ವ್ಯಕ್ತಿಗಳು ಶಕ್ತಿಶಾಲಿ ಪಾತ್ರಗಳಾಗಿ ನಮ್ಮ ಕಣ್ಣ ಮುಂದೆ ನಿಲ್ಲುತ್ತಾರೆ. ಆದರೆ. 'ಪರ್ವ'ದಲ್ಲಿ ಆ ಎಲ್ಲಾ ಪಾತ್ರಗಳೂ ಅತ್ಯಂತ ದುರ್ಬಲ ವ್ಯಕ್ತಿಗಳು ಸಪ್ಪೆ. ನೀರಸ ವ್ಯಕ್ತಿತ್ವಗಳು. ಕೃಪಾಚಾರ್ಯ. ವಿದುರರಂತೂ ಅತ್ಯಂತ ದುರ್ಬಲರಾಗಿ ಚಿತ್ರಿತರಾಗಿದ್ದಾರೆ. ಕೃಷ್ಣನಿಗೂ ಒಂದು ನಿರ್ದಿಷ್ಟ ವ್ಯಕ್ತಿತ್ವವಿಲ್ಲ. ನಿರ್ವೀರ್ಯ ಪತಿಯೊಂದಿಗೆ ಸಹಬಾಳ್ವೆ ಮಾಡಬೇಕಾಗಿ ಬಂದ ಕುಂತಿ–ಮಾದ್ರಿಯರು. ಐವರು ಪತಿಯರಿದ್ದು ಕೊನೆಯಲ್ಲಿ. ಐವರು ಮಕ್ಕಳನ್ನು ಕಳೆದುಕೊಂಡ ಸಂದರ್ಭದಲ್ಲಿ ತನ್ನ ದುಃಖದಲ್ಲಿ ಏಕಾಂಗಿಯಾಗುಳಿಯುವ ದ್ರೌಪದಿ ಕೆಲವು ಉತ್ತಮ ಚಿತ್ರಣಗಳು ಆದರೂ. ಆ ಪಾತ್ರಗಳೂ ನಿರೀಕ್ಷಿಸಿದಷ್ಟು ತೀವ್ರತೆಯಿಂದ ನಮ್ಮ ಭಾವನೆಗಳನ್ನು ಕಲಕುವುದಿಲ್ಲ. ಇದಕ್ಕೆ ಬಹುಮಟ್ಟಿಗೆ ಸೂಚ್ಯವಾಗಿರಬೇಕಾದ್ದೆಲ್ಲ ವಾಚ್ಯವಾಗಿರುವುದೇ ಕಾರಣ. ಮುಖ್ಯವಾದ ಪಾತ್ರಗಳು ಲೈಂಗಿಕ ಅತೃಪ್ತಿಯಿಂದ ಅಥವಾ ದೌರ್ಬಲ್ಯದಿಂದ ಕೂಡಿರುವುದು ಒಂದು ವಿಶೇಷ. ಒಟ್ಟಿನಲ್ಲಿ 'ಪರ್ವ' ಅಲ್ಲಲ್ಲಿ ರಂಜನೀಯವಾಗಿದ್ದರೂ ಎಲ್ಲಾ ಪಾತ್ರಗಳನ್ನು. ವಿವರಗಳನ್ನು. ಕಥಾವಸ್ತುವನ್ನು ಒಂದುಗೂಡಿಸುವ ಒಂದು ಸಾಮಾನ್ಯ ಸೂತ್ರವಿಲ್ಲದೇ ಅದು ನಿರೀಕ್ಷಿಸಿದಷ್ಟು ಪರಿಣಾಮಕಾರಿಯಾಗಿಲ್ಲವೆಂದು ಹೇಳಿದ್ದಾರೆ.

60. ಪರ್ವ–ಒಂದು ಸಮೀಕ್ಷೆ, ಪುಟ–56, 57

ಅಧ್ಯಾಯ-4

ಶೈಲಿ

ವ್ಯಾಸ ಮಹಾಭಾರತದ ಹತ್ತು-ಹನ್ನೊಂದು ಪರ್ವಗಳ ಕಥೆಯನ್ನು ಅದರ ಕಥಾನಕ ಸಮೇತವಾಗಿ ಭೈರಪ್ಪನವರ ಪರ್ವವು ಒಳಗೊಳ್ಳುತ್ತದೆ. ಅತ್ಯಾಧುನಿಕ ರೀತಿಯಲ್ಲಿ ಅಂದರೆ ಸಮಾಜ ವಿಜ್ಞಾನದ ನಿಲುವಿನಿಂದ ವಿಶ್ಲೇಷಿಸುತ್ತದೆ. ಕಾದಂಬರಿಯು ಗದ್ಯ ರೂಪದಲ್ಲಿ ರಚಿತವಾಗಿದೆ. ಇದರಿಂದ ನಮ್ಮ ಮನಸ್ಸಿನಲ್ಲಿ ಕನ್ನಡವು ಹೊರಳಬಲ್ಲ ಪಲುಕುಗಳನ್ನೆಲ್ಲಾ ಒಳಗೊಳ್ಳಲು ಅನುಕೂಲವಾಗಿದೆ. ವಿಚಾರಕ್ಕೂ ಭಾವನೆಗಳಿಗೂ ಯಾವ ಅಂತರವೂ ಇಲ್ಲವೆನ್ನುವಂತೆ ಕಥಾಶೈಲಿಗೂ, ವಿಚಾರವಂತಿಕೆಗೂ ಯಾವುದೇ ವ್ಯತ್ಯಾಸವಿಲ್ಲವೆನ್ನುವಂತೆ ಈ ಕೃತಿ ರಚನೆಯನ್ನು ಸಾಧಿಸಲು ಅನುಕೂಲವಾಗಿದೆ. ಮಾನವ ಸ್ವಭಾವದ ವೈವಿಧ್ಯವನ್ನೆಲ್ಲಾ ಇಲ್ಲಿ ವಿವರಿಸುವುದಲ್ಲದೆ ಬದುಕಿನ ಬಗ್ಗೆ ಮಾನವನಿಗಿರುವ ಆಂತಕ ಆಸಕ್ತಿಗಳನ್ನು ಬೆಳಕಿಗೊಡ್ಡಲು ಈ ಮಹಾಕೃತಿಯು ಪ್ರಯತ್ನಿಸಿ ಯಶಸ್ವಿಯಾಗಿದೆ. ಇದನು ಕನ್ನಡ [1] "War and Peace" ಎನ್ನುವಂತೆ ಗದ್ಯದ ಮಹಾಕಾವ್ಯವೆಂದು ಹೇಳುವಂತೆ ಈ ಕಾದಂಬರಿಯು ಮನಸೆಳೆಯುತ್ತದೆ.

ಪರ್ವಕ್ಕಿಂತ ಪುಟ ಸಂಖ್ಯೆಯಲ್ಲಿ ದೊಡ್ಡದಾದ ಕಾದಂಬರಿಗಳು ಈಗಾಗಲೇ ಪ್ರಕಟವಾಗಿವೆ. ಆದರೆ, ಅವುಗಳು ಯಾವುವು ಈ ಪ್ರಮಾಣದಲ್ಲಿ ನಮ್ಮ ಜೀವನದ ಸಂಕೀರ್ಣತೆಯನ್ನು ಒಳಗೊಳ್ಳುವುದಿಲ್ಲ. ಈ ಕೃತಿಯಲ್ಲಿ ಮಾತ್ರ ಮಾನವರ ಎಲ್ಲಾ ಬಗೆಯ ಆವೇಶಗಳೂ ಹುಟ್ಟಿನಿಂದ ಸಾವಿನವರೆವಿಗೂ ಅದರಾಚೆಗೂ ಚಾಚಿಕೊಂಡಂತೆ, ಸೋಲು-ಗೆಲುವುಗಳ ಸೆಣಸಾಟದಲ್ಲಿ ಸಹಜವಾಗಿ ರೂಪ ತಾಳುತ್ತವೆ. ಈ ಕಾವ್ಯದ ವಸ್ತುವೇ ಅಷ್ಟು ಅನುಕೂಲವಾದುದೆಂಬುದನ್ನು ಮರೆಯುವಂತಿಲ್ಲ. 'ಪರ್ವ'ದಲ್ಲಿ ಬದುಕಿನ ಅರ್ಥವೇನು? ಇವುಗಳೆನ್ನೆಲ್ಲಾ ನಮ್ಮನ್ನು ಯಾವ ಯಾವ ನೀತಿ ನಿಯಮಗಳ ಅಥವಾ ಧರ್ಮದ ಒಪ್ಪಂದಕ್ಕೆ ಒಳಪಡಿಸುತ್ತವೆ?..... ಇತ್ಯಾದಿ ಒಂದು ದರ್ಶನದ ಮಾಲೆಯನ್ನು ಪರಿಶೀಲಿಸುವಂತ ಶೈಲಿಯಾಗಿದೆ.

'ಪರ್ವ' [2]"ಕಾದಂಬರಿಯ ಬಹುಮಟ್ಟಿನ ವಸ್ತು ಬಿಚ್ಚಿಕೊಳ್ಳುವುದು 'ಸ್ಮರಣಾ ತಂತ್ರ'ದ ಮೂಲಕ. ವಸ್ತು ಕೇವಲ ಪಾಂಡವ ಕೌರವರ ಯುದ್ಧಕ್ಕೆ ಮಾತ್ರ ಸೀಮಿತವಾಗದೆ, ಆ ಕಾಲದ ಭಾರತದಲ್ಲಿ ಇದ್ದಿರಬಹುದಾದ ಜಾತಿ, ಧರ್ಮ ಸಮಾಜ ಕುಟುಂಬ ವ್ಯವಸ್ಥೆಗಳನ್ನು ಮತ್ತು ಅವುಗಳಲ್ಲಿ ಆಗುತ್ತಿದ್ದ ಪರಿವರ್ತನೆಗಳನ್ನು ಕುರಿತದ್ದಾಗಿದೆ". ಮಹಾಭಾರತದಲ್ಲಿ ಅಷ್ಟೇನೂ ಪ್ರಮುಖವಲ್ಲದ ಪಾತ್ರಗಳು ಕೂಡ ಸ್ಮರಣ ತಂತ್ರದ ಮೂಲಕ ಆ ಕಾಲದ ಸಾಮಾಜಿಕ, ರಾಜಕೀಯ ಸ್ಥಿತಿಗಳನ್ನು ಸ್ಥಿತ್ಯಂತರಗಳನ್ನು ದರ್ಶಿಸುತ್ತಾ ಹೋಗುತ್ತದೆ. ಪರ್ವದಲ್ಲಿ ಪ್ರತಿಯೊಂದು ಪಾತ್ರವೂ ತನ್ನ ನಡವಳಿಕೆಗೆ ತಾನೇ

1. ಪರ್ವ-ಒಂದು ಸಮೀಕ್ಷೆ, ಪುಟ-12
2. ಪರ್ವ-ಒಂದು ಸಮೀಕ್ಷೆ, ಪುಟ-20

ಜವಾಬ್ದಾರಿಯಾಗುತ್ತದೆ. ಕಾದಂಬರಿಯ ಸ್ಮರಣಾತಂತ್ರವು ಶಲ್ಯ, ಕುಂತಿ, ಭೀಮ, ದ್ರೌಪದಿ, ಅರ್ಜುನ, ಯುಯುಧಾನರ ಮೂಲಕ ಅತ್ಯಂತ ಕಲಾತ್ಮಕವಾಗಿ ಕೆಲಸ ಮಾಡಿದೆ. ಕೊನೆಕೊನೆಗೆ ಸ್ಮರಣಾತಂತ್ರದ ಬಳಕೆ ಅಸಾಧ್ಯವಾಗಿ, ನಿರೂಪಣೆಯ ಮಾರ್ಗ ಹಿಡಿದ ಭೈರಪ್ಪನವರು ಪರ್ವದ ಕೊನೆಯ ಭಾಗವನ್ನು 'ಪ್ರಜ್ಞಾ ಪ್ರವಾಹ ತಂತ್ರ'ದ ಮೂಲಕ ನಿರ್ವಹಿಸಿದ್ದಾರೆ. ಕಾದಂಬರಿಯ ಕೊನೆಯ ಭಾಗದಲ್ಲಿ ಭಾಷೆಯ ಓಟ, ಗದ್ಯ ಪಡೆಯುವ ವಿಚಿತ್ರ ವಿನ್ಯಾಸಗಳು, ನೆರಳು ಬೆಳಕಿನಾಟವನ್ನು ಮೂಡಿಸುವ ಪ್ರತಿಮೆಗಳ ಮೆರವಣಿಗೆ ಎಲ್ಲರಿಗೂ ಸಾಮಾನ್ಯವಾಗಿರುವ ಹಿರಿಗೆಯಂಥ ಆಂತಕ ಉಂಟು ಮಾಡುವ ಮಾನವೀಯ ಸನ್ನಿವೇಶ ಇವೆಲ್ಲವು ಓದುಗ ಉಸಿರು ಬಿಗಿಹಿಡಿಯುವಂತೆ ಮಾಡುತ್ತವೆ.

ಪರ್ವ ಕಾದಂಬರಿಯ ಉದ್ದಕ್ಕೂ ವಿಶಿಷ್ಟವಾದ ಶೈಲಿಯೊಂದನ್ನು ಭೈರಪ್ಪ ಸೃಷ್ಟಿಸಿದ್ದಾರೆ. ಅವರ ವಾಕ್ಯಗಳು ಭೂತ ವರ್ತಮಾನಗಳ ಸಂಯುಕ್ತವಾಗಿದ್ದು, ಅಪೂರ್ಣವಾಗಿ ನಿಂತು ನಿಂತು ನಡೆಯುವಾಗ ಪಾತ್ರಗಳ ಪ್ರಜ್ಞೆಯ ದಾರಿಯಲ್ಲೇ ಸಹಜವಾಗಿ ಸಾಗಿದ ಅನುಭವವಾಗುತ್ತದೆ. (3)"ಭೈರಪ್ಪನವರು ಪರ್ವದ ರಚನೆಯಲ್ಲಿ ಅನುಸರಿಸಲಾದ ತಂತ್ರವೇ ಬೇರೆ. ಇಲ್ಲಿ ಕಥನಕಾರನೇ ಕಥೆಯನ್ನು ನಿರೂಪಿಸುವ ಬಗೆಯಿಂದ ಹೊರಬಂದು, ಪಾತ್ರಗಳೇ ಕಥನವನ್ನು ನಿರ್ವಹಿಸುವ ಬಗೆಗೆ ಪರ್ವದ ದಾಟಿ ಬಂದಿದೆ". ಇದರಿಂದ ಆದ ಮುಖ್ಯ ವ್ಯತ್ಯಾಸವನ್ನು ಹೀಗೆ ಹೇಳಬಹುದು. ಪಾರಂಪರಿಕ ಭಾರತ ಕೃತಿಗಳ ನಿರೂಪಣೆ ಮಹಾಕಾವ್ಯದ ಶೈಲಿಯದು. ಪರ್ವ ಈ ಬಗೆಯಿಂದ ನಾಟಕೀಯ ಹಾಗೂ ಭಾವಗೀತಾತ್ಮಕ ಶೈಲಿಗಳಿಗೆ ರವಾನೆಯಾಗಿದೆ. ಇದು ಕಾದಂಬರಿಕಾರರ ಎಚ್ಚರದ ಆಯ್ಕೆಯಾಗಿದ್ದು, ಪಾತ್ರಗಳ ನೆನಪಿನಲ್ಲಿ ಆಗಿ ಹೋದ ಸಂಗತಿಗಳ ಪುನರಭಿನಯವಾಗುವಾಗ ಕಾಲದ ದೃಷ್ಟಿಯಿಂದ ಹಿಂದಕ್ಕೆ ಓಡುತ್ತದೆ. ಇದರಿಂದಾಗಿ ವರ್ತಮಾನ ಮತ್ತು ಭೂತಕಾಲಗಳ ನಡುವಣ ನಾಟಕೀಯ ಸಂಘರ್ಷವೇ ಮುಖ್ಯವಾಗಿ ಬಿಡುವುದು. ಇಡೀ ಕಾದಂಬರಿ (ಕೊನೆಯ ಭಾಗ ಬಿಟ್ಟು) ನಡೆಯುವುದೇ ಯುದ್ಧ ಕಥೆಯ ಸ್ಫೋಟಕ ಹಂತದಲ್ಲಿ ಹಾಗೂ ಯುದ್ಧ ಸನ್ನದ್ಧ ಸ್ಥಿತಿಯಲ್ಲಿ ತಾನು ತಲುಪಿರುವ ಹಂತವನ್ನು ನಡೆದು ಬಂದ ದಾರಿಯನ್ನು ಪಾತ್ರಗಳು ಅವಲೋಕಿಸಿಕೊಳ್ಳುತ್ತವೆ. ವರ್ತಮಾನದ ಯುದ್ಧ ಸನ್ನದ್ಧ ಸ್ಥಿತಿಗೂ ಭೂತಕಾಲದ ಸಿದ್ಧತಾ ಕ್ರಮಕ್ಕೂ ಮುಖಾಮುಖಿಯಾಗಿದೆ. ಇದಲ್ಲದೇ ಪಾತ್ರಗಳ ಅಂತರಂಗ ಪರಿವೀಕ್ಷಣೆ ಕೇವಲ ಕಥನ ಕ್ರಮ ನಿರ್ವಹಣೆಗೆ ಮಾತ್ರವಾಗದೇ, ಆಯಾ ಪಾತ್ರಗಳ ಸ್ವ-ವಿಮರ್ಶೆಗೂ ಬಳಕೆಯಾಗಿದೆ. ಇದರಿಂದ ಅವಲಂಬಿತ ಕಥನ ಕ್ರಮಕ್ಕೆ ಭಾವಗೀತಾತ್ಮಕ ನೆಲೆಯು ಒದಗುತ್ತದೆ. ಪಾತ್ರ ತನ್ನೊಡನೆ ತಾನೇ ಒಂದು ನಾಟಕವನ್ನು ನಿರ್ಮಿಸಿಕೊಳ್ಳುವುದು ಚಿಂತನೆಯ ನೆಲೆಯನ್ನು ಹೊಂದುವಂತೆ ರಚಿತವಾಗಿದೆ. (4)"ಕಾದಂಬರಿಯ ಉಳಿದೆಲ್ಲ ಪಾತ್ರಗಳಂತೆ ಕೃಷ್ಣನ ಪಾತ್ರ ಸ್ವತಂತ್ರವಾಗಿ ಆಲೋಚಿಸುವಂತಹ ಸನ್ನಿವೇಶವನ್ನು ಲೇಖಕರು ಸೃಷ್ಟಿಸಿಯೇ ಇಲ್ಲ. ಕೃಷ್ಣನ ಪಾತ್ರ ರಚನೆ ಒಂದು ಯಶಸ್ವಿ ತಂತ್ರವಿನ್ಯಾಸವನ್ನು ಹೊಂದಿದೆ."

3. ಪರ್ವ-ಒಂದು ಸಮೀಕ್ಷೆ, ಪುಟ-31
4. ಯುಗಸಾಕ್ಷಿ, ಪುಟ-245

[5]"ಪರ್ವ ಯಾವ ಕಥೆಯನ್ನು ಹೇಳುವುದಿಲ್ಲ ಅಥವಾ ಕಾಲಕ್ರಮಾನುಗತಿಯಲ್ಲಿ ಘಟನೆಗಳನ್ನು ನಿರೂಪಿಸುವುದೂ ಇಲ್ಲ. ಎಷ್ಟೋ ಘಟನೆಗಳು ನಾಟಕದ ತಂತ್ರ ವಿನ್ಯಾಸದಿಂದ ರಚಿಸಲ್ಪಟ್ಟು, ನಾಟಕದ ದೃಶ್ಯಗಳಂತೆ, 'ಪರ್ವ' ಎಂಬ ರಂಗದ ಮೇಲೆ ಬಂದು, ಹಿನ್ನೋಟಗಳ ಮೂಲಕ, ಸ್ವಗತಗಳ ಮೂಲಕ ಮೂಕಾಭಿನಯವೆಂಬಂತೆ ಚಿತ್ರಿಸಲ್ಪಟ್ಟಿವೆ". ಪ್ರತಿ ಪಾತ್ರದ ಮನಸ್ಸಿನಲ್ಲಿಯೂ ಭೂತ ಮತ್ತು ವರ್ತಮಾನದ ಘಟನೆಗಳ ಎಳೆಗಳು ಹೊಸೆದುಕೊಂಡಿದ್ದರೂ ಒಂದಿಷ್ಟು ಗೋಜಲಾಗದೇ ಉಳಿದಿವೆ. ಮದ್ರರಾಜ ಶಲ್ಯನ ಚಿಂತನೆಗಳಿಂದ ಪ್ರಾರಂಭವಾಗುವ ಕಥಾನಕ, ಮೊದಲಲ್ಲಿಯೇ ತನ್ನ ಮುಖ್ಯ ಆಶಯವಾದ ಹುಟ್ಟು, ಹುಟ್ಟಿನ ಬಗೆಗಿನ ಕಲ್ಪನೆಗಳು, ಕ್ಷತ್ರಿಯರಾಜರ ಜೂಜಿನ ಹವ್ಯಾಸ, ಮುಂದೆ ನಡೆಯಲಿರುವ ಕೌರವ ಪಾಂಡವರ ನಡುವಿನ ಯುದ್ಧ, ಪಾಂಡವರ ಜನನದ ಬಗೆಗಿದ್ದ ದುರ್ಯೋಧನನ ತಿರಸ್ಕಾರ ಎಲ್ಲವನ್ನೂ ಸಮರ್ಥವಾಗಿ ನಿರೂಪಿಸುತ್ತದೆ. ಎಲ್ಲಾ ಪಾತ್ರಗಳು, ಸ್ವಗತಗಳ ಮೂಲಕ, ಹಿನ್ನೋಟಗಳ ಮೂಲಕ, ನೆನಪಿನ ಹಗ್ಗ ಹಿಡಿದು ಭೂತ ಮತ್ತು ವರ್ತಮಾನಗಳ ನಡುವೆ ಜೀಕುಯ್ಯಾಲೆಯಾಡುತ್ತಾ ತಮ್ಮ ಮತ್ತು ತಮಗೆ ಸಂಬಂಧಿಸಿದವರ ಜೀವನದ ಆಗುಹೋಗುಗಳನ್ನು ತೆರೆದಿಡುತ್ತವೆ. ಈ ತೆರೆದಿಡುವಿಕೆಯಲ್ಲಿ ಲೇಖಕರು ಒಂದೊಂದು ಪಾತ್ರಗಳ ಅಂತರಂಗ ಬಹಿರಂಗಗಳನ್ನು ಬಿಚ್ಚಿಡುತ್ತಾ, ಒಂದೊಂದು ಪಾತ್ರವು ಎದುರಿಸಬೇಕಾಗಿದ್ದ ವಿಚಿತ್ರ ಸಮಸ್ಯೆಗಳ ಸುಳಿವನ್ನು ಕಣ್ಣೆದುರು ಸುತ್ತಿಸುತ್ತಾ, ಓದುಗರನ್ನು ಸಹ ಭೂತ ಮತ್ತು ವರ್ತಮಾನಗಳಲ್ಲಿಯೂ ಉಯ್ಯಾಲೆಯಾಡಿಸುತ್ತವೆ. ಪಾತ್ರಗಳ ಜಾಗೃತ, ಸ್ವಪ್ನ, ಸುಪ್ತಿ, ಸುಷುಪ್ತಿಯ ಎಲ್ಲಾ ಅವಸ್ಥೆಗಳೂ ನಮ್ಮ ಮುಂದೆ ಚಿತ್ರಪಟದಂತೆ ತೆರೆದುಕೊಂಡು ದಿಗ್ಭ್ರಮೆ ಮೂಡಿಸುತ್ತದೆ.

ಯಾವುದೇ ಪುಟದಿಂದ ಆರಂಭಿಸಿದರೂ ಇದೇ ಆರಂಭವೇನೋ ಎನಿಸುವ ಅನುಭವ ಕೊಡುವಂತಹ ಆದಿ-ಮಧ್ಯ-ಅಂತ್ಯ ಗಳೆಂದು ವಿಭಜಿಸಲಾರದ ಅಪೂರ್ವ ಬಂದ ಮತ್ತು ವಿನ್ಯಾಸಗಳು ಪರ್ವದಲ್ಲಿ ಅಳವಡಿಸಲ್ಪಟ್ಟಿವೆ. 'ಪರ್ವ' ದಲ್ಲಿ ಭಾಷಾ ಪ್ರಯೋಗ ಸಾಮಾನ್ಯ ಜನರ ದೈನಂದಿನ ಜೀವನಕ್ಕೆ ಅತ್ಯಂತ ನಿಕಟವಾಗಿರುವುದರಿಂದ ನೇರ ಮತ್ತು ಸಹಜವಾಗಿದೆ. ಹಾಗಾಗಿ ಭಾಷೆ ಇಲ್ಲಿ ತನ್ನ ಮಡಿವಂತಿಕೆಯನ್ನು ಕೃತಕತೆಯನ್ನು ಕಳಚಿಕೊಳ್ಳುತ್ತದೆ. ಅಲ್ಲದೆ ಆಯಾಪಾತ್ರಗಳ ಆಲೋಚನಾ ಲಹರಿಗಳನ್ನು, ಆಪಾತ್ರಗಳ ಪರಿಸರ ಮನೋಭಾವಕ್ಕನುಗುಣವಾಗಿ ಅಭಿವ್ಯಕ್ತಿಸುತ್ತದೆ. [6]"ಲೇಖಕರ ಭಾಷಾ ಶೈಲಿಯೂ ವಿಶಿಷ್ಟವಾಗಿದ್ದು, ಮೇಲಾಗಿ ಅನಾವಶ್ಯಕವಾದ ಸಂಗತಿ, ಪದ ಪ್ರೌಢಿಮೆ, ಸುತ್ತು ಬಳಸಿದ ಹೇಳಿಕೆಗಳು, ಪುನರಾವರ್ತನೆಗಳು, ಅಸ್ಪಷ್ಟತೆಗಳು ಅವರ ಭಾಷೆಯಲ್ಲಿ ಎಲ್ಲಿಯೂ ಇಣುಕುವುದಿಲ್ಲ". ಹೀಗಾಗಿ ಅವರ ಭಾಷೆಯೂ ಅವರ ಜನಪ್ರಿಯತೆಗೆ ಕಾರಣವಾಗಿರುವ ಸಂಗತಿಗಳಲ್ಲಿ ಒಂದಾಗಿದೆ.

5. ಯುಗಸಾಕ್ಷಿ, ಪುಟ-220
6. ಭೈರಪ್ಪಾಭಿನಂದನಾ, ಪುಟ-19

ಹಿಂದಿ ಲೇಖಕ 'ಕಮಲೇಶ್ವರ್' ರವರು 'ಪರ್ವ' ಬಗ್ಗೆ ಹೇಳುತ್ತಾ [7]"ನನ್ನ ನಿಶ್ಚಿತಾಭಿಪ್ರಾಯದಲ್ಲಿ ಪರ್ವ ಒಂದು ಆಧುನಿಕ ಬೃಹತ್ ಕಾವ್ಯ. ನಾನೇ ಇದರ ಲೇಖಕನಾಗಿದ್ದರೆ ಎಂಬ ಆಸೆ ನನ್ನನ್ನು ಭಾದಿಸುತ್ತಿದೆ......... ಕಾಲವನ್ನು ಮೀರಿ ನಿಲ್ಲುವ ವಸ್ತುವಷ್ಟೇ ಅಲ್ಲದೆ, ಈ ಕೃತಿಯ ರಚನಾ ವಿಧಾನವು ಅದ್ಭುತವಾಗಿದೆ". ಇದಲ್ಲದೆ, ಇದರ ಬಗ್ಗೆ ಹೇಳಬಹುದಾದದ್ದು ಇನ್ನೂ ಬಹಳಷ್ಟಿದೆ ಎಂಬ ಪ್ರಶಂಸೆಯನ್ನು ವ್ಯಕ್ತಪಡಿಸಿದ್ದಾರೆ.

'ಹೇಮಲತಾ ಮಹಿಷಿ' ರವರು ಪರ್ವ: ಒಂದು ಅಭಿಪ್ರಾಯ ಎಂಬ ಲೇಖನದಲ್ಲಿ ಕಾದಂಬರಿಯ ಶೈಲಿಯ ಬಗ್ಗೆ ವಿಮರ್ಶೆ ಮಾಡಿದ್ದಾರೆ. [8]"ಭಾಷೆ ಶೈಲಿಯ ಬಗ್ಗೆ ಒಂದುಮಾತು, ಹೊಸ ರೀತಿ ಎಂದೋ, ಪುಟಗಳನ್ನು ಕಡಿಮೆ ಮಾಡಲೆಂದೋ ಅನೇಕ ಅಪೂರ್ಣ ವಾಕ್ಯಗಳು ಉದ್ದಕ್ಕೂ ಬರುತ್ತವೆ. ಪಾತ್ರಗಳು ಉದ್ವೇಗದಿಂದ, ಆವೇಗದಿಂದ ಕೂಡಿರುವಾಗ ಇಂತಹ ವಾಕ್ಯ ಪ್ರಯೋಗ ಸಂದರ್ಭೋಚಿತ ಎನಿಸಿದರೂ ಉಳಿದಂತೆ ಹೊಂದುವುದಿಲ್ಲವೆನ್ನಿಸುತ್ತದೆ". ಕೆಲವು ಕಡೆಗಳಲ್ಲಿ ಕಥೆಯ ಪೋಷಣೆಗಾಗಲೀ ಪಾತ್ರ ಚಿತ್ರಣಕ್ಕಾಗಲೀ ಅವಶ್ಯಕವಿಲ್ಲದ ಅನೇಕ ವಿವರಗಳು, ಪುನರುಕ್ತಿ ಸೇರಿಕೊಂಡು ಪುಟಗಳ ಸಂಖ್ಯೆಯನ್ನು ಹೆಚ್ಚಿಸಿವೆ. ಪುಸ್ತಕದ ಗಾತ್ರ ಹಾಗೂ ಸಣ್ಣ ಅಕ್ಷರದ ಮುದ್ರಣ ಓದುಗರಿಗೆ ಸ್ವಲ್ಪ ತಲೆನೋವು ತರುವ ವಿಷಯ ಎಂಬ ವಿಮರ್ಶೆ ಮಾಡಿದ್ದಾರೆ.

7. ಭೈರಪ್ಪಾಭಿನಂದನಾ, ಪುಟ-30
8. ಪರ್ವ-ಒಂದು ಸಮೀಕ್ಷೆ, ಪುಟ-57

ಅಧ್ಯಾಯ-5

ಕೃತಿಯ ತಾತ್ತ್ವಿಕ ನೆಲೆ

ಎಸ್.ಎಲ್.ಭೈರಪ್ಪನವರು ಮಹಾಭಾರತವನ್ನು ಸೃಜನಾತ್ಮಕವಾಗಿ 'ಪರ್ವ' ಕಾದಂಬರಿಯನ್ನಾಗಿ ಪುನರ್ ಸೃಷ್ಟಿಸಿದ್ದಾರೆ. ಭೈರಪ್ಪನವರು ಮಹಾಭಾರತದ ಅಲೌಕಿಕ ಅಂಶಗಳನ್ನು ತರ್ಕದೃಷ್ಟಿಯಿಂದ ವಿವೇಚಿಸಿ. ಲೌಕಿಕಗೊಳಿಸಿ. ವಾಸ್ತವತೆಗೆ ಹತ್ತಿರವೆನ್ನಿಸಬಹುದಾದ ವಾತಾವರಣ ನಿರ್ಮಿಸಿದ್ದರೆ. ಇದರಿಂದಲೇ ಪರ್ವವು ಮಹಾಭಾರತದ ಪ್ರತಿಕೃತಿಯಾಗದೆ. ಆ ಕಾಲದ ಜನಜೀವನದ ಪರಿಚಯ ಮಾಡುವ ಐತಿಹಾಸಿಕ ಕಾದಂಬರಿಯಾಗಿದೆ. ಲೇಖಕರು [1]"ಮೂಲ ಕೃತಿಯ ಅಲೌಕಿಕ ಅಂಶಗಳಿಂದ ಪಾರಾಗಿ. ಸಾಮಾನ್ಯರನ್ನು. ಅಸಮಾನ್ಯರನ್ನೂ ಒಂದೇ ದೃಷ್ಟಿಯಿಂದ ನೋಡಿ ಆದರ್ಶ ವಾಸ್ತವತೆಗಳನ್ನು ಮೇಳವಿಸಿ. ಯಾವುದೋ ಕಾಲದ ವ್ಯಕ್ತಿ ಸಂಗತಿಗಳು ನಮ್ಮ ಕಾಲದವಾದ. ನಮಗೆ ತೀರ ಹತ್ತಿರದವಾಗಿ ಮಾರ್ಪಡುವ ಕಲಾ ಕೌಶಲವನ್ನು ಈ ಕಾದಂಬರಿ ತೋರಿಸುತ್ತದೆ" ಎಂದು ಲೇಖಕರು ಹೇಳಿದ್ದಾರೆ.

ಭೈರಪ್ಪನವರು ಮೂಲ ವ್ಯಾಸ ಭಾರತವನ್ನು ಅಮೂಲಾಗ್ರ ಓದಿ ನಂತರ ವೇದ ಸಂಸ್ಕೃತಿಯ ಕೊನೆಯ ಅವಧಿಯ ಆರ್ಥಿಕ. ಧಾರ್ಮಿಕ. ರಾಜಕೀಯ. ಸಾಮಾಜಿಕ ಮೊದಲಾದ ಹಲವು ಮುಖಗಳನ್ನು ಆಳವಾಗಿ ಅಭ್ಯಸಿಸಿ [2]"ಮಹಾಭಾರತದ ಘಟನೆಗಳು ನಡೆದ ಹಿಮಾಲಯ ಪರ್ವತದ ಕೆಲವು ಭಾಗಗಳಲ್ಲಿ ಪ್ರವಾಸ ಮಾಡಿ. 1975 ರಲ್ಲಿ ದ್ವಾರಕೆ. ಅರಾವಲಿ ಪರ್ವತ ಶ್ರೇಣಿ. ವಿರಾಟನಗರ. ಮಧುರೆ. ದಿಲ್ಲಿ. ಕುರುಕ್ಷೇತ್ರ. ಹಸ್ತಿನಾವತಿ. ಬರ್ನಾವಾ. ಚಕ್ರನಗರ. ರಾಜಗೀರ್ ಮೊದಲಾದ ಸ್ಥಳಗಳಲ್ಲಿ ಹೋಗಿ ಪರಿಶೀಲಿಸಿ ಮಾಹಿತಿ ಸಂಗ್ರಹಿಸಿ. ತಮ್ಮ ಅನುಭವವನ್ನು ಬರವಣಿಗೆಯಲ್ಲಿ ಮೂಡಿಸಿರುವುದರಿಂದ ಕಥಾವಸ್ತುವಿಗೂ. ಘಟನೆಗಳಿಗೂ ಹತ್ತಿರವಿದ್ದೇವೆ ಎನಿಸುತ್ತದೆ". ಲೇಖಕರು 'ಪರ್ವ' 'ಭಾರತದ' ಕಥೆಯ ಅನೇಕ ಮೂಲ ಪ್ರವೃತ್ತಿಗಳ ವಿಶ್ಲೇಷಣೆ ಮಾಡಿ. ಜನಸಾಮಾನ್ಯರ ಭಾವನೆ. ವಿಚಾರ ಸರಣಿ ತರ್ಕಶಕ್ತಿಗಳನ್ನು ಒಳಗೊಂಡಂತಹ ಒಂದು ಹದವಾದ ಗ್ರಹಿಕೆಯನ್ನು ಹೊಂದಿದ್ದು. ಅವರ ಪ್ರತಿಯೊಂದು ಕಾದಂಬರಿ. ಜೀವನ ಮತ್ತು ಸಾಹಿತ್ಯದ ನಡುವಿನ ಸಂಬಂಧಗಳನ್ನು ಗಾಢಗೊಳಿಸುವ. ಆತ್ಮೀಯಗೊಳಿಸುವ ಪ್ರಯತ್ನವನ್ನು ಮಾಡಿದ್ದಾರೆ.

ಭೈರಪ್ಪನವರು ಪರ್ವದಲ್ಲಿ ಮಾಡಿಕೊಂಡಿರುವ ಮುಖ್ಯ ಬದಲಾವಣೆ ಎಂದರೆ ಮಹಾಭಾರತದ ಕಥಯಲ್ಲಿರುವ 'ಮಿಥ್'ಗಳನ್ನು ಒಡೆದು ಅದನ್ನು ತಾರ್ಕಿಕ ನೆಲೆಯಲ್ಲಿ ರಚಿಸಿದ್ದಾರೆ. ಪರ್ವದಲ್ಲಿ ನಮ್ಮ ಬದುಕಿನ ಸಾಧ್ಯತೆಗಳೆಲ್ಲವೂ ಹಸಿ-ಬಿಸಿ ಸೂಕ್ಷ್ಮಗಳೆಲ್ಲವೂ ರೂಪತಾಳಿವೆ. ಅದುದ್ದರಿಂದ ಮಾನವೀಯ ವಾಸ್ತವತೆಯೇ ಪರ್ವದ ತಳಪಾಯವೂ ಅಲ್ಲದೆ ಕಟ್ಟಡವೂ ಆಗಿದೆ. 'ಪರ್ವ'ದಲ್ಲಿ ಅತಾರ್ಕಿಕತೆ, ಅಸಂಭಾವ್ಯತೆ

1. ಪರ್ವ, ಮುನ್ನುಡಿ ಮುನ್ನ
2. ಪರ್ವ ಅರಿಕೆ

ಪವಾಡಗಳಿಗೆ ಸ್ಥಾನವಿಲ್ಲ. ಶಾಪ ವರಗಳಿಗೆ ಪ್ರಾಧನ್ಯತೆ ಇಲ್ಲದಂತೆ ವಾಸ್ತವತೆಯ ಕೆಲವು ಸನ್ನಿವೇಶಗಳನ್ನು ತಾರ್ಕಿಕ ನೆಲೆಯಲ್ಲಿ ಚಿತ್ರಿಸಿದ್ದಾರೆ. ಲೋಕದಲ್ಲಿ ಇರದ. ನಡೆಯುವ ವಿಲಕ್ಷಣಗಳು ಮನೋಬಿಂಬಗಳು ಕೂಡ ಕಥೆಯ ಪಾತ್ರಗಳಾಗಿ. ಘಟನೆಗಳಾಗಿ ಮೂರ್ತಗೊಳ್ಳುವ ಸಾಧ್ಯತೆಯನ್ನು ನಾವು ಮರೆಯ ಕೂಡದೆಂದು ಭೈರಪ್ಪ ನವರು ಹೇಳಿದ್ದಾರೆ. [3]"ಸಾಹಿತ್ಯದಲ್ಲಿ ಘಟಿಸುವ ಕ್ರಿಯೆಯು ವಾಸ್ತವವೋ ಸಾಧ್ಯವೋ ಆಗಿರಲೇಬೇಕೆಂಬ ನಿಯಮವೊಂದನ್ನು ನಿರ್ಮಿಸಿ ಅದರಲ್ಲಿ ಬದುಕುವ ಮಾನವ ಜೀವಿ ಹೇಗೆ ಸ್ಪಂದಿಸುತ್ತದೆಂಬುದನ್ನು ಸಾಹಿತಿಯು ಶೋಧಿಸುತ್ತಾನೆ" (ನಾನೇಕೆ ಬರೆಯುತ್ತೇನೆ ಪುಟ-27) ಎಂದು ಭೈರಪ್ಪನವರೇ ಹೇಳಿರುವ ಮಾತನ್ನು ನೆನಪು ಮಾಡಿಕೊಂಡು. ಅವರು ತಾರ್ಕಿಕ ನೆಲೆಯಲ್ಲಿ ಚರ್ಚಿಸಿರುವ ಕೆಲವು ಸನ್ನಿವೇಶ ಹಾಗೂ ಪಾತ್ರಗಳನ್ನು ನಾವು ಈ ಅಧ್ಯಾಯದಲ್ಲಿ ತಿಳಿಯಬಹುದು.

ಗಂಗೆಯ ಪಾತ್ರ ಚಿತ್ರಣ

ವ್ಯಾಸ ಮಹಾಭಾರತದಲ್ಲಿ ಭೀಷ್ಮರು ಗಂಗಾದೇವಿಯ ಪುತ್ರ. ಇದಕ್ಕೆ ಪೂರಕವಾಗಿ ಗಂಗೆಯು ಶಾಪಗ್ರಸ್ಥಳಾಗಿ ಭೂಮಿಗೆ ಬಂದದ್ದು. 'ಅಷ್ಟವಸು'ಗಳು ಆಕೆಯ ಮಕ್ಕಳಾಗಿ ಹುಟ್ಟಿದರು. ಆಕೆ ಹೆತ್ತ ಮಕ್ಕಳನ್ನು ಬಲಿಕೊಟ್ಟು ಗಂಡನೊಡನೆ ಅಸಂಗತ ಬಾಳ್ವೆ ನಡೆಸುವ ಹೆಣ್ಣಾಗಿ ಚಿತ್ರಿಸಲಾಗಿದೆ.

'ಪರ್ವ'ದಲ್ಲಿ ಭೀಷ್ಮರ ತಾಯಿ ಗಂಗೆಯು ಆರ್ಯೇತರ ಸಂಪ್ರದಾಯದ ಬೆಸ್ತರ ಹುಡುಗಿ. ಇವಳು ಪರ್ವತ ಸೀಮೆಯವಳಾದ್ದರಿಂದ ಹೆತ್ತ ಮಕ್ಕಳನ್ನು ತವರಿನವರಿಗೆ ರವಾನಿಸಿದಳು. ಇದು ಅವರ ಸಂಪ್ರದಾಯವು ಸಹ ಆಗಿತ್ತು. ಹೆತ್ತಮಕ್ಕಳನ್ನು [4]"ತೌರುಮನೆಗೆ ರವಾನಿಸುತ್ತಿದ್ದಳು" ಎಂಬ ಸಾಮಾನ್ಯ ಸಂಗತಿಯೇ ಅಷ್ಟವಸುಗಳ ಶಾಪ ಹಾಗೂ ಹುಟ್ಟಿದ ಏಳು ಮಕ್ಕಳನ್ನು ನದಿಯಲ್ಲಿ ತೇಲಿಬಿಟ್ಟ ಕಥೆಯಾಗಿ ಬೆಳೆದಿದೆ. ಭೀಷ್ಮರ ತಂದೆ ಶಂತನುವು ಈ ಆರ್ಯೇತರ ಸಂಪ್ರದಾಯವನ್ನು ಒಪ್ಪಲಾರದೆ. ಗಂಡ ಹೆಂಡತಿಯಲ್ಲಿ ಜಗಳವಾಗಿ. ಗಂಗೆಯು ಅಪ್ಪನ ಮನೆಗೆ ಹೊರಟು ಹೋದಳು. ಭೀಷ್ಮನು ತಾಯಿಯ ಪ್ರೀತಿಯಿಲ್ಲದೆ ಅಪ್ಪನೊಡನೆ ಬೆಳೆದನು. ಶಂತನುವನ್ನು ಮದುವೆಯಾಗಿ ತವರನ್ನು ತೊರೆದ ಗಂಗೆಯು ತನ್ನ ತಂದೆ-ತಾಯಿಗೆ ಗಂಡು ಮಕ್ಕಳಿಲ್ಲದ ಕಾರಣಕ್ಕಾಗಿ ಅಥವಾ ತನ್ನ ಮಕ್ಕಳು ತವರಿನ ಆಚಾರ-ವಿಚಾರದ ಅನುಸಾರವಾಗಿ ಬೆಳೆಯಲಿ ಎಂಬ ಉದ್ದೇಶದಿಂದಲೋ. ಬೇರೆ ಯಾವುದೇ ಕಾರಣದಿಂದಲೋ. ತನ್ನಲ್ಲಿ ಹುಟ್ಟಿದ ಏಳು ಗಂಡುಮಕ್ಕಳನ್ನು ತವರಿನವರಿಗೆ ಅವಳು ಒಪ್ಪಿಸಿರಬೇಕು ಕಾರಣ ಏನೇ ಇದ್ದರು ಗಂಗೆ ವಾಸ್ತವದಲ್ಲಿ ತನ್ನ ಸ್ವತಃ ಮಕ್ಕಳನ್ನು ಕೊಲ್ಲಲಿಲ್ಲ ಎಂಬುದು ಸತ್ಯವಾಗಿದೆ. ಆದ್ದರಿಂದ ಲೇಖಕರು ಇಲ್ಲಿ ವಾಸ್ತವತೆಯನ್ನು ತಾರ್ಕಿಕ ನೆಲೆಯಲ್ಲಿ ಚಿತ್ರಿಸಿರುವುದು ಸತ್ಯಕ್ಕೆ ಹತ್ತಿರವಾಗಿದೆ.

3. ಭೈರಪ್ಪಾಭಿನಂದನಾ, ಪುಟ-98
4. ಭೈರಪ್ಪಾಭಿನಂದನಾ, ಪುಟ-95

ಪಾಂಡುವಿನ ಶಾಪ ವೃತ್ತಾಂತ:

ಮೂಲ ಭಾರತದಲ್ಲಿ ಪಾಂಡು ತನ್ನ ಮಡದಿಯರೊಡನೆ ಕಾಡಿಗೆ ಹೋಗಿದ್ದು, ಅಲ್ಲಿ ಮೃಗ (ಜಿಂಕೆ) ರೂಪದಲ್ಲಿ ರತಿಸುತ್ತಿದ್ದ ಕಿಂದಮ ದಂಪತಿಗಳ ಮೇಲೆ ಐದು ಬಾಣಗಳಿಂದ ಹೊಡೆದು ಕೆಡವಿದನು. ಪ್ರಾಣಾಂತಿಕ ಗಾಯ ಪಡೆದ ಕಿಂದಮ, ಪಾಂಡುವಿಗೆ 'ಭೋಗದಲ್ಲಿರುವಾಗ ಮೃತ್ಯು ನಿನಗೆ ಆವರಿಸಲಿ' ಎಂದು ಶಾಪವಿತ್ತು ಆತ ಸಾಯುತ್ತಾನೆ.

ಪರ್ವದಲ್ಲಿ ಪಾಂಡುರಾಜ ಹದಿಹರಯದಲ್ಲಿ ದಾಸಿಯರೊಡನೆ ನಾಲ್ಕಾರು ವರ್ಷದ ಅತಿ ಸಂಭೋಗದಿಂದ ವೀರ್ಯಹೀನನಾದ. ಆತ ಮದುವೆಯಾದ ಮೇಲೆ ತನ್ನ ಇಬ್ಬರು ಹೆಂಡತಿಯರ ಋತುಸ್ರಾವವನ್ನು ತಡೆದು ಬೆಳೆಸಲಾಗದ ಹತಾಶೆಯಲ್ಲಿ ಹಿಮಾಲಯಕ್ಕೆ ತಪಸ್ಸಿನ ನೆಪದಲ್ಲಿ ಹೋಗಿ ತನ್ನ ಕಾಯಿಲೆಯನ್ನು ಗುಣ ಪಡಿಸಿಕೊಳ್ಳಲು ನಿರ್ಧರಿಸಿದನು. ಅದರಂತೆ ದೇವಲೋಕದ ವೈದ್ಯರಿಂದ ಚಿಕಿತ್ಸೆ. ಗಿಡಮೂಲಕೆ ಔಷಧಿಗಳನ್ನು ಪಡೆದರು ಸಹ, ತನ್ನ ಕಾಯಿಲೆ ಪೂರ್ಣಗುಣವಾಗಲಿಲ್ಲ. [5]"ಪಾಂಡು ತನ್ನದೇ ಅದ ಒಂದು ಮಗುವನ್ನು ಪಡೆಯಬೇಕೆಂಬ ಹಂಬಲದಲ್ಲಿ ಹಾಗೂ ಚಿಕಿತ್ಸೆ ಫಲಕಾರಿಯಾಗಿರಬೇಕೆಂಬ ಭ್ರಮೆಯಲ್ಲಿ ಮಾದ್ರಿಯೊಡನೆ ಹಠದ ಅತಿ ಸಂಭೋಕ್ಕೆಳಸಿದನು. ಅಂಥ ಒಂದು ಸಂಭೋಗಾವಧಿಯಲ್ಲೇ ಸಾಮರ್ಥ್ಯವಿಲ್ಲದೆ ಸ್ತಂಬಿಸಿ ಸುರತದಲ್ಲಿ ಸಾವು ಕಾಣುತ್ತಾನೆ. ಆತ [6]"ಬೇಗ ಒಂದು ಮಗು ಹುಟ್ಟಿಸಬೇಕು ತನ್ನದೇ ಒಂದು ಮಗು ಹುಟ್ಟಿಸಿ ನೋಡಿ ಎತ್ತಿ ತಬ್ಬಿ ಸಂತೋಷ ಪಡೆಯಬೇಕು ಅನ್ನುವ ಆತುರ ಅವನನ್ನು ಹಿಡಿದುಬಿಟ್ಟಿತ್ತು" ಎಂಬ ಮಾದ್ರಿಯ ಮಾತಿನಲ್ಲಿ ಆತನ ಆತುರ ಮತ್ತು ಉದ್ವೇಗದಿಂದ ಅವನ ಹೃದಯಸ್ತಂಭನವಾಗಿ ಸತ್ತಿರಬಹುದೆಂಬುದು ತರ್ಕಬದ್ಧವಾದ ಹಾಗೂ ಸತ್ಯಕ್ಕೆ ಹತ್ತಿರವಾದ ಸಂಗತಿಯಾಗಿದೆ. ಪಾಂಡು ಶಾಪದಿಂದ ಸಾಯಲಿಲ್ಲ ಎಂಬುದನ್ನು ಈ ಮೂಲಕ ತಿಳಿಯಬಹುದು.

ಕರ್ಣನ ಜನನ

ಮೂಲ ಭಾರತದಲ್ಲಿ ಕುಂತಿ ತನ್ನ ಸಾಕು ತಂದೆ ಭೋಜರಾಜನ ಅರಮನೆಯಲ್ಲಿದ್ದಾಗ, ಅಲ್ಲಿಗೆ 'ದುರ್ವಾಸಋಷಿ' ಬಂದಿದ್ದರು. ಆತನಿಗೆ ಕುಂತಿ ಶ್ರದ್ಧೆಯಿಂದ ಸೇವೆ ಮಾಡಿ ಸಂತೋಷಪಡಿಸಿದಕ್ಕೆ ಆತನು, ಅವಳಿಗೆ 'ಮಂತ್ರೋಪದೇಶ' ಮಾಡಿ, ನೀನು ಈ ಮಂತ್ರದಿಂದ ಯಾವ ದೇವತೆಯನ್ನು ಕರೆದರೂ ಅವರು ಬಂದು ನಿನ್ನ ವಶವಾಗುತ್ತಾರೆ ಎಂದನು. ಕುಂತಿ ಕೂತೂಹಲದಿಂದ ಮಂತ್ರ ಹೇಳಿ ಸೂರ್ಯದೇವನನ್ನು ಕರೆದಳು ಅವನಿಂದ 'ಕರ್ಣ' ನನ್ನು ಪಡೆದಳೆಂಬ ಚಿತ್ರಣವಿದೆ. ಪರ್ವದಲ್ಲಿ ಕುಂತಿ 'ದುರ್ವಾಸ ಋಷಿಯ' ಸೇವೆ ಮಾಡಿ ಅವರಲ್ಲಿ ತುಂಬ ಸಲಿಗೆ ಬೆಳಸಿಕೊಂಡು, ತನಗೆ ಮಗುವಿನ ಬಗ್ಗೆ ಇದ್ದಂತಹ ಕುತೂಹಲದಿಂದ [7]"ಮುನಿ, ಮಗು ಹೇಗೆ ಆಗುತ್ತೆ" ಎಂದಳು. ದುರ್ವಾಸಮುನಿಗೂ ಹದಿನೈದರ ಹರೆಯದ ವಯಸ್ಸಿಗೆ ಮೀರಿ ಬೆಳೆದ ಕುಂತಿಯ ಆಕರ್ಷಣೆಯಿಂದ ಅವಳೊಡನೆ ಸಂಭೋಗ ಮಾಡಿ, ಅವಳಲ್ಲಿ ಗರ್ಭಾಂಕುರವಾದೊಡನೆ ಅಲ್ಲಿಂದ ಹೊರಟು ಹೋದರು.

5. ಪರ್ವ ಒಂದು ಸಮೀಕ್ಷೆ, ಪುಟ-68
6. ಪರ್ವ, ಪುಟ-93
7. ಪರ್ವ, ಪುಟ-63

ಕುಂತಿಗೆ ದುರ್ವಾಸರಿಂದ ಕಾನೀನ ಪುತ್ರನಾಗಿ 'ಕರ್ಣ' ಜನಿಸಿದರು. ಮೂಲಭಾರತದಂತೆ ಯಾವ ಮಂತ್ರೋಪದೇಶದಿಂದಲೂ ಮಗು (ಕರ್ಣ) ಜನಿಸಲಿಲ್ಲ. ರಾಜಪುತ್ರಿಯಾದ ಕುಂತಿಗೆ ಮದುವೆಯಾಗುವ ಮೊದಲು ಹುಟ್ಟಿದ ಮಗುವಿನಿಂದ ಅವಳು ಲೋಕನಿಂದನೆಗೆ ಒಳಗಾಗುತ್ತಾಳೆಂಬುದರಿಂದ ವ್ಯಾಸರು ಮಂತ್ರೋಪದೇಶದ ಕಥೆ ನಿರೂಪಿಸಿರಬಹುದು. 'ಮಂತ್ರಕ್ಕೆ ಮಾವಿನಕಾಯಿ ಉದುರುವುದಿಲ್ಲ' ಎಂಬ ಮಾತಿನಂತೆ ಮಂತ್ರದಿಂದ ಮಗುವಾಗುವುದಿಲ್ಲ. ಈ ರೀತಿ ಮಂತ್ರದಿಂದ ಮಗುವಾಗುವಂತಿದ್ದರೆ, ಮಕ್ಕಳಿಲ್ಲದ ದಂಪತಿಗಳಿಗೆ ಇರುತ್ತಿರಲಿಲ್ಲ. ಆದ್ದರಿಂದ ಕರ್ಣನು ದುರ್ವಾಸ ಮತ್ತು ಕುಂತಿಯ ಸಂಭೋಗದಿಂದ ಹುಟ್ಟಿದವನೆಂಬ ಲೇಖಕರ ವಾಸ್ತವತೆಯ ಚಿತ್ರಣ ತರ್ಕಬದ್ಧವಾಗಿದೆ.

ಪಾಂಡವರ ಜನನ

ಮೂಲ ಭಾರತದಲ್ಲಿ ಕುಂತಿ ಮತ್ತು ಮಾದ್ರಿಯರು ದೇವತೆಗಳನ್ನು ಮಂತ್ರೋಪದೇಶದಿಂದ ಆಹ್ವಾನಿಸಿ ಪಾಂಡವರನ್ನು ಪಡೆದ ಚಿತ್ರಣವಿದೆ. ಕುಂತಿ- ಧರ್ಮನಿಂದ, ವಾಯುವಿನಿಂದ, ಇಂದ್ರನಿಂದ, ಅನುಕ್ರಮವಾಗಿ ಯಧಿಷ್ಠಿರ (ಧರ್ಮರಾಯ), ಭೀಮ, ಅರ್ಜುನರನ್ನು ಪಡೆದಳು. ಮಾದ್ರಿಯು ಅಶ್ವಿನಿದೇವತೆಗಳಿಂದ ನಕುಲ - ಸಹದೇವರೆಂಬ ಅವಳ ಮಕ್ಕಳನ್ನು ಪಡೆದಳೆಂದು ಚಿತ್ರಿಸಲಾಗಿದೆ.

ಪರ್ವದಲ್ಲಿ ಕುಂತಿ ಮತ್ತು ಮಾದ್ರಿಯ ಹಿಮಾಲಯದ ದೇವಾಂಗ ಜನಾಂಗದವರಿಂದ 'ನಿಯೋಗ' ಮಾಡಿಸಿಕೊಂಡು ಮಕ್ಕಳನ್ನು ಪಡೆದರು. ಪಾಂಡುರಾಜ ಕ್ಷತ್ರಿಯ ಪದ್ಧತಿಯಂತೆ ತನ್ನ ಹೆಂಡತಿಯರಿಗೆ ನಿಯೋಗ ಮಾಡಿಸಿ ಮಕ್ಕಳನ್ನು ಪಡೆದನು. ಪಾಂಡುರಾಜನೆ ನಿಯೋಗಕ್ಕೆ ಸಮ್ಮತಿ ನೀಡಿ "ಕುಂತಿಗೆ ಮೊದಲ ಬಾರಿ ದೇವಲೋಕದ 'ಬ್ರಾಹ್ಮಣ ಮುಖ್ಯಸ್ಥ' ನಿಂದ ನಿಯೋಗ ಮಾಡಿಸಿ 'ಯುಧಿಷ್ಠಿರನನ್ನು' (ಧರ್ಮರಾಯ) ಪಡೆದನು. ಎರಡನೆ ಬಾರಿಗೆ ದೇವಲೋಕದ 'ಸೈನ್ಯಗಣದ ಮುಖ್ಯಸ್ಥನಾದ ಮರುತ್' ನಿಂದ ನಿಯೋಗ ಮಾಡಿಸಿ ಶಕ್ತಿಶಾಲಿಯಾದ 'ಭೀಮ'ನನ್ನು ಪಡೆದನು. ಮೂರನೇ ಬಾರಿಗೆ 'ದೇವಲೋಕದ ದೊರೆ ಇಂದ್ರ'ನೇ ಪಾಂಡುವಿನ ಅನುಮತಿ ಪಡೆದು ಕುಂತಿಗೆ ನಿಯೋಗ ಮಾಡಿದ್ದರಿಂದ 'ಅರ್ಜುನ' ಜನಿಸಿದ". ನಂತರ ಪಾಂಡುವು ಪಟ್ಟಮಹಿಷಿಯಾದ ಕುಂತಿಯ ಸಮ್ಮತಿಯಿಂದ, ತನ್ನ ಎರಡನೇ ಹೆಂಡತಿ ಮಾದ್ರಿಗೆ 'ದೇವಲೋಕದ ಅವಳ ವೈದ್ಯರಿಂದ ನಿಯೋಗ ಮಾಡಿಸಿ ಅವಳ ಮಕ್ಕಳಾದ 'ನಕುಲ ಸಹದೇವರನ್ನು' ಪಡೆದನು. ಮೂಲಭಾರತದಲ್ಲಿ ಪಾಂಡವರ ಜನನ ಸಾಕ್ಷಾತ್ ದೇವತೆಗಳಿಂದಲೇ ಆಯಿತೆಂದು ನಿರೂಪಿಸಲು, ವ್ಯಾಸರು ಮಂತ್ರೋಪದೇಶದ ಕಥೆ ಹೇಳಿರಬಹುದು. ಅಥವಾ ಪಾಂಡವರ ಸ್ಥಾನ ಉನ್ನತ ಮಟ್ಟದೆಂದು ಈ ರೀತಿ ನಿರೂಪಿಸಿರಬಹುದು. ಮಕ್ಕಳು ಗಂಡು ಮತ್ತು ಹೆಣ್ಣಿನ ಸಂಭೋಗ ರಿಂದ ಮಾತ್ರ ಹುಟ್ಟುವುದು ಎಂಬ ಸರ್ವಕಾಲಿಕ ಸತ್ಯವಾದ ಸಂಗತಿಯನ್ನು ಇಲ್ಲಿ ಲೇಖಕರು ತಾರ್ಕಿಕವಾಗಿ ನಿರೂಪಿಸಿದ್ದಾರೆ.

8. ಯುಗಸಾಕ್ಷಿ, ಪುಟ-234

ದ್ರೌಪದಿಯ ವಸ್ತ್ರಾಪಹರಣ

ಮೂಲ ಭಾರತದಲ್ಲಿ ದುಶ್ಯಾಸನನು ಪಂಚಾಲಿ ಇದ್ದಲ್ಲಿಗೆ ಹೋಗಿ ಬಾ ಬಾ ಪಾಂಚಲಿ ನಿನ್ನನ್ನು ಗೆದ್ದಿದ್ದೇವೆ. ಎಂದು ತುಂಬಿದ ಸಭೆಗೆ ಅವಳ ಮುಡಿ ಹಿಡಿದು ಎಳೆದು ತಂದು. ಕರ್ಣನ ಮಾತಿನಿಂದ ಪ್ರಚೋದಿತನಾಗಿ ಅವಳ ಸೆರಗನ್ನು ಎಳೆಯಲಾರಂಭಿಸಿದನು. ಆಗ ದ್ರೌಪದಿಯ ಕೃಷ್ಣನಲ್ಲಿ ಪ್ರಾರ್ಥಿಸಿಕೊಳ್ಳಲು ಅವನು ಅವಳಿಗೆ ಅಕ್ಷಯಾಂಬರ (ವಸ್ತ್ರ ಅಕ್ಷಯವಾಗುವಂತೆ ಮಾಡಿದ) ಕರುಣಿಸಿದ ಇದರಿಂದ ಅವಳ ಮಾನವುಳಿಯಿತು ಎಂದು ಚಿತ್ರಿಸಲಾಗಿದೆ.

ಪರ್ವದಲ್ಲಿ ದ್ರೌಪದಿ ರಜಸ್ವಲೆಯೆಂಬ ಮೂಲದ್ರವ್ಯವೂ ಹಾಗೆಯೇ ಉಳಿದು. ಆಕೆಯ ಮುಡಿಯನ್ನು ದುಶ್ಯಾಸನನು ಎಳೆದು ತುಂಬಿದ ರಾಜಸಭೆಗೆ ತಂದನು. ಕರ್ಣದ ಮಾತಿನಿಂದ ಪ್ರೇರಣೆ ಪಡೆದು. ದ್ರೌಪದಿಯ ಹತ್ತಿರ ಬಂದು ನೇರವಾಗಿ ಸೆರೆಗಿಗೆ ಕೈಹಾಕಿ ಎಳೆದು. ಬೆತ್ತಲೆ ಮಾಡುವ ಉದ್ದೇಶ ಹೊಂದಿದ್ದ . ಆದರೆ ಅಂದು [9]"ದ್ರೌಪದಿ ಉಳಿದುಕೊಂಡದ್ದು ತನ್ನ ಧೈರ್ಯದ ಮಾತುಗಳಿಂದ. ಅಣ್ಣ ಕೃಷ್ಣನ ಸೈನ್ಯ ಮತ್ತು ಪಾಂಚಾಲರ ಸೈನ್ಯ ಬಂದು ಹಸ್ತಿನಾವತಿಯನ್ನು ದೂಳಿಪಟ ಮಾಡುವುದೆಂದು ಹೇಳಿದ್ದರಿಂದ ಮತ್ತು ಭೀಮನ ಗುಡುಗಿನಂತಹ ಪ್ರತಿಜ್ಞೆಯಿಂದ. ಇಲ್ಲಿ ವಸ್ತ್ರ ಅಕ್ಷಯವಾಗಲಿ. ಕೃಷ್ಣನ ಪವಾಡವಾಗಲಿ ಆಗಲಿಲ್ಲ. ಕೃಷ್ಣ ದೈವೀ ಪುರುಷನೆಂದು ನಿರೂಪಿಸಲು ಅವನ ಪವಾಡಗಳನ್ನು ವ್ಯಾಸರು ಚಿತ್ರಿಸಿರಬಹುದು. ಕೃಷ್ಣ ಪವಾಡಗಳನ್ನು ಮಾಡುವಂತಿದ್ದರೆ. ದ್ರೌಪದಿಯ ಮಕ್ಕಳಾದ ಉಪಪಾಂಡವರ ಹತ್ಯೆಯನ್ನು ತಡೆದು. ಅವಳಿಗೆ ತುಂಬಾ ದುಃಖವಾಗದಂತೆ ನೋಡಿಕೊಳ್ಳಬಹುದಿತ್ತು. ದ್ರೌಪದಿಯು ಸಭೆಯಲ್ಲಿ ಧೈರ್ಯವಾಗಿ ಮಾತನಾಡಿದ್ದರಿಂದಲೇ ಅವಳ ಅವಮಾನ
ತಪ್ಪಿತು ಹಾಗೂ ಧೃತರಾಷ್ಟನು ವರಗಳನ್ನು ಕೊಡುವಂತಾಗಿ. ಉಪಪಾಂಡವರಿಗೆ ದಾಸಪುತ್ರರೆಂಬ ನಿಂದನೆ ಬರದಂತಾಯಿತು. ಪಾಂಡುವರು ಶಸ್ತ್ರಾಸ್ತ್ರ ಸಹಿತವಾಗಿ ಬಿಡುಗಡೆ ಹೊಂದಿದ್ದು ಸಹ ಅವಳ ಧೈರ್ಯದ ಮಾತುಗಳಿಂದ ಎಂಬುದನ್ನು ತಿಳಿಯಬಹುದು.

ದ್ರೋಣನ ಜನನ

ವ್ಯಾಸ ಮಹಾಭಾರತದಲ್ಲಿ ಭಾರದ್ವಾಜರು ಒಮ್ಮೆ ಸ್ನಾನಕೆಂದು ಗಂಗಾತೀರಕ್ಕೆ ಹೋದಗ 'ಘೃತಾಜಿ' ಎಂಬ ಅಪ್ಸರೆಯನ್ನು ಕಂಡು ಅವನಿಗೆ ವೀರ್ಯಸ್ಖಲನವಾಗುತ್ತದೆ. ಅದನ್ನು ಅವನು ಕಲಶದಲ್ಲಿ ಹಿಡಿದಿಟ್ಟು ಮುಂದೆ ಅದು ಮಗುವಾಗಿ 'ಕುಂಭ ಸಂಭವ ದ್ರೋಣಾ' ಎಂಬ ಹೆಸರು ಪಡೆಯುತ್ತದೆ. ಪರ್ವದಲ್ಲಿ ಭಾರದ್ವಾಜರು ಒಮ್ಮೆ ಸ್ನಾನ ಮಾಡುತ್ತಿರುವಾಗ 'ಘೃತಾಜಿ' ಎಂಬ ಅಪ್ಸರೆಯನ್ನು ಕಂಡು ಕಾಮೋದ್ರಿಕ್ತರಾದರು. ಆದರೆ ಈ ಜಟಾಧಾರಿ ಬಡ ಋಷಿಯೊಡನೆ ಸಂಭೋಗಕ್ಕೆ ಅವಳು ಒಪ್ಪಲಿಲ್ಲ. [10]"ಅವಳು ಹತ್ತಿಹೋದ ಬೆಟ್ಟವನ್ನೆ ನೋಡುತ್ತ ಒದ್ದೆ ಮೈಯಲ್ಲಿ ನಿಂತಿದ್ದಾಗ ಒಬ್ಬ ಕುಂಬಾರ ಹೆಂಗಸು

9. ಯುಗಸಾಕ್ಷಿ, ಪುಟ-244
10. ಪರ್ವ, ಪುಟ-441

ಬಂದಳಂತೆ, ಯಜ್ಞಾಕ್ಕೆ ಬೇಕಾದ ಕೆಲಸಗಳನ್ನು ಮಾಡುವ ಮನೆತನದವಳು" ಕಾಮೋದ್ರಿಕ್ತರಾದ ಭಾರದ್ವಾಜರು ಅವಳನ್ನು ಕೂಡಿದ್ದರಿಂದ ಹುಟ್ಟಿದವನೇ ದ್ರೋಣ. [11]"ಇಲ್ಲಿ 'ಕುಂಭ ಸಂಭವ' ಎಂಬುದು ಅವನ ತಾಯಿಯು ಕುಂಬಾರರ ಹೆಣ್ಣು ಎಂದು ಊಹಿಸಲು ಪ್ರೇರಕವಾಗಿರಬೇಕಷ್ಟೆ ಎಂದಿದ್ದಾರೆ". ಮೂಲ ಭಾರತದಂತೆ ಕುಂಭ/ಕಲಶದಲ್ಲಿ ಮಗು ಬೆಳೆಯಲು ಸಾಧ್ಯವಿಲ್ಲ. ಈ ರೀತಿ ಮಗು ಕುಂಭದಲ್ಲಿ ಬೆಳೆಯುವಂತಿದ್ದರೆ, ಯಾವ ಹೆಣ್ಣು ನವಮಾಸಗಳ ಕಾಲ ತನ್ನ ಗರ್ಭದಲ್ಲಿ ಭ್ರೂಣವನ್ನು ಹೊತ್ತು ಕಷ್ಟವೇ ಪಡೆಯಬೇಕಾಗಿರಲಿಲ್ಲ. ಅಲ್ಲದೆ ಗಂಡು ಹೆಣ್ಣಿನ ಅಗತ್ಯವೇ ಇಲ್ಲದೆ ತನ್ನ ಮಗುವನ್ನು ಕುಂಭದಲ್ಲೆ ಬೆಳೆಸಿಕೊಳ್ಳುತ್ತಿದ್ದನು. ಆದ್ದರಿಂದ ಭೈರಪ್ಪನವರು ದ್ರೋಣ ಕುಂಬಾರರ ಹೆಣ್ಣಿನಲ್ಲಿ ಹುಟ್ಟಿದವನೆಂದು ತಾರ್ಕಿಕವಾಗಿ ಚಿತ್ರಿಸಿರುವುದು, ವಾಸ್ತವ ಸಂಗತಿಯಾಗಿದೆ.

ಕೃಪಾಚಾರ್ಯ ಮತ್ತು ಕೃಪೆಯ ಜನನ

ಮೂಲ ಭಾರತದಲ್ಲಿ ಗೌತಮ ಮಹರ್ಷಿಗೆ ಬಾಣಸಹಿತನಾಗಿ ಹುಟ್ಟಿದ ಒಬ್ಬ ಮಗ ಶರದ್ವತ. ಅವನು ಧನುರ್ವಿದ್ಯೆಯಲ್ಲಿ ತಪಸ್ಸು ಮಾಡುತ್ತಿರುವಾಗ ದೇವೇಂದ್ರ ಜಾಲವತಿ ಎಂಬೊಬ್ಬ ಅಪ್ಸರೆಯನ್ನು ಕಂಡು ತನಗೆ ಆದ ವೀರ್ಯಸ್ಖಲನವನ್ನು ಅವನು ಜೊಂಡು ಹುಲ್ಲಿನ ಮೇಲೆ ಚೆಲ್ಲಲಾಗಿ ಅದರಿಂದ ಅವಳ ಮಕ್ಕಳು ಹುಟ್ಟಿದರು. ಅವರೆ ಕೃಪ ಮತ್ತು ಕೃಪೆ . ಆ ಅವಳ ಮಕ್ಕಳನ್ನು ಕೃಷ್ಣಾಜೀನದ ಮೇಲೆ ಮಲಗಿಸಿ ಪಕ್ಕದಲ್ಲಿ ಧನುರ್ಬಾಣಗಳನ್ನಿರಿಸಿ ಅವನು ಹೊರಟು ಹೋದ. ಆ ವೇಳೆಗೆ ಅಲ್ಲಿಗೆ ಬೇಟೆಗಾಗಿ ಬಂದ ಶಂತನು ಆ ಮಕ್ಕಳನ್ನು ತಂದು, ಕೃಪ ಮತ್ತು ಕೃಪೆ ಎಂಬ ಹೆಸರಿಟ್ಟು ಸಾಕಿದನು. ನಂತರ ಶರದ್ವಂತನು ಕೃಪನನ್ನು ಅಸ್ತ್ರಾಸ್ತ್ರ ಪಾರಂಗತನನ್ನಾಗಿ ಮಾಡಿದ ರೀತಿ ಚಿತ್ರಿಸಲಾಗಿದೆ.

ಪರ್ವದಲ್ಲಿ 'ಗೌತಮಗೋತ್ರದ ಶರದ್ವನ್' ಎಂಬ ಬ್ರಾಹ್ಮಣ ವೇದವ್ಯಾಸವನ್ನು ಕೈಬಿಟ್ಟು ಬಿಲ್ಲುವಿದ್ಯೆ ಕಲಿತನು. ಅವನು ಕರುನಾಡಿನ ಕಾಡಿಗೆ ಹೋದಾಗ, ಬಾಣದ ಕಡ್ಡಿಗಳನ್ನು ಕೊಯ್ಯುವ ಜಾತಿಯ ಒಬ್ಬ ಕಾಡು ಹೆಂಗಸು ಕಾಡಿನಲ್ಲಿ ಒಬ್ಬಳೆ ಬಿಲ್ಲುಬಾಣ ಹಿಡಿದು ಹಾರುವ ಹಕ್ಕಿಯ ಬೇಟೆಯಾಡುತ್ತಿದ್ದವಳನ್ನು ಕಂಡು ಕಾಮದ ಹಸಿವಾಗಿ ಈತ ಅವಳನ್ನು ಕರೆದಾಗ ಒಲ್ಲೆನೆಂದವಳನ್ನು ಹಿಡಿದು ಬಲವಂತದಿಂದ ಸಂಭೋಗಿಸಿಯೂ ಬಿಟ್ಟನಂತೆ. ಇದರಿಂದ ಬಸುರಿಯಾದ ಅವಳು ಒಂದು ಗಂಡು, ಒಂದು ಹೆಣ್ಣು ಅವಳ ಮಕ್ಕಳನೆತ್ತಳು, ನಂತರ ಅವಳು ಕಾಯಿಲೆ ಬಿದ್ದು ಮಕ್ಕಳನ್ನು ತಂದು ರಾಜ ಶಂತನುವಿಗೆ ಒಪ್ಪಿಸಿ [12]"ನಿನ್ನ ಪ್ರಜೆಗಳು ತಂದೆಯಂತೆ ಸಾಕು" ಎಂದಳು. ಹತ್ತು ವರ್ಷಗಳ ನಂತರ ಬಂದ ಶರದ್ವನನು ಕೃಪನಿಗೆ

11. ಭೈರಪ್ಪಾಭಿನಂದನಾ, ಪುಟ-96
12. ಪರ್ವ, ಪುಟ-446

ಆರೇಳು ವರ್ಷ ಬಿಲ್ಲುವಿದ್ಯೆ ಕಲಿಸಿ ಅವನನ್ನು ಅಸ್ತ್ರಾಸ್ತ್ರ ಪಾರಂಗಿತನಾಗಿ ಮಾಡಿದನು. ಕೃಪೆಯು ದ್ರೋಣರನ್ನು ಮದುವೆಯಾಗಿ ಅಶ್ವತ್ಥಾಮನನ್ನು ಹೆತ್ತಳು. ಮೂಲ ಭಾರತದಲ್ಲಿರುವಂತೆ ವೀರ್ಯವನ್ನು ಜೊಂಡು ಹುಲ್ಲಿನ ಮೇಲೆ ಚೆಲ್ಲಲಾಗಿ ಅವಳ ಮಕ್ಕಳಾದುದ್ದು ಅವಾಸ್ತವ ಸಂಗತಿ. ಆದ್ದರಿಂದ ಶರದ್ವನನು ಕಾಡು ಹೆಂಗಸರನ್ನು ಜೊಂಡು ಹುಲ್ಲಿನ ಮೇಲೆ ಬಲವಂತವಾಗಿ ಸಂಭೋಗಿಸಿದ್ದರಿಂದ ಅವಳಿಗೆ ಅವಳ ಮಕ್ಕಳಾಗಿರಬೇಕೆಂಬ ತರ್ಕ ಸತ್ಯಕ್ಕೆ ಹತ್ತಿರವಾದುದ್ದಾಗಿದೆ.

ಕಂಸನ ಜನನ

ಮೂಲ ಭಾರತದಲ್ಲಿ 'ಕಾಲನೇಮಿ' ಎಂಬ ರಾಕ್ಷಸನು ಕಂಸನಾಗಿ ಹುಟ್ಟಿದ್ದರಿಂದ ಅವನು ರಾಕ್ಷಸಗುಣದಿಂದ ಕ್ರೂರಿಯಾದ ಎಂದು ಚಿತ್ರಿಸಲಾಗಿದೆ.

[13]"ಪರ್ವದಲ್ಲಿ ಮಧುರಾಪುರದ ರಾಜ ಉಗ್ರಸೇನನ ಹೆಂಡತಿಯು ಜಲಸ್ಥಳದಲ್ಲಿ ಕೆಲವು ದಿನ ಬಿಡಾರ ಹೂಡಿದ್ದಳು. ಆಗ 'ದ್ರುಮಿಳ' ಅಂತ ಒಬ್ಬ ರಾಕ್ಷಸ ಹುಟ್ಟಿನ ರಾಜ. ಪೂರ್ತಿರಾಕ್ಷಸನಲ್ಲ. ರಾಕ್ಷಸ ತಾಯಿ. ಆರ್ಯತಂದೆಗೋ. ರಾಕ್ಷಸನ ತಂದೆ ಆರ್ಯ ತಾಯಿಗೋ ಹುಟ್ಟಿದವನು". ಉಗ್ರಸೇನನ ಹೆಂಡತಿಯೊಡನೆ ಸಂಭೋಗ ನಡೆಸಿದ್ದರಿಂದ ಹುಟ್ಟಿದವನೇ ಕಂಸ. ಇತ ರಾಕ್ಷಸ ತಂದೆಯಿಂದ ಹುಟ್ಟಿದ್ದರಿಂದ ಕ್ರೂರಿಯಾದ. ಉಗ್ರಸೇನನು ಕಂಸನನ್ನು ಮಗನೆಂದು ಒಪ್ಪಿಕೊಳ್ಳದೇ ತನ್ನ ಇತರ ಮಕ್ಕಳನ್ನು ಪ್ರೀತಿಸುವಂತೆ. ಕಂಸನನ್ನು ಪ್ರೀತಿಸದೇ ತಿರಸ್ಕರಿಸಿದನು. ಇದರಿಂದ ಕಂಸ ದುಷ್ಟತನವನ್ನು ಮೈಗೂಡಿಸಿಕೊಂಡಿರಬೇಕು. ಕಾದಂಬರಿಯಲ್ಲಿ ಯುಯುಧಾನ ಕಂಸನ ವ್ಯಕ್ತಿತ್ವವನ್ನು ನೆನೆಪು ಮಾಡಿಕೊಳುತ್ತಾ 'ಆಗಂತಕ ಬೀಜವೇ ಪಾಪ' ಎಂದು ತೀರ್ಮಾನಿಸಿದ. ಇಲ್ಲಿ ಲೇಖಕರು ತಳಶಾಸ್ತ್ರದ ಆಧಾರದ ಮೇಲೆ ಕಂಸನ ಪಾತ್ರ ರಚನೆ ಮಾಡಿದ ಹಾಗೆ ತೋರುತ್ತದೆ.

ಗಾಂಧಾರಿಯ ಮಕ್ಕಳ ವೃತ್ತಾಂತ

ಮೂಲ ಭಾರತದಲ್ಲಿ ಗಾಂಧಾರಿ ಗರ್ಭಿಣಿಯಾಗಿರುವಾಗಲೇ ಕುಂತಿಗೆ ಯುಧಿಷ್ಠಿರನು ಹುಟ್ಟಿದ ವರ್ತಮಾನ ಬಂತು. ತಾನು ಮಾತ್ರ ಎರಡು ವರ್ಷ ತುಂಬುತ್ತ ಬಂದರೂ ಇನ್ನೂ ಹೆರಲಿಲ್ಲ. ಭಾರವನ್ನು ಸಹಿಸಲಾಗದೆ ಹೊಟ್ಟೆಯನ್ನು ಹೊಸೆದುಕೊಂಡು ಗರ್ಭವನ್ನು ಹೊರದೂಡಿದಳು. ಅದು ಒಂದು ಮಾಂಸದ ಗಟ್ಟಿಯಾಗಿ ಹೊರಬಿತ್ತು. 'ಇದೆಯೇ ನನಗೆ ಹಿಂದೆ ಈಶ್ವರನು ವರಕೊಟ್ಟಿದ್ದು ಮತ್ತು ವ್ಯಾಸನು ಅನುಗ್ರಹಿಸಿದ್ದು'. ಎಂದು ಅದನ್ನು ಬಿಸಾಡುವುದರಲ್ಲಿರಲು ವ್ಯಾಸಮುನಿಯು ಬಂದು ಅದನ್ನು ತಣ್ಣೀರಿನಿಂದ ತೊಳೆಯಿಸಿದನು. ಕೂಡಲೇ ಅದು ನೂರುಚೂರಾಯಿತು. ಅವುಗಳನ್ನು ಒಂದೊಂದನ್ನೂ ಬೇರೆ

13. ಭೈರಪ್ಪಾಭಿನಂದನಾ, ಪುಟ-98

ಬೇರೆಯಾಗಿ ತುಪ್ಪ ತುಂಬಿದ ಗಡಿಗೆಗಳಲ್ಲಿ ಇಡಿಸಿದನು. ಅವು ಬೆಳೆದು ಕಾಲಕ್ರಮದಲ್ಲಿ ಮಕ್ಕಳಾಗುತ್ತಾ ಬಂದವು ಹೀಗೆ ಮೊದಲು ದುರ್ಯೋಧನ ಅವನ ಹಿಂದೆ ಒಬ್ಬೊಬ್ಬರಾಗಿ ಒಂದು ತಿಂಗಳೊಳಗೆ ಇನ್ನು ತೊಂಬತ್ತೊಂಭತ್ತು ಜನ ಹೀಗೆಯೇ ಹುಟ್ಟಿದರು. ಈ ನೂರು ಜನ ಗಂಡು ಮಕ್ಕಳಲ್ಲದೆ ದುಶ್ಯಲೆ ಎಂಬ ಒಬ್ಬ ಮಗಳೂ ಹುಟ್ಟಿದಳು.

ಪರ್ವ ಕಾದಂಬರಿಯಲ್ಲಿ ಗಾಂಧಾರಿಗೆ ಒಟ್ಟು ಹದಿನಾಲ್ಕು ಗಂಡು ಮಕ್ಕಳು ಹಾಗೂ ಒಬ್ಬ ಹೆಣ್ಣು ಮಗಳು ಹುಟ್ಟಿದಳು. [14]"ಕುರುಡುದೊರೆ ಮದುವೆಯಾದ ಗಾಂಧಾರಿಯಲ್ಲಿ ಹದಿನೈದು ಮಕ್ಕಳನ್ನು ಪಡೆದನು. ಮದುವೆಯ ನಂತರ ಹೆಣ್ಣಿನ ರುಚಿಕಂಡ ಕುರುಡು ದೊರೆ ಅನೇಕ ದಾಸಿಯರನ್ನು ಭೋಗಿಸಿದ ಇದರಿಂದ ಎಂಬತ್ತಾಮು ಮಕ್ಕಳು ಹುಟ್ಟಿದರು" ಗಾಂಧಾರಿ ಒಟ್ಟು ನೂರೊಂದು ಮಕ್ಕಳನ್ನು ಜನ್ಮ ನೀಡಲು ಸಾಧ್ಯವಿಲ್ಲ. ತುಪ್ಪದ ಗಡಿಗೆಯಲ್ಲಿ ಭ್ರೂಣದ ಚೂರುಗಳನ್ನಿಡುವುದರಿಂದ ಅವು ಜೀವತಳೆದು ಮಗುವಾಗೂವುದು ಅವಾಸ್ತವಿಕ ಸಂಗತಿ. ದಾಸಿಯರಲ್ಲಿ ಹುಟ್ಟಿದ ಮಕ್ಕಳು ಸಹ ಕೌರವರೆನಿಸಿಕೊಳ್ಳಲು. ವ್ಯಾಸರು ಇವರೆಲ್ಲ ಗಾಂಧಾರಿಯ ಮಕ್ಕಳು ಎಂದು ನಿರೂಪಿಸಿರಬಹುದು. ದಾಸಿಯರಲ್ಲಿ ಧೃತರಾಷ್ಟ್ರನಿಗೆ ಹುಟ್ಟಿದ ಮಕ್ಕಳು ಸೂತರಾಗುತ್ತಾರೆ. ಕೌರವರಾಗುವುದಿಲ್ಲ ಎಂಬ ಕಾರಣಕ್ಕಾಗಿ ಅವರೆಲ್ಲ ಮಹಾರಾಣಿ ಗಾಂಧಾರಿಯಲ್ಲಿ ಹುಟ್ಟಿದವರು ಎಂದು ಚಿತ್ರಿಸಿರಬೇಕು. ಒಂದು ಹೆಣ್ಣು ನೂರೆಂದು ಮಕ್ಕಳನ್ನು ಹೆರಲು ಸಾಧ್ಯವಿಲ್ಲ. ಕೌರವರು ತಮ್ಮ ಸೈನ್ಯಾಬಲವನ್ನು ಹೆಚ್ಚಿಸಿಕೊಳ್ಳಲು ಧೃತರಾಷ್ಟ್ರನಿಗೆ ದಾಸಿಯರಲ್ಲಿ ಹುಟ್ಟಿದ ಎಲ್ಲಾ ಮಕ್ಕಳನ್ನು ಕೌರವರೆಂದು ಒಪ್ಪಿಕೊಂಡರು. ಗಾಂಧಾರಿ ಎರಡು ವರ್ಷ ತುಂಬುತ್ತ ಬಂದರು ಹೆರಲಿಲ್ಲ ಎಂಬುದು ಅವಾಸ್ತವ ಸಂಗತಿಯಾಗಿದೆ. ಒಂದು ಹೆಣ್ಣು ನವ ಮಾಸ ತುಂಬಿದ ಮೇಲೆ ಮಗುವನ್ನು ಹೆರುತ್ತಾಳೆ. ಅಂದರೆ ಗಾಂಧಾರಿ. ಕುಂತಿಗೆ ಧರ್ಮರಾಜ ಹುಟ್ಟುವ ಸಮಯದಲ್ಲಿ ಅವಳು ಬಸುರಿಯಾಗಿರಲಿಲ್ಲ. ಆದಾದ ನಂತರ ಅವಳು ಭೀಮನ ಜನನ ಸಮಯದಲ್ಲಿ ತಾನು ಸಹ ದುರ್ಯೋಧನನಿಗೆ ಜನ್ಮ ನೀಡಿದ್ದರಿಂದ ಅವರಿಬ್ಬರು ಒಂದೇ ವಯಸ್ಸಿನವರಾದವರು ಎಂದು ಹೇಳಬಹುದು.

ಒಟ್ಟಾರೆಯಾಗಿ ಪರ್ವ ಕಾದಂಬರಿಯಲ್ಲಿ ಲೇಖಕರು ಸಾಮಾನ್ಯನ ಮೂಢನಂಬಿಕೆಯಿಂದ ಜಡನಿದ್ದೆಯನ್ನು ಕಳೆದು ಮಹಾಭಾರತವೆಂದರೆ ಇಲ್ಲದ ನಂಬಿಕೆ ಇಟ್ಟುಕೊಳ್ಳುವ ಬದಲು ನಮ್ಮಂತಹ ವ್ಯಕ್ತಿಗಳದೇ ಆದ ಜೀವನದ ಕಥೆ. ದ್ವಾಪರಯುಗದ ಅಸಮಾನ್ಯ ದೈವಿಕ ವ್ಯಕ್ತಿಗಳು ನಮ್ಮಂತಹ ಸಾಮಾನ್ಯ ಮಾನವರೇ. ನಮಗೆ ನಿಕಟವಾದವರು ಎಂದು ಕಾದಂಬರಿಕಾರರು ತೋರಿಸಿಕೊಟ್ಟಿದ್ದಾರೆ. ಕೃತಿ ರಚನೆಗೆ ಮೊದಲು ಮಹಾಭಾರತದ ಅನೇಕ ಮಹತ್ವದ ಘಟನೆಗಳು ನಡೆದ ಸ್ಥಳಗಳಿಗೆ ಬೇಟಿಕೊಟ್ಟು

14. ಯುಗಸಾಕ್ಷಿ, ಪುಟ-218

ಮಾಹಿತಿ ಸಂಗ್ರಹಿಸಿ ಮಹಾಭಾರತದ ಕಥೆಯಲ್ಲಿರುವ ಮಿಥ್‌ಗಳನ್ನು ಒಡೆದು ವಾಸ್ತವವಾಗಿ ಹಾಗೂ ತಾತ್ವಿಕ ನೆಲೆಯಲ್ಲಿ ಕಾದಂಬರಿಯನ್ನು ನಿರೂಪಿಸಿದ್ದಾರೆ. ಮಹಾಭಾರತದ ಪಾತ್ರಗಳನ್ನಷ್ಟೇ ತೆಗೆದುಕೊಂಡು ಇಂದಿನ ಸಾಮಾಜಿಕ ಮುಖದಲ್ಲಿ ಅಧ್ಯಯನ ಮಾಡುವುದು. ಅದರ ಹಿನ್ನೆಲೆಯಲ್ಲಿ ಅದು ಅಂದು ನಡೆದಿದ್ದರೆ ಹೇಗೆ ನಡೆದಿರಬಹುದು ಎನ್ನುವುದನ್ನು ಊಹಿಸುವುದು. ಮಾಹಾಭಾರತದ ಕಥೆಗಳನ್ನು ಬಳಸಿಕೊಂಡು ಅದು ಮಿಥ್ ಆಗದಂತೆ ಹೀಗೆ ಹೇಳಬಹುದು. ಅನ್ನುವ ದಿಸೆಯಲ್ಲಿ ಕೃತಿಯನ್ನು ತಾತ್ತ್ವಿಕ ನೆಲೆಯಲ್ಲಿ ಚಿತ್ರಿಸಿದ್ದಾರೆ.

ಉಪ ಸಂಹಾರ

ಭೈರಪ್ಪನವರನ್ನು ನೆನೆದಾಗ ನಮ್ಮ ಕಣ್ಣೆದುರಿಗೆ ಮೂಡುವುದು ಸ್ವಪ್ರಯತ್ನದಿಂದ ಸಾಹಿತ್ಯ ಸಾಧನೆಯ ಉತ್ತುಂಗ ಶಿಖರವನ್ನು ಏರಿದ ಮೇರು ಸಾಹಿತಿಯ ಚಿತ್ರ. ಈ ದೃಷ್ಟಿಯಲ್ಲಿ ಅವರು ನಮ್ಮ ಅಪರೂಪದ ಸಾಹಿತಿಗಳಲ್ಲಿ ಒಬ್ಬರು. ಬರಹ ಅವರ ಪಾಲಿಗೆ ವೃತ್ತಿಯಾಗದೆ. ಮನೋಪ್ರವೃತ್ತಿಯಾಗಿರುವುದು ವಿಶೇಷದ ಸಂಗತಿ. ಅವರ ಯಾವುದೇ ಮಹತ್ವದ ಕೃತಿಯನ್ನು ತೆಗೆದುಕೊಂಡರೂ ಅದರಲ್ಲಿ ಎದ್ದುಕಾಣುವ ಸಂಗತಿಯೆಂದರೆ. ಅವರ ವ್ಯಾಪಕವಾದ ಅಧ್ಯಯನ. ಆಳವಾದ ಶೋಧನೆ. ಸರ್ವಾಂಗೀಣ ಸಂಶೋಧನೆ ಮತ್ತು ಇವೆಲ್ಲಕ್ಕೂ ಸೃಜನಾತ್ಮಕ ಕಲೆಯ ಮೂಲಕ ನಿರೂಪಿಸುವ ಪ್ರತಿಭಾವಂತರು. ಇವರು 'ಪರ್ವ'ದಂಥ ಕೃತಿಯ ರಚನೆಯ ಸಂದರ್ಭದಲ್ಲಿ ಅವರು ಕೈಗೊಂಡ ಪ್ರವಾಸ ಬಹುಪತ್ನಿತ್ವದ ಪದ್ಧತಿ ಇಂದಿಗೂ ಉಳಿದುಕೊಂಡು ಬಂದಿರುವಂತಹ ಹಿಮಾಲಯದ ತಪ್ಪಲಿನ ಸಮುದಾಯಗಳೊಂದಿಗೆ ನಡೆಸಿದ ವಾಸದಿಂದ ಕಾದಂಬರಿಯಲ್ಲಿ ನೈಜ ಮತ್ತು ವಾಸ್ತವಿಕ ಸನ್ನಿವೇಶಗಳನ್ನು ಚಿತ್ರಿಸಲು ಸಹಾಯಕವಾಗಿದೆ. ಈ ಬೃಹತ್ ಕಾದಂಬರಿಯಲ್ಲಿ ಜೀವನದ ಅನಿವಾರ್ಯ ಪರಿಸ್ಥಿತಿಗಳು ಮಾನಸಿಕ ತುಮುಲ. ಧರ್ಮಾಧರ್ಮಗಳ ವಿಶ್ಲೇಷಣೆ ಎಲ್ಲಕ್ಕಿಂತ ಮಿಗಿಲಾಗಿ ಮೃತ್ಯುವಿನ ರಹಸ್ಯ ಇವೆಲ್ಲವನ್ನು ತುಂಬಾ ಮನೋಜ್ಞವಾಗಿ ಚಿತ್ರಿಸಲಾಗಿದೆ.

ಪರ್ವವನ್ನು ಓದಿಗಾಗ ಸಹಜವಾಗಿ ಇರಾವತಿಕರ್ವೆಯವರ 'ಯುಗಾಂತ' ನೆನೆಪಾಗುತ್ತದೆ. ಏಕೆಂದರೆ ಭೈರಪ್ಪನವರು ಪರ್ವ ರಚಿಸುವಾಗ ಕರ್ವೆ ರವರ ಯುಗಾಂತವು ಪ್ರಭಾವ ಬೀರಿದೆ ಎಂದರೆ ತಪ್ಪಾಗಲಾರದು. ಯುಗಾಂತದಲ್ಲಿ ಕರ್ವೆಯವರು ಮುಖ್ಯವಾಗಿ ಎರಡು ಸಂಗತಿಗಳಿಗೆ ಹೆಚ್ಚು ಗಮನ ನೀಡಿದ್ದಾರೆ. ಒಂದು ಭೀಷ್ಮ ಪಾತ್ರ ವಿಶ್ಲೇಷಣೆ. ಮತ್ತೊಂದು ಮಹಾಭಾರತದ ಕುಂತಿ. ಮಾದ್ರಿ. ದ್ರೌಪದಿ ಕುರಿತು ಸ್ತ್ರೀ ಪಾತ್ರಗಳು ಅನುಭವಿಸಿದ ವೇದನೆ ಅಪಾರವಾದುದು ಎಂಬ ಅಂಶದ ಬಗ್ಗೆ ಗಮನ ಸೆಳೆಯುತ್ತಾರೆ. 'ಪರ್ವ'ದಲ್ಲೂ ಇದು ಮುಖ್ಯವಾಗುತ್ತದೆ. ಪರ್ವದಲ್ಲಿ ಮಾನವ ಸಂಬಂಧದ ಸ್ವರೂಪದ ಶೋಧನೆ ಸಹ ಮುಖ್ಯವಾಗಿ ಎರಡು ನೆಲೆಯಲ್ಲಿದೆ. ಒಂದು 'ಹುಟ್ಟು' ಮತ್ತೊಂದು 'ಸಾವು' ಇಲ್ಲಿನ ಬಹುಪಾಲು ಸಂಬಂಧಗಳು ಈ ನೆಲೆಯಲ್ಲಿ ಗ್ರಹಿಸಲ್ಪಟ್ಟಿದೆ. ದ್ರೌಪದಿ.ಕುಂತಿ. ಮಾದ್ರಿ. ಗಾಂಧಾರಿ ಮೊದಲಾದ ಪಾತ್ರಗಳು ಅನುಭವಿಸುವ ಒಳತೋಟಿ. ಮುಖ್ಯವಾಗಿ ಗಂಡು ಹೆಣ್ಣಿನ ಸಂಬಂಧಕ್ಕೆ ಸಂಬಂಧಿಸಿದುದು. ಕಾದಂಬರಿಯ ಬಹುಭಾಗ ಈ ಒಳತೋಟಿಯ ವಿಶ್ಲೇಷಣೆಯ ಚಿತ್ರಣವಾಗಿದೆ. ಭೈರಪ್ಪ ನವರ ಒತ್ತು ಸಹ ಇಂತಹ ಒಳತೋಟಿಯ ಕಡೆಗೆ ಇದೆ. ನಿರೂಪಣಾ ವಿಧಾನವನ್ನು ಹೊರತುಪಡಿಸಿ ಪಾತ್ರಗಳ ಅಂತರಂಗ ಪರಿವೀಕ್ಷಣೆಯ ವಿಧಾನವನ್ನು ಅನುಸರಿಸುವ ತಂತ್ರ ಸಹ ಇದನ್ನೇ ಪೋಷಿಸುತ್ತದೆ.

[1] "ಪರ್ವದಲ್ಲಿ ಚರ್ಚಿಸಲಾದ ಮುಖ್ಯ ಪ್ರಶ್ನೆಯೆಂದರೆ ಸಮಾಜ ವ್ಯವಸ್ಥೆಯ ಪರಿವರ್ತನೆಯ ಘಟ್ಟದಲ್ಲಿ 'ಹೆಣ್ಣಿನ ಸ್ಥಾನ' ಶಲ್ಯನ ಮೊಮ್ಮಗಳ ಋತುಚಕ್ರ ವೈಫಲ್ಯದ ಕಥನದಿಂದ ಪ್ರಾರಂಭವಾದ್ದು.

1. ಪರ್ವ: ಒಂದು ಸಮೀಕ್ಷೆ, ಪುಟ-35

ಯುದ್ಧದ ಉತ್ಕ್ರಾಂತ ಸ್ಥಿತಿಯಲ್ಲಿ ಸೈನಿಕರಿಗೆ ಬಲತ್ಕಾರಕ್ಕೆ ಒಳಗಾಗಿ ಗರ್ಭಿಣಿಯರಾದ ಹೆಂಗಸರ ಚಿತ್ರದಲ್ಲಿ ಮುಗಿಯುತ್ತದೆ. ಈ ನಡುವೆ ಎಷ್ಟೋ ಹೆಣ್ಣುಗಳ ಕಥನ ಬಂದು ಹೋಗುತ್ತದೆ. ವಿವಿಧ ಲಯಗಳ ಮೇಳನದ ದನಿಯಿಂದ ಹುಟ್ಟುವ ವಿಕೃತ ಭಾವವೊಂದು ಕಾದಂಬರಿಯಲ್ಲಿ ಸ್ಥಾಯಿಯಾಗುವುದು ನಿಯೋಗ, ಬಹುಪತಿತ್ವ, ಬಹುಪತ್ನಿತ್ವ, ಸ್ತ್ರೀ ಪ್ರಧಾನ ಬುಡಕಟ್ಟು, ಮನುಷ್ಯ-ರಾಕ್ಷಸ ಸಂಬಂಧದ ಜನನ, ಬ್ರಹ್ಮಚರ್ಯ ಹೀಗೆ ಹಲವು ಬಗೆಯ ಜೀವನ ಕ್ರಮಗಳ ಪರಸ್ಪರ ಮುಖಾಮುಖಿಯಿಂದ ಯುದ್ಧ ಸ್ಫೋಟಗೊಂಡಿದೆ. ನಿರ್ಣಾಯಕ ಹಂತವೊಂದನ್ನು ಕಾದಂಬರಿ ತಲುಪಿರುವುದನ್ನು ಕಾಣಬಹುದು.

ಪರ್ವದಲ್ಲಿನ ಸ್ತ್ರೀ ಪಾತ್ರಗಳು ಪೂರ್ತಿ ಹೆಣ್ತನ ತುಂಬಿಕೊಂಡು ನಿಂತರೆ ಗಂಡಸರು ಪೂರ್ತಿ ಗಂಡಸರಾದರೆ ನರಳುತ್ತಾರೆ. ಇಲ್ಲಿ ಗಂಡಸು ಹೆಣ್ಣನ್ನು ತೃಪ್ತಿಪಡಿಸುವುದು ಸಾಧ್ಯವಿಲ್ಲ. ಈ ಅಸಾಧ್ಯ ಚಿಂತೆಯಲ್ಲೇ ಗಂಡು ಜೀವನವನ್ನು ಕೊನೆಗಳಸುತ್ತಾನೆ. ಅಂಥ ಸಾವಿನ ಚಿಂತೆಯಲ್ಲೇ ಗಂಡು ಜೀವನವನ್ನು ಕೊನೆಗೊಳಸುತ್ತಾನೆ. ಅಂಥ ಸಾವಿನ ಚಿಂತೆ ಲೇಖಕರನ್ನು ಕಾಡಿತ್ತು ಪರ್ವ ಪ್ರಕಟವಾದ ಮೇಲೆ ಒಮ್ಮೆ ಭೈರಪ್ಪ ನವರನ್ನು ಕಂಡ 'ಬನ್ನಂಜೆ ಗೋವಿಂದಾಚಾರ್ಯರು' ಏನನ್ನಾದರು ಬರೆದುಕೊಡಿ ಎಂದು ಕೇಳದಾಗ [2] "ಪರ್ವ ಬರೆದ ಮೇಲೆ ನನ್ನನ್ನು ಆವರಿಸಿಕೊಂಡಿರೋದು ಬರಿಯ ಸಾವಿನ ಚಿತ್ರ ಏನು ಮಾಡಿದರೂ ಕೊನೆಗೊಮ್ಮೆ ನಾವು ಸೇರಲೇಬೇಕಾದ ತಾಣ ಅದು ಅದರ ಹಿನ್ನೆಲೆಯಲ್ಲಿ ಬದುಕೆಲ್ಲ ಶೂನ್ಯ ಅನ್ನಿಸ್ತಾ ಇದೆ. ಸದ್ಯ ನಾನೇನೂ ಬರೆಯಲಾರೆ. I Feel Empty" ಎಂದು ತಮ್ಮ ಅನುಭವವನ್ನು ಹೇಳದರು. ಒಟ್ಟಾರೆಯಾಗಿ ಭೈರಪ್ಪನವರು ಮಹಾಭಾರತದ ಕಥೆಯನ್ನು ಆಧರಿಸಿ 'ಪರ್ವ' ಕಾದಂಬರಿಯನ್ನು ರಚಿಸಿದ್ದರು. ಸಹ ಇದು ಸ್ವತಂತ್ರ ಕೃತಿಯಾಗಿ ಯಶಸ್ಸನ್ನು ಪಡೆದಿರುವುದಲ್ಲಿ ಸಂಶಯವಿಲ್ಲ.

2. ಪರ್ವ: ಒಂದು ಸಮೀಕ್ಷೆ, ಪುಟ-84

ಆಕರ ಗ್ರಂಥಗಳು

(1) ಪರ್ವ : ಎಸ್.ಎಲ್.ಭೈರಪ್ಪ
ಸಾಹಿತ್ಯ ಭಂಡಾರ, ಜಂಗಮ ಮೇಸ್ತ್ರಿಗಲ್ಲಿ,
ಬಳೇಪೇಟೆ, ಬೆಂಗಳೂರು
ಹದಿನೇಳನೇ ಮುದ್ರಣ: 2015

(2) ಯುಗಸಾಕ್ಷಿ ಭೈರಪ್ಪರ ಕೃತಿಗಳ ಅವಲೋಕನ : ಎಲ್.ವಿ.ಶಾಂತಕುಮಾರಿ
ಸಾಹಿತ್ಯ ಭಂಡಾರ, ಜಂಗಮ ಮೇಸ್ತ್ರಿಗಲ್ಲಿ,
ಬಳೇಪೇಟೆ, ಬೆಂಗಳೂರು
ಒಂದನೇ ಮುದ್ರಣ: 2009

(3) ಭೈರಪ್ಪಾಭಿನಂದನಾ : ಸಂ|| ಕೊಂಡಜ್ಜಿ ಕೆ.ವೆಂಕಟೇಶ್
ಕೊಂಡಜ್ಜಿ ಮುದ್ರಣ ಮತ್ತು ಪ್ರಕಾಶನ
205, 7ನೇ ಅಡ್ಡರಸ್ತೆ, 1ನೇ (ಎನ್) ಬ್ಲಾಕ್)
ರಾಜಾಜಿನಗರ, ಬೆಂಗಳೂರು-560 010 2015
ದ್ವಿತೀಯ ಮುದ್ರಣ: 2005

(4) ಎಸ್.ಎಲ್. ಭೈರಪ್ಪನವರ ಪರ್ವ ಒಂದು ಸಮೀಕ್ಷೆ : ಸಂ|| ಡಾ.ವಿಜಯಾ
ಇಳಾ ಪ್ರಕಾಶನ
ಚಾಮರಾಜಪೇಟೆ, ಬೆಂಗಳೂರು-18
ಎರಡನೇ ಮುದ್ರಣ 1999

(5) ಯುಗಾಂತ : ಇರಾವತೀ ಕರ್ವೇ (ಮರಾಠಿ ಮೂಲ)
(ಕನ್ನಡ ಅನುವಾದ: ಸರಸ್ವತಿ ಗಜಾನನ ರಿಸಬೂಡ)
ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ,
ಬೆಂಗಳೂರು
ಮುದ್ರಣ:2007

(6) ಎಸ್.ಎಲ್.ಭೈರಪ್ಪ ಬದುಕು-ಬರಹ : ಪ್ರೊ.ನಾಗರಾಜ್ ನೀರಗುಂದ
ಅಪೂರ್ವ ಸಾಹಿತ್ಯ ಪ್ರಕಾಶನ
ಜಯನಗರ 1ನೇ ಬ್ಲಾಕ್ ಪೂರ್ವ,
ಬೆಂಗಳೂರು 560 011
ಮೊದಲ ಮುದ್ರಣ:1999

(7) ಡಾ|| ಎಸ್.ಎಲ್‌ಭೈರಪ್ಪನವರ ಪ್ರಕಾಶನ ಕಾದಂಬರಿಗಳಲ್ಲಿ ಕೌಟುಂಬಿಕ ಸಮಸ್ಯೆಗಳು : ಡಾ|| ಪ್ರಧಾನ ಗುರುದತ್ತ, ಗೌರಿ ಸುಂದರ್ ಸುಂದರ
ಚಿತ್ರಶ್ರೀ, ನಂ.43, ಕಲಾಮಂದಿರ, ಅ.ನ.ಸು.ರಸ್ತೆ
5ನೇ ತಿರುವು, ಹನುಮಂತನಗರ,
ಬೆಂಗಳೂರು-560 019
ಮೊದಲ ಮುದ್ರಣ: 2013

(8) ದಿನಪತ್ರಿಕೆ : ಜೂನ್ 18, 2016 ರ ಪ್ರಜಾವಾಣಿ ದಿನಪತ್ರಿಕೆ

ಪರಾಮರ್ಶನ ಗ್ರಂಥಗಳು

(1) ಡಾ.ಎಸ್.ಎಲ್.ಭೈರಪ್ಪನವರ ಕಾದಂಬರಿಗಳಲ್ಲಿ ಪ್ರಮುಖ ಪಾತ್ರಗಳು : ಸಂ॥ ಗೌರಿಸುಂಧರ್
ಸುಂದರ್ ಪ್ರಕಾಶನ
ನಂ.43, 5ನೇ ತಿರುವು, ಅ.ನ.ಸು ರಸ್ತೆ,
ಹನುಮಂತನಗರ,
ಬೆಂಗಳೂರು-560 019.
ಮೊದಲ ಮುದ್ರಣ-2015

(2) ಭೈರಪ್ಪನವರ ಕಾದಂಬರಿಗಳು ಒಂದು ಸಮಾಲೋಚನೆ : ಎಸ್.ರಾಮಸ್ವಾಮಿ
ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್
3/3, ಹೊಸ ತರಗುಪೇಟೆ,
ಬೆಂಗಳೂರು-560 002,
ಮೊದಲ ಮುದ್ರಣ-2014

(3) ವಚನ ಭಾರತ : ಎ.ಆರ್.ಕೃಷ್ಣಶಾಸ್ತ್ರೀ
ಶ್ರೀ ಸದ್ಗುರು ಪ್ರಿಂಟರ್ಸ್,
ರಾಮಾನುಜ ರಸ್ತೆ,
ಮೈಸೂರು-570 004
ಹನ್ನೊಂದನೇ ಮುದ್ರಣ-2003

(4) ವಚನರೂಪ ಮಹಾಭಾರತ : ಛೀ.ಶಂ.ಪೂಜಾರ
ಮೆ॥ ಪಿ.ಸಿ.ಶಾಖಾದಿಮಠ
ಬುಕ್ ಡಿಪೋ, ಪಬ್ಲಿಶರ್ಸ್,
ಗದಗ.

(5) ವ್ಯಾಸಭಾರತ ಭಿನ್ನ ವಿನ್ಯಾಸ ವೈಚಾರಿಕ ವಿಶ್ಲೇಷಣೆ : ಡಾ॥ ಆರ್.ಆರ್.ಪಾಂಗಾಳ
ನಾಗಶಂಕರ ಪ್ರಕಾಶನ
21/1, 3ನೇ ಕ್ರಾಸ್, ರಂಗರಾವ್ ರಸ್ತೆ
ಬಸವನಗುಡಿ
ಬೆಂಗಳೂರು-560 004,
ಮೊದಲ ಮುದ್ರಣ-2005